# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 18 ಗುರುವಾರ 2023

ಸಂಪುಟ: 44 | ಸಂಚಿಕೆ: 32 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




# ಸಿದ್ದು–ಡಿಕೆಶಿ ಬಿಗಿಪಟ್ಟು; ಕಾಂಗ್ರೆಸ್ ವರಿಷ್ಠರಿಗೆ ಕಗ್ಗಂಟು

**●ಮೊದಲ ಅವಧಿಗೆ ನನ್ನೇ ಮುಖ್ಯಮಂತ್ರಿ ಮಾಡಿ; ಇಲ್ಲ ನೀವೇ ಮುಖ್ಯಮಂತ್ರಿಯಾಗಿ: ಖರ್ಗೆಗೆ ಡಿಕೆಶಿ ಆಗ್ರಹ ●ರಾಜಸ್ಥಾನ, ಛತ್ತೀಸ್‌ಗಢದಲ್ಲಿ ನೀವು ಕೊಟ್ಟ ಮಾತು ಉಳಿಸಿಕೊಂಡಿಲ್ಲ; ರಾಹುಲ್‌ಗೆ ಕೆಪಿಸಿಸಿ ಅಧ್ಯಕ್ಷ ಡಿಕೆಶಿ ಖಡಕ್ ಜವಾಬು ●ಇಬ್ಬರ ಕಿತ್ತಾಟದಲ್ಲಿ ಮೂರನೆಯವರಿಗೆ ಲಾಭವಾದರೂ ಅಚ್ಚರಿ ಇಲ್ಲ**


**ಬೆಂಗಳೂರು, ಮೇ 17 (ಕೆಎಂಶಿ)–ಕರ್ನಾಟಕದ ಮುಖ್ಯಮಂತ್ರಿ ಸ್ಥಾನಕ್ಕಾಗಿ ಹಿರಿಯ ನಾಯಕರಾದ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ನಡುವಿನ ಬಿಗಿಪಟ್ಟು ಮೂರನೆಯವರಿಗೆ ಲಾಭವಾಗುವ ಸಾಧ್ಯತೆ ಕಂಡುಬಂದಿದೆ.**

ಕಳೆದ ಐದು ದಿನಗಳಿಂದ ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ದೆಹಲಿ ನಾಯಕರು ನಡೆಸಿದ ಕಸರತ್ತು ಬುಧವಾರವೂ ಸಹ ಫಲಪ್ರದವಾಗಲಿಲ್ಲ. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕಾಗಿ ಪೈಪೋಟಿ ನಡೆಸುತ್ತಿರುವುದು ವರಿಷ್ಠರಿಗೆ ತಲೆನೋವಾಗಿರುವುದಲ್ಲದೆ, ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರೇ ಈ ಬಗ್ಗೆ ತೀರ್ಮಾನ ಕೈಗೊಳ್ಳುತ್ತಾರೆ ಎಂದು ರಾಜ್ಯದ ಉಸ್ತುವಾರಿ ಸುರ್ಜೇವಾಲ ಪ್ರಕಟಿಸಿದ್ದಾರೆ. ಅಷ್ಟೇ ಅಲ್ಲ, ದೆಹಲಿಯಲ್ಲಿ ತಮ್ಮ ನಾಯಕರ ಪರವಾಗಿ ಲಾಬಿ ಮಾಡುತ್ತಿರುವ ಪಕ್ಷದ ನಾಯಕರು ರಾಜಧಾನಿ ಬಿಡುವಂತೆ ಎಲ್ಲಾ ಮುಖಂಡರಿಗೆ ಸುರ್ಜೇವಾಲ ಖಡಕ್ ಎಚ್ಚರಿಕೆ ನೀಡಿದ್ದಾರೆ. ಸಿದ್ದರಾಮಯ್ಯ ಅವರನ್ನು ಸಿಎಲ್‌ಪಿ ನಾಯಕರನ್ನಾಗಿ ವರಿಷ್ಠರು ಆಯ್ಕೆ ಮಾಡಿದ್ದಾರೆ.

ಅವರು ಗುರುವಾರ ಮಧ್ಯಾಹ್ನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುತ್ತಾರೆ ಎಂಬ ವರದಿಗಳು ರಾಷ್ಟ್ರಮಟ್ಟದ ವಾಹಿನಿಗಳಲ್ಲಿ ಬಿತ್ತರವಾಗುತ್ತಿದ್ದಂತೆ ಸಿಟ್ಟಿಗೆದ್ದ ಶಿವಕುಮಾರ್ ಬೆಂಬಲಿಗರು ರಾಹುಲ್ ಮತ್ತು ಖರ್ಗೆಯವರನ್ನು ತರಾಟೆಗೆ ತೆಗೆದುಕೊಂಡರು ಎನ್ನಲಾಗಿದೆ. ಸಿದ್ದರಾಮಯ್ಯ ಸಿಎಲ್‌ಪಿ ನಾಯಕರಾಗಿ ಆಯ್ಕೆಯಾಗಿದ್ದಾರೆ ಎಂಬ ಸುದ್ದಿ ಹೊರಬರುತ್ತಿದ್ದಂತೆ ರಾಹುಲ್‌ಗಾಂಧಿ, ಶಿವಕುಮಾರ್ ಅವರನ್ನು ತಮ್ಮ



ನಿವಾಸಕ್ಕೆ ಕರೆಸಿಕೊಂಡು ಸುದೀರ್ಘ ಚರ್ಚೆ ನಡೆಸಿದರು. ಆನಂತರ ಅವರ ಸಹೋದರ ಸಂಸದ ಸುರೇಶ್ ಅವರನ್ನು ಕರೆಸಿಕೊಂಡ ರಾಹುಲ್, ಇಬ್ಬರೊಟ್ಟಿಗೆ ಚರ್ಚೆ ನಡೆಸಿದರು. ಶಿವಕುಮಾರ್ ಹಾಗೂ ಸುರೇಶ್ ಮುಖ್ಯಮಂತ್ರಿ ಸ್ಥಾನದ ವಿಚಾರದಲ್ಲಿ ತಾವು ಹಿಂದೆ ಸರಿಯುವುದಿಲ್ಲ ಎಂದು ಬಿಗಿಪಟ್ಟು ಹಿಡಿದರು. ಒಂದು ವೇಳೆ ನಮ್ಮ ಮೇಲೆ ಭ್ರಷ್ಟಾಚಾರದ ಆರೋಪದ ಪ್ರಕರಣ ಸಿಬಿಐ ತನಿಖೆ ವಿಚಾರದಲ್ಲಿ ನಿಮಗೆ ಇರಿಸುಮುರಿಸು



## ಒಂದೆರಡು ದಿನದಲ್ಲಿ ಮುಖ್ಯಮಂತ್ರಿ ಆಯ್ಕೆ

ನವದೆಹಲಿ: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಇಂದು ಮಧ್ಯಾಹ್ನ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭೇಟಿಯಾದ ಬಳಿಕ ರಾಷ್ಟ್ರ ರಾಜಧಾನಿಯಲ್ಲಿ ಕರ್ನಾಟಕದ ನೂತನ ಮುಖ್ಯಮಂತ್ರಿಯನ್ನಾಗಿ ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ ವರಿಷ್ಠರು ಆಯ್ಕೆ ಮಾಡಿದ್ದಾರೆ ಎಂಬ ದಟ್ಟ ವದಂತಿ ಹರಡಿತು. ಕೂಡಲೇ ಇದಕ್ಕೆ ಸುದ್ದಿಗೋಷ್ಠಿ ಮೂಲಕ ಸ್ಪಷ್ಟನೆ ನೀಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಕರ್ನಾಟಕದ ಉಸ್ತುವಾರಿ



▶ 8ನೇ ಪುಟಕ್ಕೆ



ಆಗುತ್ತಿದೆ ಎನ್ನುವುದಾದರೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಿ. ನಾವು ಅವರ ಕೈಕೆಳಗೆ ಕೆಲಸ ಮಾಡುತ್ತೇವೆ. ಮುಂದಿನ ಲೋಕಸಭಾ ಚುನಾವಣೆಗೂ ಒಂದು ಸಂದೇಶ ಹೋಗುತ್ತದೆ. ಇದರಿಂದ ಪಕ್ಷಕ್ಕೆ ಲಾಭವಾಗುತ್ತದೆ ಎಂದು ರಾಹುಲ್ ಅವರ ಗಮನಕ್ಕೆ ತಂದರು. ಅಷ್ಟೇ ಅಲ್ಲ ಸಿದ್ದರಾಮಯ್ಯ ಅವರನ್ನು ಸಿಎಲ್‌ಪಿ ನಾಯಕರನ್ನಾಗಿ ಆಯ್ಕೆ ಮಾಡಲು ಯಾವುದೇ ಕಾರಣಕ್ಕೂ ನಾವು ಸಮ್ಮತಿ ನೀಡುವುದಿಲ್ಲ ಎಂದು ಬಿಗಿಪಟ್ಟು ಹಿಡಿದ ನಂತರ ದಿನದ ಇಡೀ ಚಿತ್ರಣವೇ ಬದಲಾವಣೆಗೊಂಡು ಕರ್ನಾಟಕದ ನಾಯಕತ್ವದ ಆಯ್ಕೆಯನ್ನು ರಾಹುಲ್, ಖರ್ಗೆ ಅಂಗಳಕ್ಕೆ ಹಾಕಿ ಕೈತೊಳೆದುಕೊಂಡಿದ್ದಾರೆ. ಇದರ ನಡುವೆ ಎಐಸಿಸಿಯ ಮಾಜಿ ಪ್ರಧಾನ ಕಾರ್ಯದರ್ಶಿ ಹಾಗೂ ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ರಾಹುಲ್ ಮತ್ತು ಖರ್ಗೆಯವರನ್ನು ಭೇಟಿ ಮಾಡಿ, ಸಿದ್ದರಾಮಯ್ಯ ಸಿಎಲ್‌ಪಿ ನಾಯಕರಾಗುವುದನ್ನು ಬಲವಾಗಿ ವಿರೋಧಿಸಿದರು. ನಾನು ಶಿವಕುಮಾರ ಪರ ವಾದ ಮಾಡುತ್ತಿಲ್ಲ. ನೀವು ಮೂಲ ಕಾಂಗ್ರೆಸ್‌ನವರಿಗೆ ಅಧಿಕಾರ ನೀಡಿ, ಎಲ್ಲಾ ಅಧಿಕಾರವನ್ನು ಒಬ್ಬರಿಗೇ ನೀಡುತ್ತಾ ಹೋದರೆ, ಕಾರ್ಯಕರ್ತರು ಹಾಗೂ ಶಾಸಕರಿಗೆ ಸಂದೇಶ ಏನು ಹೋಗುತ್ತದೆ ಎಂದು ಪ್ರಶ್ನಿಸಿದ್ದಾರೆ. ಸಿದ್ದರಾಮಯ್ಯ ಹಿಂದುಳಿದ ವರ್ಗದ ನಾಯಕರಾಗಿದ್ದರೆ, ನಾವು ಕಳೆದ ವಿಧಾನಸಭೆ ಚುನಾವಣೆಗಿಂತ

▶ 8ನೇ ಪುಟಕ್ಕೆ



**ಬಿಚ್ಚು ನುಡಿ**
ವಿಕ್ರಂ ಮುತ್ತಣ್ಣ

**ಜನಾದೇಶ 2013**
ಕಲಿಸಿದ ಪಾಠಗಳು ಮತ್ತು ಕೊಟ್ಟ ಎಚ್ಚರಿಕೆ ■ಪುಟ–4

## ಮುಳ್ಳಯ್ಯನಗಿರಿಬೆಟ್ಟದಲ್ಲಿ ಕಂದಕಕ್ಕೆ ಕಾರು ಉರುಳಿ ಕೆ.ಆರ್.ನಗರದ ನಾಲ್ವರ ಸ್ಥಿತಿ ಗಂಭೀರ

**ಚಿಕ್ಕಮಗಳೂರು:** ಪ್ರಸಿದ್ಧ ಪ್ರವಾಸಿ ತಾಣವಾದ ಮುಳ್ಳಯ್ಯನಗಿರಿ ತಪ್ಪಲಿನಲ್ಲಿ ಚಾಲಕನ ನಿಯಂತ್ರಣ ತಪ್ಪಿದ ಕಾರು ಕಂದಕಕ್ಕೆ ಉರುಳಿ ಕೆ.ಆರ್.ನಗರದ ನಾಲ್ವರು ಗಂಭೀರವಾಗಿ ಗಾಯಗೊಂಡ ಘಟನೆ ಬುಧವಾರ ಮಧ್ಯಾಹ್ನ ಸಂಭವಿಸಿದೆ. ಕೆ.ಆರ್.ನಗರದಿಂದ ದತ್ತ ಪೀಠಕ್ಕೆ ಪ್ರವಾಸ ಬಂದಿದ್ದ ಸೀತಾರಾಮ್, ಸುಗುಣ, ಶ್ರೇಯಸ್ ಮತ್ತು ಶುಭ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡವರಾಗಿದ್ದು, ಇವರೆಲ್ಲರೂ ಚಿಕ್ಕಮಗಳೂರಿನ ಖಾಸಗಿ ಆಸ್ಪತ್ರೆಯ ತುರ್ತುನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ದತ್ತಪೀಠ ದರ್ಶನದ ನಂತರ ಮುಳ್ಳಯ್ಯನಗಿರಿಗೆ ಹೋಗಿ ಕೆ.ಆರ್.ನಗರಕ್ಕೆ ಹಿಂತಿರುಗುತ್ತಿದ್ದ ವೇಳೆ ಮುಳ್ಳಯ್ಯನಗಿರಿ ತಪ್ಪಲಿನ ಕವಿಕಲ್ ಗುಂಡಿ ಪ್ರದೇಶದಲ್ಲಿ ಚಾಲಕನ ನಿಯಂತ್ರಣ ತಪ್ಪಿದ ಕಾರು ಕಂದಕಕ್ಕೆ ಉರುಳಿ ಬೆಟ್ಟದ ಕೆಳಭಾಗದ ರಸ್ತೆಯಲ್ಲಿ ಬಿದ್ದಿದೆ. 100 ಅಡಿಗಳಷ್ಟು ಕಂದಕಕ್ಕೆ ಉರುಳಿದ ಕಾರು, ಸುಮಾರು 20 ಬಾರಿ ಪಲ್ಟಿ ಹೊಡೆದಿರಬಹುದು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ತಕ್ಷಣವೇ ಸಾರ್ವಜನಿಕರು ಕಾರಿನಲ್ಲಿ ಸಿಲುಕಿದ್ದ ಗಾಯಾಳುಗಳನ್ನು ಚಿಕ್ಕಮಗಳೂರು ಆಸ್ಪತ್ರೆಗೆ ರವಾನಿಸಿದ್ದಾರೆ. ಕಾರು ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ.

ಮುಳ್ಳಯ್ಯನಗಿರಿ ಬೆಟ್ಟವು ಚಿಕ್ಕಮಗಳೂರು ಜಿಲ್ಲೆಯ ಪ್ರಸಿದ್ಧ ಪ್ರವಾಸಿ ತಾಣವಾಗಿದ್ದು, ಇಲ್ಲಿನ ಪ್ರಕೃತಿ ಸೊಬಗು ಸವಿಯಲು ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಕಾರು ಮತ್ತು ಜೀಪ್‌ಗಳಲ್ಲಿ ಆಗಮಿಸುತ್ತಾರೆ. ದುರಂತವೆಂದರೆ ಇಲ್ಲಿನ ರಸ್ತೆ ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲ. ಬೆಟ್ಟದ ಮೇಲೆ ಇರುವ ಕಡಿದಾದ ರಸ್ತೆಯಲ್ಲಿ ಪ್ರಯಾಣಿಕರು ಜೀವವನ್ನು ಕೈಯ್ಯಲ್ಲಿ ಹಿಡಿದುಕೊಂಡೇ ಸಾಗಬೇಕಾಗುತ್ತದೆ. ಬೆಟ್ಟದ ಮೇಲೆ ನಿರ್ಮಾಣವಾಗಿರುವ ಈ ರಸ್ತೆಗೆ ತಡೆಗೋಡೆಗಳೇ ಇಲ್ಲ. ರಸ್ತೆಯ ಅಗಲವೂ ಕೂಡ ಚಿಕ್ಕದಾಗಿದ್ದು, ವಾಹನಗಳು ಎದುರು–ಬದುರಾದಾಗ ಚಾಲಕನ ನಿಯಂತ್ರಣ ತಪ್ಪಿ ವಾಹನವು ಸಾವಿರಾರು ಅಡಿ ಕಂದಕಕ್ಕೆ ಉರುಳುವ ಅಪಾಯವಿದೆ. ಈ ರಸ್ತೆಯಲ್ಲಿ ಇಂತಹ ಬಹಳಷ್ಟು ಅಪಘಾತಗಳು ಸಂಭವಿಸಿ ಜೀವ ಬಲಿಗಳಾಗಿದ್ದರೂ ಕೂಡ ಜಿಲ್ಲಾಡಳಿತವಾಗಲೀ, ಇಲ್ಲಿನ ಜನಪ್ರತಿನಿಧಿಗಳಾಗಲೀ ಯಾವುದೇ ರೀತಿಯ ಸುರಕ್ಷತಾ ಕ್ರಮ ಕೈಗೊಳ್ಳದೇ ಜನರ ಜೀವದ ಜೊತೆ ಆಟವಾಡುತ್ತಿದ್ದಾರೆ ಎಂಬ ಆರೋಪಗಳು ಕೇಳಿಬಂದಿವೆ.

## ವರುಣದಲ್ಲಿ ನನ್ನ ಸೋಲಿಗೆ ಮೇಲಿನವರು ಕಾರಣ: ಅವರನ್ನು ಚಾಮುಂಡೇಶ್ವರಿ ತಾಯಿ ನೋಡಿಕೊಳ್ಳುತ್ತಾಳೆ

### ಮಾಜಿ ಸಚಿವ ವಿ.ಸೋಮಣ್ಣ ನೋವಿನ ನುಡಿ

ಮೈಸೂರು, ಮೇ 17–ಪಕ್ಷ ಹೇಳಿದ್ದರಿಂದ ಅನಿರೀಕ್ಷಿತವಾಗಿ ವರುಣಕ್ಕೆ ಬಂದವನು ನಾನು. ಆದರೆ, ಗೋವಿಂದರಾಜನಗರ ನನ್ನ ಕ್ಷೇತ್ರ ಇದು ರಾಜ್ಯದಲ್ಲಿ ಅತ್ಯಂತ ಎತ್ತರಕ್ಕೆ ಬೆಳೆದಿರುವ ಕ್ಷೇತ್ರವಾಗಿದೆ. ಪಕ್ಷದ ನಾಯಕರು ಹೇಳಿದ್ದಕ್ಕೆ ನಾನು ಹಿಂದೆ ತಿರುಗಿ ನೋಡದೇ ಇಲ್ಲಿಗೆ ಬಂದೆ. ನನಗೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳು ಎರಡು ಕಣ್ಣುಗಳು ಇದ್ದ ಹಾಗೆ ಎಂದು ವರುಣದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಮಾಜಿ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ. ಇಂದು ಮೈಸೂರಿನ ಬಿಜೆಪಿ ಕಚೇರಿಯಲ್ಲಿ ವರುಣ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು, ಬೆಂಬಲಿಗರಿಗೆ ಏರ್ಪಡಿಸಿದ್ದ ಕೃತಜ್ಞತಾ ಸಭೆಯಲ್ಲಿ ಮಾತನಾಡಿದ ಅವರು, ಮಲೆ ಮಹದೇಶ್ವರ ನಮ್ಮ ಮನೆ ದೇವರು. ಚಾಮುಂಡೇಶ್ವರಿ ನಾನು ನಂಬಿರುವ ದೇವಿ. 2019ರ ದಸರಾವನ್ನು ಚೆನ್ನಾಗಿ ಮಾಡಲು ನನ್ನ ಅಳಿಲು ಸೇವೆ ಇದೆ. ಹಾಗೇ ಜಿಲ್ಲಾ ಉಸ್ತುವಾರಿ ಸಚಿವನಾಗಿ ಕೊರೊನಾ ಕಾಲದಲ್ಲಿ ಮೈಸೂರಿನಲ್ಲಿ ಒಂದಷ್ಟು ಒಳ್ಳೆಯ ಕೆಲಸ ಮಾಡಿದೆ.




ಈ ಎಲ್ಲಾ ಕಾರ್ಯಗಳನ್ನು ಮೆಚ್ಚಿ ವರಿಷ್ಠರು ವರುಣ ಮತ್ತು ಚಾಮರಾಜನಗರದಲ್ಲಿ ಸ್ಪರ್ಧಿಸುವಂತೆ ಸೂಚಿಸಿದರು. ಮೋದಿ ಅವರು ಇನ್ನೂ 10 ವರ್ಷ ಪ್ರಧಾನಿಯಾಗಬೇಕು ಎಂದು ಇಡೀ ವಿಶ್ವವೇ ಹೇಳುತ್ತಿದೆ. ಆದರೆ, ಈ ಹೊತ್ತಿನಲ್ಲಿ ನಾವು ಸಂದಿಗ್ಧ ಪರಿಸ್ಥಿತಿಯಲ್ಲಿ ನಿಂತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು. ವರುಣ ಕ್ಷೇತ್ರದಲ್ಲಿ ಎಲ್ಲಾ ಮುಖಂಡರು, ಕಾರ್ಯಕರ್ತರು ಬೆಂಬಲ ನೀಡಿದ್ದೀರಿ. ನನ್ನ ಸೋಲಿಗೆ ಎರಡು ಮೂರನೇ ಹಂತದ ನಾಯಕರು ಕಾರಣರಲ್ಲ. ಅದಕ್ಕೂ ಮೇಲಿನವರು ಏನು ▶ 8ನೇ ಪುಟಕ್ಕೆ

### ಕೆಲಕಾಲ ಸಭೆಯಲ್ಲಿ ಗದ್ದಲ...

ಸಭೆಯಲ್ಲಿ ವಿ.ಸೋಮಣ್ಣ ಮಾತನಾಡಲು ಮುಂದಾಗುತ್ತಿದ್ದಂತೆ ಮೊದಲು ನಾನು ಮಾತನಾಡುತ್ತೇನೆಂದು ಬಿಜೆಪಿ ಮುಖಂಡ ಸದಾನಂದ ಮುಂದೆ ಬಂದರು. ಆದರೆ, ಸದಾನಂದರಿಗೆ ಮಾತನಾಡಲು ಅವಕಾಶ ನೀಡದ ಕಾರಣ ಕೆಲಕಾಲ ಸಭೆಯಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಯಿತು. ಸದಾನಂದಗೆ ಮಾತನಾಡಲು ಅವಕಾಶ ಕೊಡದೇ ಭಾಷಣ ಆರಂಭಿಸಿದ ಸೋಮಣ್ಣ ಭಾಷಣದುದ್ದಕ್ಕೂ ತಮ್ಮ ಸೋಲಿಗೆ ಕಾರಣರಾದವರ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

ಹೈಕಮಾಂಡ್ ಹೇಳಿದ್ದಕ್ಕೆ ನಾನು ಇಲ್ಲಿಗೆ ಬಂದೆ. ಯಾರು ನನ್ನ ಸೋಲಿಗೆ ಕಾರಣರಾದವರು ಎಂದು ನಾನು ಈಗ ಹೇಳುವುದಿಲ್ಲ. ಇಂದಲ್ಲಾ ನಾಳೆ ಪಾಪ ಮಾಡಿದವನು ಹೊರಗೆ ಬರುತ್ತಾನೆ. ನಾನು ಯಾರ ಬಳಿಯೂ ಭಿಕ್ಷೆ ಬೇಡುವುದಿಲ್ಲ. ಯಾವ ಎಂಎಲ್‌ಸಿ ಸ್ಥಾನಕ್ಕೂ ಆಸೆ ಪಟ್ಟವನಲ್ಲ, ಆಸೆ ಪಡುವುದೂ ಇಲ್ಲ. **–ವಿ.ಸೋಮಣ್ಣ, ಮಾಜಿ ಸಚಿವ**

### ಬಿಜೆಪಿಯದ್ದು ಡಬಲ್ ಇಂಜಿನ್ ಸರ್ಕಾರವಾದರೆ ಕಾಂಗ್ರೆಸ್‌ನದ್ದು ಡಬಲ್ ಸ್ಟೇರಿಂಗ್ ಸರ್ಕಾರ!

ಮೈಸೂರು,ಮೇ 17(ಜಿಎ)–ಬಿಜೆಪಿ ಡಬಲ್ ಇಂಜಿನ್ ಸರ್ಕಾರವಾದರೆ, ಕಾಂಗ್ರೆಸ್ ಡಬಲ್ ಸ್ಟೇರಿಂಗ್ ಸರ್ಕಾರ. ಈಗಾಗಲೇ ಒಬ್ಬರು ಬಲಕ್ಕೆ, ಮತ್ತೊಬ್ಬರು ಎಡಕ್ಕೆ ಸ್ಟೇರಿಂಗ್ ತಿರುಗಿಸುತ್ತಿದ್ದಾರೆ. ಇನ್ನು ಆರು ತಿಂಗಳಿನಲ್ಲಿ ಏನಾಗುತ್ತದೆ ಎಂದು ಹೇಳಲಾಗದು ಎಂದು ಮಾಜಿ ಸಚಿವ ಸೋಮಣ್ಣ ಮಾರ್ಮಿಕವಾಗಿ ನುಡಿದರು. ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಅವರು ವರುಣ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ಹಾಗೂ ಬೆಂಬಲಿಗರಿಗೆ ಕೃತಜ್ಞತಾ ಸಭೆ ಆಯೋಜಿಸಿದ್ದರು. ಈ ವೇಳೆ ಮಾತನಾಡಿದ ಅವರು, ಕಾಂಗ್ರೆಸ್ ನೀಡಿರುವ ಭರವಸೆ ಉಲ್ಟಾ ಆಗುತ್ತಿದೆ. ಆರು ತಿಂಗಳು ಎಲ್ಲರೂ ತಡೆದುಕೊಂಡು ಇರಿ. ಈ ಡಬಲ್ ಸ್ಟೇರಿಂಗ್ ಸರ್ಕಾರ ಎಲ್ಲಿ ಬಿದ್ದು ಹೋಗುತ್ತೇ ಅನ್ನೋದು ಗೊತ್ತಿಲ್ಲ. ಡಬಲ್ ಸ್ಟೇರಿಂಗ್ ಸರ್ಕಾರ ಒಳ್ಳೆಯ ಕೆಲಸ ಮಾಡಿದರೆ, ಬೆನ್ನು ತಟ್ಟೋಣ. ಅವರ ಭಾಗ್ಯ ಏನು ಮಾಡುತ್ತೋ ಏನೋ ಗೊತ್ತಿಲ್ಲ. ವರುಣ ಕ್ಷೇತ್ರವನ್ನು ಸಿದ್ದರಾಮಯ್ಯ ಅವರು ಈ ಬಾರಿ ವರ್ಣರಂಜಿತವಾಗಿ ▶ 8ನೇ ಪುಟಕ್ಕೆ

# ಆನೆ ಗಣತಿ ಆರಂಭ

**ಹಳೆ ಮೈಸೂರು ಭಾಗದಲ್ಲಿ ಮೊದಲ ದಿನವೇ ಕಣ್ಣಿಗೆ ಬಿದ್ದವು ನೂರಾರು ಆನೆಗಳು**

- ●ನಾಗರಹೊಳೆ, ಬಂಡೀಪುರ, ಬಿಳಿಗಿರಿರಂಗನಾಥಸ್ವಾಮಿ ಬೆಟ್ಟ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಗಣತಿ
- ●ಮಲೆಮಹದೇಶ್ವರ, ಕಾವೇರಿ ವನ್ಯಧಾಮ, ಹುಣಸೂರು ವಿಭಾಗ, ಕೊಡಗು, ಹಾಸನದಲ್ಲೂ ಎಣಿಕೆ
- ●ಆ ಕಾರ್ಯಕ್ಕೆ ಒಂದೊಂದು ತಂಡದಲ್ಲಿ ಅರಣ್ಯ ಇಲಾಖೆಯ ಮೂವರು ಸಿಬ್ಬಂದಿ ನಿಯೋಜನೆ



ನಾಗರಹೊಳೆ ಅರಣ್ಯದಲ್ಲಿ ಗಜಗಣತಿ ವೇಳೆ ಕಂಡು ಬಂದ ಆನೆಗಳು

ಮೈಸೂರು, ಮೇ 17(ಎಂಟಿವೈ)– ಅರಣ್ಯ ಇಲಾಖೆ ಆನೆ ಗಣತಿ ಆರಂಭಿಸಿದೆ. ಮೊದಲ ದಿನವೇ ನಾಗರಹೊಳೆ, ಬಂಡೀಪುರ, ಬಿಳಿಗಿರಿರಂಗನಾಥ ಸ್ವಾಮಿ ಹುಲಿ ಸಂರಕ್ಷಿತ ಪ್ರದೇಶ, ಮಲೆಮಹದೇಶ್ವರ, ಕಾವೇರಿ ವನ್ಯಧಾಮ ಸೇರಿದಂತೆ ವಿವಿಧೆಡೆ ನಡೆದ ಸಮೀಕ್ಷೆಯಲ್ಲಿ ನೂರಾರು ಆನೆಗಳು ಕಾಣಿಸಿಕೊಂಡಿವೆ. ಐದು ವರ್ಷಕ್ಕೊಮ್ಮೆ ನಡೆಯುವ ಆನೆಗಳ ಗಣತಿ ಕಾರ್ಯ ದಕ್ಷಿಣ ಭಾರತದೆಲ್ಲೆಡೆ ಬುಧವಾರ ಆರಂಭವಾಗಿದ್ದು, ಮೂರು ದಿನಗಳ ಕಾಲ ನಡೆಯಲಿದೆ. ಹಳೆ ಮೈಸೂರು ಭಾಗದ ವ್ಯಾಪ್ತಿಗೆ ಬರುವ 3 ಹುಲಿ ಸಂರಕ್ಷಿತ ಪ್ರದೇಶ, ಎರಡು ವನ್ಯಧಾಮ, ಹುಣಸೂರು ಸೇರಿದಂತೆ ಆನೆಗಳ ಆವಾಸ ಸ್ಥಾನಗಳಲ್ಲಿ ಗಣತಿ ಆರಂಭವಾಗಿದ್ದು, ಮತ್ತೊಮ್ಮೆ ಕರ್ನಾಟಕ ಆನೆಗಳ ಸಂತತಿಯಲ್ಲಿ ದೇಶದಲ್ಲೇ ಅಗ್ರಸ್ಥಾನ ಹೊಂದುವ ಸಾಧ್ಯತೆ ಹೆಚ್ಚಿವೆ.



ಗಣತಿಯಲ್ಲಿ ತೊಡಗಿರುವ ಸಿಬ್ಬಂದಿ.

2017ರಲ್ಲಿ ನಡೆದ ಆನೆ ಗಣತಿಯಲ್ಲಿ ದೇಶದಲ್ಲಿ 25 ಸಾವಿರಕ್ಕೂ ಹೆಚ್ಚು ಆನೆಗಳಿರುವುದು ವರದಿಯಾಗಿತ್ತು. ಅದರಲ್ಲಿ ಕರ್ನಾಟಕದಲ್ಲಿ 6,049 ಆನೆಗಳಿದ್ದವು. ಅಸ್ಸಾಂನಲ್ಲಿ 5,719, ಕೇರಳದಲ್ಲಿ 3,504 ಆನೆಗಳು ಕಂಡು ಬಂದಿದ್ದವು. ದೇಶದಲ್ಲೇ ಆನೆಗಳ ಸಂತತಿ–ಸಂರಕ್ಷಣೆಯಲ್ಲಿ ಅಗ್ರಸ್ಥಾನ ಹೊಂದಿದ್ದ ಕರುನಾಡು, ಈ ಬಾರಿಯೂ ಮುಂಚೂಣಿ ಸ್ಥಾನ ಕಾಯ್ದುಕೊಳ್ಳುವ ಎಲ್ಲಾ ಲಕ್ಷಣಗಳು ಕಂಡು ಬಂದಿವೆ. ನಾಗರಹೊಳೆ, ಬಂಡೀಪುರ, ▶ 8ನೇ ಪುಟಕ್ಕೆ

# ಟಿಬೆಟ್ ಧರ್ಮಗುರು ಬಿಡುಗಡೆಗೆ ಆಗ್ರಹಿಸಿ ಪ್ರತಿಭಟನೆ




ಮೈಸೂರು,ಮೇ 17(ಜಿಎ)–11ನೇ ಪಂಚೆನ್ ಲಾಮಾ ಗೆಂಡುನ್ ಚೋಯ್ಕಿ ನ್ಯಿಮಾ ಅವರನ್ನು ಬಿಡುಗಡೆ ಗೊಳಿಸಬೇಕೆಂದು ಟಿಬೆಟ್ ಯುವ ಘಟಕ ಹಾಗೂ ಧಾರ್ಮಿಕ ಟಿಬೆಟ್ ಮಹಿಳಾ ಸಂಘಟನೆ ಶಾಂತಿಯುತ ಪ್ರತಿಭಟನೆ ನಡೆಸಿತು.

ನಗರದ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗ ಟಿಬೆಟ್ ಯುವ ಘಟಕ ಹಾಗೂ ಧಾರ್ಮಿಕ ಟಿಬೆಟ್ ಮಹಿಳಾ ಸಂಘಟನೆಯ ನೂರಾರು ಮಂದಿ ಜಮಾಯಿಸಿ, ಚೀನಾ ಆಡಳಿತವು ಪಂಚೆನ್ ಲಾಮಾ ಅಪಹರಣ ಮಾಡಿದ್ದಾರೆ ಎಂದು ಆರೋಪಿಸಿ ಚೀನಾ ವಿರುದ್ಧ ವಿವಿಧ ಘೋಷಣೆ ಕೂಗಿದರು.

ಈ ವೇಳೆ ಪ್ರತಿಭಟನಾಕಾರರು ಮಾತನಾಡಿ, ಪಂಚೆನ್ ಲಾಮಾ ಅಪಹರಣವಾಗಿ ಇಂದಿಗೆ 28 ವರ್ಷಗಳಾಗಿದ್ದು, ಚೀನಾ ಸರ್ಕಾರವು ಅವರ ಇರುವಿಕೆಯ ಬಗ್ಗೆ ಮಾಹಿತಿ ನೀಡಿ, ಅವರನ್ನು ತಕ್ಷಣ ಬಿಡುಗಡೆ ಮಾಡಿ ಜೀವನ ನಡೆಸಲು ಅವಕಾಶ ಮಾಡಿಕೊಡಬೇಕು. ಈ ಸಮಸ್ಯೆಯನ್ನು ಬಗೆಹರಿಸಲು ಧರ್ಮ ಗುರುಗಳಾದ ದಲಾಯಿ ಲಾಮಾ ಅವರು ಮಧ್ಯಸ್ಥಿಕೆ ವಹಿಸಬೇಕು ಎಂದು ಆಗ್ರಹಿಸಿದರು. ವಿವಿಧ ಪೋಸ್ಟರ್‌ಗಳನ್ನು ಹಿಡಿದು ನಗರದ ಕೋಟೆ ಆಂಜನೇಯ ಸ್ವಾಮಿ ದೇವಾಲಯದಿಂದ ದೇವರಾಜ ಅರಸು ರಸ್ತೆ ಮಾರ್ಗವಾಗಿ ಡಿಸಿ ಕಚೇರಿ ತಲುಪಿ ಮನವಿ ಸಲ್ಲಿಸಿದರು.

# ಸತೀಶ್ ಜಾರಕಿಹೊಳಿಗೆ ಡಿಸಿಎಂ ಸ್ಥಾನ ನೀಡಲು ನಾಯಕ ಸಮುದಾಯ ಆಗ್ರಹ

## ನೂತನ ಶಾಸಕರಾದ ಕೆ.ಎನ್.ರಾಜಣ್ಣ, ಅನಿಲ್ ಚಿಕ್ಕಮಾದು, ತುಕಾರಾಂಗೆ ಸಚಿವ ಸ್ಥಾನಕ್ಕೂ ಒತ್ತಾಯ



ಮೈಸೂರು, ಮೇ 17(ಎಂಟಿವೈ)– ರಾಜ್ಯದಲ್ಲಿ ಕಾಂಗ್ರೆಸ್ ಜಯಭೇರಿ ಭಾರಿಸಿ, ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ಹೈಕಮಾಂಡ್ ಕಸರತ್ತು ನಡೆಸುತ್ತಿರುವ ಬೆನ್ನಲ್ಲೇ, ಉಪ ಮುಖ್ಯಮಂತ್ರಿ ಹಾಗೂ ಸಚಿವ ಸ್ಥಾನಕ್ಕಾಗಿ ಲಾಬಿ ಜೋರಾಗಿದೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಬುಧವಾರ ರಾಜ್ಯ ನಾಯಕ ಸಮುದಾಯದ ಮುಖಂಡರ ಸಭೆ ನಡೆಸಿ, ಈ ಬಾರಿ ಸಂಪುಟದಲ್ಲಿ ನಾಯಕ ಜನಾಂಗದ ಪ್ರತಿನಿಧಿಗಳಿಗೆ ಮನ್ನಣೆ ನೀಡಬೇಕು ಎಂದು ಮನವಿ ಮಾಡಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ಕಲ್ಪಿಸುವುದರೊಂದಿಗೆ ಮಧುಗಿರಿ ಶಾಸಕ ಕೆ.ಎನ್.ರಾಜಣ್ಣ, ಸಂಡೂರು ಶಾಸಕ ತುಕಾರಾಂ ಹಾಗೂ ಹೆಚ್.ಡಿ. ಕೋಟೆ ಶಾಸಕ ಅನಿಲ್ ಚಿಕ್ಕಮಾದು ಅವರನ್ನು ಸಚಿವರನ್ನಾಗಿ ಮಾಡುವಂತೆ ಆಗ್ರಹಿಸಿದರು.

ಸಭೆ ಬಳಿಕ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಈ ಬಾರಿ ಬಹುಮತ ಗಳಿಸಿ, ಅಧಿಕಾರ ಹಿಡಿಯುತ್ತಿದೆ. ಈ ನಡುವೆ ಕೆಲವು ಸಮುದಾಯದ ಮುಖಂಡರು ತಮ್ಮ ಸಮುದಾಯಕ್ಕೆ ಡಿಸಿಎಂ ಸ್ಥಾನ ನೀಡುವಂತೆ ಆಗ್ರಹಿಸುತ್ತಿದ್ದಾರೆ. ನಾಯಕ ಸಮುದಾಯವು ಜನಾಂಗದ ಶಾಸಕರಿಗೆ ಮನ್ನಣೆ ನೀಡಬೇಕೆಂದು ಮೈಸೂರಲ್ಲಿ ತುರ್ತು ಸಭೆ ನಡೆಸಿ ಕೆಲವು ನಿರ್ಣಯ ಕೈಗೊಂಡಿದೆ ಎಂದರು.

ಈ ಬಾರಿ ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದ ಲಿಂಗಾಯತ ಸಮುದಾಯದ 56 ಅಭ್ಯರ್ಥಿಗಳಲ್ಲಿ 34 ಮಂದಿ ಆಯ್ಕೆಯಾಗಿದ್ದಾರೆ. ಒಕ್ಕಲಿಗ ಸಮುದಾಯಕ್ಕೆ ಸೇರಿದ 46 ಮಂದಿಗೆ ಟಿಕೆಟ್ ನೀಡಲಾಗಿತ್ತು. ಅವರಲ್ಲಿ 23 ಮಂದಿ ಆಯ್ಕೆಯಾಗಿದ್ದಾರೆ. ಪರಿಶಿಷ್ಟ ಜಾತಿಗೆ ಸೇರಿದ 35 ಮಂದಿಗೆ ಟಿಕೆಟ್ ನೀಡಲಾಗಿತ್ತು. ಅವರಲ್ಲಿ 21 ಆಯ್ಕೆಯಾಗಿದ್ದಾರೆ. 15 ಎಸ್ಟಿ ಮೀಸಲು ಕ್ಷೇತ್ರದಲ್ಲಿ 14 ಮಂದಿ ಕಾಂಗ್ರೆಸ್‌ನಿಂದ ಹಾಗೂ ಒಬ್ಬರು ಜೆಡಿಎಸ್‌ನಿಂದ ಆಯ್ಕೆಯಾಗಿದ್ದಾರೆ. 3 ಸಾಮಾನ್ಯ ಕ್ಷೇತ್ರದಿಂದ ಮೂವರು ನಾಯಕ ಸಮುದಾಯಕ್ಕೆ ಸೇರಿದ ಶಾಸಕರು ಆಯ್ಕೆಯಾಗಿದ್ದಾರೆ. ಅವರಲ್ಲಿ ಇಬ್ಬರು ಬಿಜೆಪಿಯಿಂದ, ಒಬ್ಬರು ಕಾಂಗ್ರೆಸ್‌ನಿಂದ ಗೆಲುವು ಸಾಧಿಸಿದ್ದಾರೆ. ಈ ಬಾರಿ ಆಯ್ಕೆಯಾಗಿರುವ 18 ಮಂದಿ ನಾಯಕ ಸಮುದಾಯದ ಶಾಸಕರಲ್ಲಿ 15 ಮಂದಿ ಕಾಂಗ್ರೆಸ್‌ನಿಂದ, ಇಬ್ಬರು ಬಿಜೆಪಿ ಹಾಗೂ ಒಬ್ಬರು ಜೆಡಿಎಸ್‌ನಿಂದ ಆಯ್ಕೆಯಾಗಿದ್ದಾರೆ ಎಂದರು.

ಇದೇ ಮೊದಲ ಬಾರಿಗೆ ಕಾಂಗ್ರೆಸ್‌ನಿಂದ ಇಷ್ಟು ದೊಡ್ಡ ಪ್ರಮಾಣದಲ್ಲಿ ಪರಿಶಿಷ್ಟ ಪಂಗಡದ ಶಾಸಕರು ಆಯ್ಕೆಯಾಗಿದ್ದಾರೆ. ಈ ಹಿಂದೆ ನಾಯಕ ಸಮುದಾಯ ಬಿಜೆಪಿಯನ್ನು ಬೆಂಬಲಿಸಿತ್ತು. ನಾಯಕ ಸಮುದಾಯಕ್ಕೆ ಸೇರಿದ ಶ್ರೀರಾಮುಲು ಅವರನ್ನು ಉಪಮುಖ್ಯಮಂತ್ರಿ ಮಾಡುವುದಾಗಿ ಬಿಜೆಪಿ ಭರವಸೆ ನೀಡಿತ್ತು. ಅದಕ್ಕಾಗಿ ನಾಯಕ ಸಮುದಾಯ ಬಿಜೆಪಿಗೆ ಬೆಂಬಲ ನೀಡಿತ್ತು. ಆದರೆ ಬಿಜೆಪಿ ನಂಬಿಕೆ ದ್ರೋಹ ಮಾಡಿದೆ. ಶ್ರೀರಾಮುಲು ಅವರಿಗೆ ಸೂಕ್ತ ಸ್ಥಾನಮಾನ ನೀಡಲಿಲ್ಲ. ಮೀಸಲಾತಿ ಹೆಚ್ಚಳ ವಿಚಾರಕ್ಕೆ ಆಗ್ರಹಿಸಿ ನಮ್ಮ ಸಮುದಾಯದ ಸ್ವಾಮೀಜಿ ಅವರು 257 ದಿನ ಧರಣಿ ನಡೆಸಿದರೂ ಬಿಜೆಪಿ ಸರ್ಕಾರ ತಿರುಗಿ ನೋಡಲಿಲ್ಲ. ಪರಿವಾರ, ತಳವಾರ ವಿಚಾರದಲ್ಲಿ ಸಿದ್ದರಾಮಯ್ಯ ಸರ್ಕಾರ ಶಿಫಾರಸ್ಸು ಮಾಡಿದ್ದರೂ ವಿಳಂಬ ಮಾಡಲಾಯಿತು. ಅನಗತ್ಯವಾಗಿ ತಿದ್ದುಪಡಿ ಮಾಡಿ ಗೊಂದಲ ಸೃಷ್ಟಿಸಲಾಗಿದೆ. ಇದರಿಂದ ನಾಯಕ ಸಮುದಾಯ ಬಿಜೆಪಿ ಬದಲು ಕಾಂಗ್ರೆಸ್‌ಗೆ ಬೆಂಬಲ ನೀಡಿದೆ ಎಂದು ತಿಳಿಸಿದರು.

ಈ ಬಾರಿ ಕಾಂಗ್ರೆಸ್‌ನಿಂದ ನಾಲ್ಕು ಮಂದಿಗೆ ಸಂಪುಟದಲ್ಲಿ ಅವಕಾಶ ನೀಡಬೇಕು. ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ರಾಜ್ಯದಾದ್ಯಂತ ಪ್ರವಾಸ ಮಾಡಿ, ಪಕ್ಷ ಸಂಘಟಿಸಿರುವ ಸತೀಶ್ ಜಾರಕಿಹೋಳಿ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು. ಸಹಕಾರಿ ಕ್ಷೇತ್ರದಲ್ಲಿ ಸಾಧನೆ ಮಾಡಿ 'ಸಹಕಾರಿ ರತ್ನ' ಪುರಸ್ಕಾರ ಪಡೆದಿರುವ ಮಧುಗಿರಿ ಶಾಸಕ ಕೆ.ಎನ್.ರಾಜಣ್ಣ, ಸಂಡೂರು ಶಾಸಕ ತುಕಾರಾಮ್ ಹಾಗೂ ಹೆಚ್.ಡಿ.ಕೋಟೆಯಿಂದ ಎರಡನೇ ಬಾರಿ ಗೆಲುವು ಸಾಧಿಸಿರುವ ಅನಿಲ್ ಚಿಕ್ಕಮಾದು ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪನಾಯಕ, ಮುಖಂಡರಾದ ಚಿಕ್ಕವೀರನಾಯಕ, ಕೃಷ್ಣಣ್ಣ, ಮಂಜುನಾಥ್, ಕೃಷ್ಣ, ಅಣ್ಣಯ್ಯ ನಾಯಕ, ಸಿದ್ದಯ್ಯ, ನಗರ ಪಾಲಿಕೆ ಸದಸ್ಯ ಲೋಕೇಶ್ ಪಿಯಾ, ರೋಹಿತ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

# ಪುಟ್ಟರಂಗಶೆಟ್ಟಿಗೆ ಪ್ರಮುಖ ಸಚಿವ ಸ್ಥಾನ ನೀಡಿ




## ಉಪ್ಪಾರ ಸಂಘ ಆಗ್ರಹ

ಮೈಸೂರು,ಮೇ 17(ಪಿಎಂ)– ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಆಯ್ಕೆಯಾದ ಉಪ್ಪಾರ ಸಮುದಾಯದ ಸಿ.ಪುಟ್ಟರಂಗ ಶೆಟ್ಟಿ ಅವರಿಗೆ ಪ್ರಮುಖ ಸಚಿವ ಸ್ಥಾನ ನೀಡಬೇಕೆಂದು ಕಾಂಗ್ರೆಸ್ ವರಿಷ್ಠರಲ್ಲಿ ಮೈಸೂರು ಜಿಲ್ಲಾ ಭಗೀರಥ ಉಪ್ಪಾರ ಸಂಘ ಒತ್ತಾಯಿಸಿದೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಎಸ್. ಯೋಗೇಶ್ ಉಪ್ಪಾರ, ಚಾಮರಾಜನಗರ ಕ್ಷೇತ್ರದಿಂದ ಸಿ.ಪುಟ್ಟರಂಗಶೆಟ್ಟಿಯವರು ಸತತ ನಾಲ್ಕನೇ ಬಾರಿಗೆ ಆಯ್ಕೆಯಾಗಿದ್ದಾರೆ. ಬಿಜೆಪಿಯು ಈ ಬಾರಿ ಪ್ರತಿಸ್ಪರ್ಧಿಯಾಗಿ ಸೋಮಣ್ಣ ಅವರಂಥ ಪ್ರಬಲ ಅಭ್ಯರ್ಥಿಯನ್ನು ಕಣಕ್ಕಿಳಿಸಿತ್ತು. ಆ ಮೂಲಕ ಸಿ.ಪುಟ್ಟರಂಗಶೆಟ್ಟಿ ಅವರನ್ನು ರಾಜಕೀಯವಾಗಿ ಮುಗಿಸಲು ಹುನ್ನಾರ ನಡೆಸಿತ್ತು. ಆದರೆ ಕ್ಷೇತ್ರದ ಮತದಾರರು ಪುಟ್ಟರಂಗಶೆಟ್ಟಿಗೆ ಬೆಂಬಲ ಸೂಚಿಸಿದ್ದಾರೆ ಎಂದರು.

ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಉಪ್ಪಾರ ಸಮುದಾಯದವರಿಗೆ ಟಿಕೆಟ್ ನೀಡದ ಕಾರಣ ಸಮುದಾಯವು ಸಿದ್ದರಾಮಯ್ಯ ನಾಯಕತ್ವ ಬೆಂಬಲಿಸಿ, ಒಕ್ಕೊರಲಿನಿಂದ ಕಾಂಗ್ರೆಸ್‌ಗೆ ಮತ ನೀಡಿದೆ. ಉಪ್ಪಾರ ಸಮುದಾಯದ ಮುಖಂಡರನ್ನು ಗುರುತಿಸಿ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆ ಮಾಡಬೇಕು. ನಿಗಮ–ಮಂಡಳಿಗಳಲ್ಲಿ ಸಮುದಾಯದವರಿಗೆ ಸ್ಥಾನಮಾನ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಸಂಘದ ಕಾರ್ಯಾಧ್ಯಕ್ಷ ಕನಕನಗರ ಮಹದೇವು, ಉಪಾಧ್ಯಕ್ಷ ಕರಳಾಪುರ ನಾಗರಾಜು, ಗೌರವ ಸಲಹೆಗಾರ ಚಂದ್ರಪ್ಪ, ನಿರ್ದೇಶಕರಾದ ಎಂ.ರಾಜು, ಮಲ್ಲೇಶ್, ಚಾಮುಂಡಿಬೆಟ್ಟ ಗ್ರಾಪಂ ಮಾಜಿ ಉಪಾಧ್ಯಕ್ಷ ಸೋಮಶಂಕರ ಗೋಷ್ಠಿಯಲ್ಲಿದ್ದರು.

# ಮೇ 25ಕ್ಕೆ ಪಾಲಿಕೆ ಸ್ಥಾಯಿ ಸಮಿತಿಗಳಿಗೆ ಚುನಾವಣೆ



ಮೈಸೂರು, ಮೇ 17(ಆರ್‌ಕೆ)– ಮೇ 25ರಂದು ಮೈಸೂರು ಮಹಾನಗರ ಪಾಲಿಕೆಯ ನಾಲ್ಕು ಸ್ಥಾಯಿ ಸಮಿತಿಗಳಿಗೆ ಚುನಾವಣೆ ನಿಗದಿಪಡಿಸಲಾಗಿದೆ ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ಅಂದು ಬೆಳಗ್ಗೆ 11.30ಕ್ಕೆ ಪಾಲಿಕೆಯ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಕಾರ್ಪೊರೇಟರ್‌ಗಳು ಸಭೆ ಸೇರಿ ಚರ್ಚಿಸಿ ಸ್ಥಾಯಿ ಸಮಿತಿಗಳ ಅಧ್ಯಕ್ಷರು, ಸದಸ್ಯರ ಆಯ್ಕೆ ಪ್ರಕ್ರಿಯೆ ನಡೆಯಲಿದೆ ಎಂದಿರುವ ಅವರು, ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷರು, ಮುಖ್ಯ ಲೆಕ್ಕಾಧಿಕಾರಿ, ನಗರ ಯೋಜನಾ ಶಾಖೆ ಜಂಟಿ ನಿರ್ದೇಶಕರು ಚರ್ಚಿಸಿ ಪ್ರಸಕ್ತ ಸಾಲಿನ ಪಾಲಿಕೆ ಬಜೆಟ್ ದಿನಾಂಕ ನಿಗದಿಪಡಿಸುವರು ಎಂದು ತಿಳಿಸಿದರು.

ನಾಲ್ಕು ಸ್ಥಾಯಿ ಸಮಿತಿಗಳಿಗೆ ಮೂರೂ ಪಕ್ಷಗಳ ಕಾರ್ಪೊರೇಟರ್ ಗಳ ಸಹಕಾರ ಪಡೆದು ಒಮ್ಮತದಿಂದ ಅಧ್ಯಕ್ಷರು, ಸದಸ್ಯರನ್ನು ಸೌಹಾರ್ದಯುತವಾಗಿ ಆಯ್ಕೆ ಮಾಡಲು ಪ್ರಯತ್ನಿಸುತ್ತಿದ್ದೇವೆ ಎಂದು ಶಿವಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಆಯ–ವ್ಯಯದಲ್ಲಿ ಪ್ರಸಕ್ತ ಸಾಲಿಗೆ ಯಾವ ಹೊಸ ಯೋಜನೆ ಸೇರಿಸಬೇಕು, ಆದಾಯ ಕ್ರೋಢೀಕರಣ, ವೆಚ್ಚದ ಬಾಬ್ತುಗಳು, ನಗರ ನಿರ್ವಹಣೆ ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಹೊಂದಾಣಿಕೆ ಕುರಿತಂತೆ ಈಗಾಗಲೇ ಎರಡು ಬಾರಿ ಮಾಜಿ ಮೇಯರ್, ಉಪ ಮೇಯರ್‌ಗಳು, ವಿವಿಧ ಸಂಘ–ಸಂಸ್ಥೆಗಳ ಪ್ರಮುಖರು, ಕೈಗಾರಿಕೋದ್ಯಮಿಗಳು, ಶಿಕ್ಷಣ ತಜ್ಞರೊಂದಿಗೆ ಚರ್ಚಿಸಿ ಅಗತ್ಯ ಸಲಹೆ–ಮಾರ್ಗದರ್ಶನ ಪಡೆಯಲಾಗಿದ್ದು, ಅದರಂತೆ ಬಜೆಟ್ ತಯಾರಿಸಲಾಗುತ್ತಿದೆ ಎಂದು ನುಡಿದರು.

# ತನ್ವೀರ್ ಸೇಠ್‌ಗೆ ಡಿಸಿಎಂ ಸ್ಥಾನ ನೀಡಿ: ಪಾಲಿಕೆ ಸದಸ್ಯರು, ಮುಖಂಡರ ಆಗ್ರಹ



ಮೈಸೂರು,ಮೇ 17(ಜಿಎ)–ನೂತನ ಸಚಿವ ಸಂಪುಟದಲ್ಲಿ ಶಾಸಕ ತನ್ವೀರ್ ಸೇಠ್ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡುವಂತೆ ನರಸಿಂಹರಾಜ ಕ್ಷೇತ್ರದ ಕಾಂಗ್ರೆಸ್ ಪಾಲಿಕೆ ಸದಸ್ಯರು ಹಾಗೂ ಮುಖಂಡರು ಒತ್ತಾಯಿಸಿದ್ದಾರೆ.

ನಗರದ ಪುರಭವನದ ಮುಂಭಾಗವಿರುವ ಅಂಬೇಡ್ಕರ್ ಪ್ರತಿಮೆ ಬಳಿ ಬುಧವಾರ ಜಮಾಯಿಸಿದ ನೂರಾರು ಕಾರ್ಯಕರ್ತರು, ಶಾಸಕ ತನ್ವೀರ್ ಸೇಠ್ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು. ಈ ವೇಳೆ ಪ್ರತಿಭಟನಾಕಾರರು ಮಾತನಾಡಿ, ಹಿರಿಯ ರಾಜಕಾರಣಿ ಮಾಜಿ ಸಚಿವರಾಗಿದ್ದ ಅಜೀಜ್ ಸೇಠ್ ಅವರ ಪುತ್ರರಾದ ತನ್ವೀರ್ ಸೇಠ್ ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ಜಯಗಳಿಸುವ ಮೂಲಕ ಕರ್ನಾಟಕದಲ್ಲಿ ದಾಖಲೆಯನ್ನು ಸೃಷ್ಟಿಸಿದ್ದಾರೆ. ಅವರಿಗೆ ಅಲ್ಪ ಸಂಖ್ಯಾತರ ಕೋಟಾದಡಿ ಉಪ ಮುಖ್ಯಮಂತ್ರಿ ಸ್ಥಾನವನ್ನು ನೀಡಬೇಕೆಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ನಗರಪಾಲಿಕೆ ಸದಸ್ಯರಾದ ಆಯಷ್ ಪಂಡು, ಶಬೀರ್, ಶಾಂತಕುಮಾರಿ, ಮುಖಂಡರಾದ ಶೌಕತ್, ಧ್ರುವರಾಜ್, ದೇವರಾಜ್, ರಾಜೇಶ್, ಸೈಯದ್ ಇಕ್ಬಾಲ್ ಸೇರಿದಂತೆ ಮತ್ತಿರರು ಉಪಸ್ಥಿತರಿದ್ದರು.

# ಸತೀಶ್ ಜಾರಕಿಹೊಳಿಗೆ ಡಿಸಿಎಂ ಸ್ಥಾನ ನೀಡಿ

## ಕಾಂಗ್ರೆಸ್ ವರಿಷ್ಠರಲ್ಲಿ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಮನವಿ



ಮೈಸೂರು,ಮೇ 17(ಪಿಎಂ)– ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ನಾಯಕ ಸಮುದಾಯದ ಶೇ.70ಕ್ಕೂ ಹೆಚ್ಚು ಮತದಾರರು ಕಾಂಗ್ರೆಸ್ ಬೆಂಬಲಿಸಿದ್ದು, ಯಮಕನಮರಡಿ ಕ್ಷೇತ್ರದಿಂದ ಆಯ್ಕೆಯಾದ ಸತೀಶ್ ಜಾರಕಿಹೊಳಿ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಕಾಂಗ್ರೆಸ್ ವರಿಷ್ಠರಲ್ಲಿ ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಮನವಿ ಮಾಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪನಾಯಕ, ಈ ಬಾರಿಯ ಚುನಾವಣೆಯಲ್ಲಿ ಸತೀಶ್ ಜಾರಕಿಹೊಳಿಯವರ ನೇತೃತ್ವದಲ್ಲಿ ಇಡೀ ರಾಜ್ಯದಲ್ಲಿ ನಮ್ಮ ಸಮುದಾಯ ಕಾಂಗ್ರೆಸ್ ಬೆಂಬಲಿಸಿದೆ. ಹಾಗಾಗಿ ಸತೀಶ್ ಜಾರಕಿಹೊಳಿಯವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು. ಜೊತೆಗೆ ಕಾಂಗ್ರೆಸ್‌ನಲ್ಲಿ ಸಮುದಾಯದ 15 ಮಂದಿ ಶಾಸಕರಾಗಿ ಆಯ್ಕೆಯಾಗಿದ್ದು, ಈ ಪೈಕಿ ನಾಲ್ವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಕೋರಿದರು.

ಈ ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನಾಯಕ ಜನಾಂಗಕ್ಕೆ ಒಂದೇ ಸಚಿವ ಸ್ಥಾನ ನೀಡಲಾಗಿತ್ತು. ಅಲ್ಲದೆ, ನಿಗಮ–ಮಂಡಳಿಗಳಲ್ಲಿಯೂ ಸೂಕ್ತ ಸ್ಥಾನಮಾನ ದೊರೆತಿರಲಿಲ್ಲ. ಹೀಗಾಗಿ ಈ ಬಾರಿ ಸಮುದಾಯಕ್ಕೆ ಹೆಚ್ಚು ಅವಕಾಶ ಕಲ್ಪಿಸಬೇಕು. ಮೈಸೂರು ಭಾಗದಲ್ಲಿ ಸಮುದಾಯದ ಏಕೈಕ ಶಾಸಕರಾಗಿರುವ ಅನಿಲ್ ಚಿಕ್ಕಮಾದು ಅವರಿಗೂ ಸಚಿವ ಸ್ಥಾನ ನೀಡಬೇಕು. ಜೊತೆಗೆ ನಿಗಮ–ಮಂಡಳಿಗಳಲ್ಲಿಯೂ ಸಮುದಾಯಕ್ಕೆ ಹೆಚ್ಚಿನ ಸ್ಥಾನ ನೀಡಬೇಕು ಎಂದರು. ಮೈಸೂರು ಭಾಗದ ನಮ್ಮ ಸಮುದಾಯದ ಕಾಂಗ್ರೆಸ್ ಮುಖಂಡರನ್ನು ವಿಧಾನಪರಿಷತ್‌ಗೆ ಆಯ್ಕೆ ಮಾಡಬೇಕು. ಆ ಮೂಲಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಪ್ರಬಲವಾಗಿ ಕಟ್ಟಲು ನಾಯಕ ಜನಾಂಗಕ್ಕೆ ಅವಕಾಶ ಕಲ್ಪಿಸಬೇಕೆಂದು ಮನವಿ ಮಾಡಿದರು. ವೇದಿಕೆ ಉಪಾಧ್ಯಕ್ಷ ಎಸ್.ಸಿದ್ದಯ್ಯ, ಮುಖಂಡರಾದ ಮಂಜುನಾಥ್, ಪುಟ್ಟರಾಜು, ರೋಹಿತ್, ತಿಪ್ಪೂರು ಮಹದೇವು ಸುದ್ದಿಗೋಷ್ಠಿಯಲ್ಲಿದ್ದರು.

# ಭೇರ್ಯ ರಾಮ್‌ಕುಮಾರ್ ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ ಪ್ರಶಸ್ತಿಗೆ ಆಯ್ಕೆ



ಮೈಸೂರು, ಮೇ 17– ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯ ಭೇರ್ಯ ರಾಮಕುಮಾರ್ ಅವರನ್ನು ಕನ್ನಡ ಸಾಹಿತ್ಯ ಪರಿಷತ್ತು ನೀಡುವ ಶ್ರೀಮತಿ ಸತ್ಯವತಿ ವಿಜಯ ರಾಘವ ಟ್ರಸ್ಟ್ ವತಿಯಿಂದ ಸ್ಥಾಪಿಸಲಾಗಿರುವ ದತ್ತಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ನಾಡೋಜ ಡಾ. ಮಹೇಶ್ ಜೋಷಿ ತಿಳಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್‌ನಿಂದ ನೀಡಲಾಗುವ ಸತ್ಯವತಿ ವಿಜಯರಾಘವ ಚಾರಿಟೇಬಲ್ ಧರ್ಮದರ್ಶಿಗಳ ದತ್ತಿ ಪ್ರಶಸ್ತಿಗೆ ಕನ್ನಡ ಪರ ಹೋರಾಟಕ್ಕಾಗಿ ಭೇರ್ಯ ರಾಮಕುಮಾರ್ ಹಾಗೂ ಸಾಹಿತ್ಯ ಕ್ಷೇತ್ರ ಸೇವೆಗಾಗಿ ಬೆಂಗಳೂರಿನ ಸಾಹಿತಿ ಡಾ. ವಿಜಯಮಾಲಾ ರಂಗನಾಥ್ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ತಲಾ 10 ಸಾವಿರ ರೂ. ಒಳಗೊಂಡಿದೆ ಎಂದು ಜೋಷಿ ತಿಳಿಸಿದ್ದಾರೆ.

# ಮೇ 20, 21, ಲೆಜೆಂಡ್ಸ್ ಪ್ರೀಮಿಯರ್ ಲೀಗ್–ಟಿ10 ಕ್ರಿಕೆಟ್ ಪಂದ್ಯಾವಳಿ



ಮೈಸೂರು,ಮೇ 17(ಪಿಎಂ)– ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗ, ನವೋದಯ ಕ್ರಿಕೆಟ್ ಕ್ಲಬ್ ಮತ್ತು ಜೈ ಹಿಂದ್ ಕ್ರಿಕೆಟ್ ಕ್ಲಬ್ ಸಂಯುಕ್ತಾಶ್ರಯದಲ್ಲಿ ಮೇ 20 ಮತ್ತು 21ರಂದು 'ಲೆಜೆಂಡ್ಸ್ ಪ್ರೀಮಿಯರ್ ಲೀಗ್–ಟಿ10' ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಪಂದ್ಯಾವಳಿಯ ಅಧ್ಯಕ್ಷ ಹಾಗೂ ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಪಿ.ಕೃಷ್ಣಯ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಮಾನಸ ಗಂಗೋತ್ರಿಯ ಎಸ್‌ಡಿಎನ್‌ಆರ್‌ಡಬ್ಲ್ಯೂ ಕ್ರಿಕೆಟ್ ಮೈದಾನ, ಎಸ್‌ಜೆಸಿಇ ಕ್ರಿಕೆಟ್ ಮೈದಾನದಲ್ಲಿ ಪಂದ್ಯಗಳು ನಡೆಯಲಿವೆ. 40 ವರ್ಷ ಮೇಲ್ಪಟ್ಟ ಪುರುಷರ 6 ಆಹ್ವಾನಿತ ತಂಡಗಳು ಈ ಪಂದ್ಯಾವಳಿಯಲ್ಲಿ ಭಾಗ ವಹಿಸಲಿವೆ. ಈ ಪೈಕಿ ಮೈಸೂರಿನಿಂದ 3, ತುಮಕೂರು, ಬೆಂಗಳೂರು ಮತ್ತು ಶಿವಮೊಗ್ಗದ ತಲಾ ಒಂದೊಂದು ತಂಡಗಳು ಪಂದ್ಯಾವಳಿಯಲ್ಲಿ ಪಾಲ್ಗೊಂಡಿವೆ ಎಂದರು. ರಣಜಿ ಟ್ರೋಫಿ, ಕರ್ನಾಟಕ ರಾಜ್ಯ, ಮೈಸೂರು ವಿಭಾಗ ಮತ್ತು ವಿಶ್ವವಿದ್ಯಾನಿಲಯದ ಕ್ರಿಕೆಟ್ ತಂಡಗಳನ್ನು ಪ್ರತಿನಿಧಿಸಿರುವ ಸುಮಾರು 100 ಹಿರಿಯ ಕ್ರಿಕೆಟಿಗರು ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲಿದ್ದಾರೆ. ಮೇ 20ರಂದು ಬೆಳಗ್ಗೆ 8ಕ್ಕೆ ಮಾನಸ ಗಂಗೋತ್ರಿಯ ಎಸ್‌ಡಿಎನ್‌ಆರ್‌ಡಬ್ಲ್ಯೂ ಕ್ರಿಕೆಟ್ ಮೈದಾನದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಪಂದ್ಯಾವಳಿಗೆ ಚಾಲನೆ ನೀಡಲಿದ್ದಾರೆ. ಕೆಎಸ್‌ಸಿಎ ಮೈಸೂರು ವಲಯದ ಸಂಚಾಲಕ ಆರ್.ಕೆ.ಹರಿಕೃಷ್ಣ ಕುಮಾರ್, ಸೇಪಿಯಂಟ್ ಎಜುಕೇಷನ್ ಟ್ರಸ್ಟ್‌ನ ದಲ್ಜೀತ್ ರಾಮ್ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಮೇ 21ರಂದು ಸಂಜೆ 4ಕ್ಕೆ ಬಹುಮಾನ ವಿತರಣೆ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಮೂರು ಓವರ್‌ಗಳ ಪವರ್ ಪ್ಲೇ ಜೊತೆ 10 ಓವರ್‌ಗಳ ಪಂದ್ಯಗಳು ನಡೆಯಲಿವೆ. ಪ್ರತಿ ತಂಡವು ಕನಿಷ್ಠ 3 ಪಂದ್ಯಗಳನ್ನು ಆಡಲು ಅವಕಾಶವಿದೆ. ಮೊದಲ ದಿನ ಬೆಳಗ್ಗೆ 8.30 ಹಾಗೂ ಎರಡನೇ ದಿನ 9.30ಕ್ಕೆ ಪಂದ್ಯಗಳು ಆರಂಭಗೊಳ್ಳಲಿವೆ. ಪ್ರೇಕ್ಷಕರಿಗೆ ಉಚಿತ ಪ್ರವೇಶ ವಿದ್ದು, ವಿನ್ನರ್ ಮತ್ತು ರನ್ನರ್ ತಂಡಗಳಿಗೆ ಟ್ರೋಫಿಗಳನ್ನು ಪ್ರದಾನ ಮಾಡಲಾಗುವುದು ಎಂದರು. ಪಂದ್ಯಾವಳಿಯ ಸಂಘಟನಾ ಸಮಿತಿ ಸದಸ್ಯ ಡಾ.ಮನ್ಸೂರ್ ಅಹಮದ್, ವಕೀಲ ಎಂ.ಆರ್.ಆನಂದ್, ಮೈಸೂರು ಕ್ರಿಕೆಟ್ ಕ್ಲಬ್ ಕಾರ್ಯದರ್ಶಿ ಎ.ಸುಧೀಂದ್ರ ಸುದ್ದಿಗೋಷ್ಠಿಯಲ್ಲಿದ್ದರು.



ಕೃಷ್ಣರಾಜ ಕ್ಷೇತ್ರದ ನೂತನ ಶಾಸಕ ಟಿ.ಎಸ್.ಶ್ರೀವತ್ಸ ಅವರನ್ನು ಮೈಸೂರಿನ ನಾಯಕ ಸಮುದಾಯದ ಮುಖಂಡರಾದ ಟೆನ್ನಿಸ್ ಗೋಪಿ, ಶಿವಪ್ರಕಾಶ್, ನಂದೀಶ್, ಡೇಟಾಲ್ ರವಿ, ಹಂಚ್ಯಾ ರವಿ, ಉಮೇಶ್, ಹಿನಕಲ್ ಚಂದ್ರು ಕೆಂಪಣ್ಣ, ದಂಡನಾಯಕ ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿದರು.




ಚಾಮರಾಜ ಕ್ಷೇತ್ರದ ನೂತನ ಶಾಸಕ ಕೆ.ಹರೀಶ್‌ಗೌಡ ಅವರಿಗೆ ಸಿದ್ದರಾಮಯ್ಯ ಅವರ ಭಾವಚಿತ್ರವಿರುವ ಚಿತ್ರಪಟ ನೀಡಿ, ಶುಭಕೋರಲಾಯಿತು. ಈ ವೇಳೆ ಯುವ ಮುಖಂಡರಾದ ನವೀನ್, ಸಂದೀಪ್, ರವಿಚಂದ್ರನ್ ಉಪಸ್ಥಿತರಿದ್ದರು.

# ಬ್ಯಾಂಕಿಂಗ್ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ಮೈಸೂರು,ಮೇ 17(ಪಿಎಂ)–ಮುಕ್ತ ವಿವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಬ್ಯಾಂಕ್ ಅಧಿಕಾರಿ ಮತ್ತು ಗುಮಾಸ್ತರ ಹುದ್ದೆಗಳ ನೇಮಕಾತಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆ ಕುರಿತಂತೆ 45 ದಿನಗಳ ತರಬೇತಿ ಶಿಬಿರ ಆಯೋಜಿಸಲಾಗಿದೆ. ಆಸಕ್ತರು ಮೇ 24ರೊಳಗೆ ಬೆಳಗ್ಗೆ 10ರಿಂದ ಸಂಜೆ 4ರವರೆಗೆ ನೋಂದಣಿ ಮಾಡಿಕೊಳ್ಳಬೇಕು. ನೋಂದಣಿಗಾಗಿ ದೂ.ಸಂ. 0821–2515944 ಸಂಪರ್ಕಿಸಬಹುದು ಎಂದು ಮುಕ್ತ ವಿವಿ ಕುಲಸಚಿವ ಪ್ರೊ.ಕೆ.ಎನ್.ಎನ್.ಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

18.5.2023 ಗುರುವಾರ, ಮಳೆ ನಕ್ಷತ್ರ: ಕೃತ್ತಿಕ, 11.05.2023ರಿಂದ 24.05.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ,
ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 6.10ಕ್ಕೆ "ಒಂದೇಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ–ಕಲಿಕೆಯ ವಿಶಿಷ್ಟಬಾನುಲಿ ಸರಣಿ, ಪ್ರಸ್ತುತಿ–ಡಾ.ಟಿ.ವಿ.ಸತ್ಯನಾರಾಯಣ, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ–ಮೈಸೂರು ಉಮೇಶ್, 8.40 ಪಂಪನ ಪೆಂಪು–ಪಂಪ ಭಾರತದ ನಾಟಕೀಯ ಸನ್ನಿವೇಶಗಳನ್ನಾಧರಿಸಿದ ಕಾರ್ಯಕ್ರಮ, ಪ್ರಸ್ತುತಿ–ಜಿ.ಶಾಂತಕುಮಾರ್, 9.00 ವೀಣೆಯ ಬೆಡಗು–ನಾದದ ಸೊಬಗು–ಪರಿಕಲ್ಪನೆ ಮತ್ತು ಪ್ರಸ್ತುತಿ–ಮೈಸೂರು ರಾಜಲಕ್ಷ್ಮಿ, 10.00 ದೊರೆಸ್ವಾಮಿ ಅಯ್ಯಂಗಾರ್–ವೀಣಾವಾದನ, 11.00 ಮಿಶ್ರ ಮಾಧುರ್ಯ **ಮಧ್ಯಾಹ್ನ:** 12.30 ದೇವರ ನಾಮ–ಅಮೃತಾ ವೆಂಕಟೇಶ್, ರೇಖಾ ವೆಂಕಟೇಶ್, 1.20 ಭಾವಗೀತೆಗಳು–ವಾಣಿ ಮರಡೂರ್, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತಿ–ಸರ್ ಸಿ.ವಿ.ರಾಮನ್ ಯುವ ವಿಜ್ಞಾನಿ ಪ್ರಶಸ್ತಿ ಪುರಸ್ಕೃತ ಡಾ.ಪ್ರಸನ್ನ ಸಂತೆ ಕಡೂರು ಅವರೊಂದಿಗೆ ಮಾತುಕತೆ, 5.00 ಮಿಶ್ರ ಮಾಧುರ್ಯ, 6.50 ಕೃಷಿರಂಗ–ಕಿಸಾನ್‌ವಾಣಿ–ಸಮಗ್ರ ಕೃಷಿ ಅನುಭವ ಕುರಿತು ಕೆ.ಜಿ.ಸತ್ಯಮೂರ್ತಿ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎಸ್.ಸಿ.ಹೇಮಕುಮಾರ್, 8.00 ಯುವವಾಣಿ–ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ವಿಶೇಷ ರಸಪ್ರಶ್ನೆ ಕಾರ್ಯಕ್ರಮ, ಪ್ರಸ್ತುತಿ–ನಿವೇದಿತಾ ಹೆಚ್. 9.30 ಕನ್ನಡ ಭಾರತಿ, 10.00 ನಾಟಕ–"ನಿರುತ್ತರ ಕುಮಾರ", ಮೂಲ– ಶ್ರೀರಂಗ ಬಾನುಲಿ ರೂಪ–ಡಾ.ಬಿ.ಎಸ್.ಪ್ರಣತಾರ್ಥಿಹರನ್ ನಿರ್ದೇಶನ– ಶ್ರೀನಿವಾಸ ಪ್ರಸಾದ್, ನಿರ್ಮಾಣ– ಸುನಂದಾಮೂರ್ತಿ, 10.30 ಸವಿನೆನಪು

■ **ಲಯನ್ಸ್ ಕ್ಲಬ್ ಆಫ್ ಮೈಸೂರು ಗೋಲ್ಡನ್ ಸಿಟಿ, ಲಯನ್ಸ್ ಕ್ಲಬ್ ಆಫ್ ಕಾಮಧೇನು, ಲಯನ್ಸ್ ಕ್ಲಬ್ ಆಫ್ ಸ್ಯಾಂಡಲ್‌ವುಡ್, ಲಯನ್ಸ್ ಕ್ಲಬ್ ಆಫ್ ಮೈಸೂರು ಈಸ್ಟ್, ಸ್ಪರ್ಷ ಆಸ್ಪತ್ರೆ, ಸೇಂಟ್ ಜೋಸೆಫ್ ಆಸ್ಪತ್ರೆ ಬ್ಲಡ್ ಬ್ಯಾಂಕ್:** ಬಡಕುಟುಂಬದ ವಿಶೇಷಚೇತನರಿಗೆ ಉಚಿತ ಕೃತಕ ಕಾಲು ಜೋಡಣೆ, ನೇತ್ರ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ, ಕಾರ್ಮಿಕರ ಕಾರ್ಡ್ ನೋಂದಣಿ ಶಿಬಿರ, ಸಾನ್ನಿಧ್ಯ: ಅನಂತಶ್ರೀ ವಿಭೂಷಿತ ಶಿವಸುಜ್ಞಾನ ತೀರ್ಥ ಮಹಾಸ್ವಾಮೀಜಿ, ಮುಖ್ಯ ಅತಿಥಿಗಳು: ಡಾ.ನಾಗರಾಜ್ ವಿ.ಭೈರಿ, ಮಹಾವೀರ ಚಂದ್ ಬನ್ಸಾಲಿ, ವೆಂಕಟೇಶ್. ಎಂ.ಆರ್. ರಾಜಾರಾಮ್, ಬಿ.ರವಿಪ್ರಕಾಶ್, ಟಿ.ಸುರೇಶ್, ಡಾ.ಚೇತನ್, ಕರ್ನಾಟಕ ಹಾಲು ಮಹಾಮಂಡಳಿ ಹಿರಿಯ ಉಪನಿರ್ದೇಶಕ ಪೂರ್ಣಚಂದ್ರ ತೇಜಸ್ವಿ, ಜಯಕುಮಾರ್, ರಾಜೇಶ್ ಕೆ. ಜಾದವ್, ಸ್ಥಳ: ಮೇಸ್ತ್ರಿ ತಿಮ್ಮಯ್ಯಾಚಾರ್ ಕಲ್ಯಾಣ ಮಂಟಪ, ಬೆಳಗ್ಗೆ 9ಕ್ಕೆ.

■ **ಶ್ರೀ ನಟರಾಜ ಮಹಿಳಾ ಪ್ರಥಮ ದರ್ಜೆ ಕಾಲೇಜು:** ಅಂತರ ಕಾಲೇಜು ಹಬ್ಬ, ವಿಷಯ: ವಿಶ್ವ ಪರಿಸರ, ಉದ್ಘಾಟನೆ: ಸೈಕಲ್ ಪ್ಯೂರ್ ಅಗರಬತ್ತೀಸ್ ಚೀಫ್ ಆಪರೇಟಿಂಗ್ ಆಫೀಸರ್ ಎಂ.ಆರ್.ಸುರೇಶ್, ಮುಖ್ಯ ಅತಿಥಿಗಳು: ಪ್ರಿನ್ಸಿಪಾಲ್ ಪ್ರಕಾಶ್ ನವಿಲೂರ್, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಡಾ.ಶಾರದಾ, ಉಪಸ್ಥಿತರು: ನಟರಾಜ ಪ್ರತಿಷ್ಠಾನ ವಿಶೇಷ ಅಧಿಕಾರಿ ಡಾ.ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10ಕ್ಕೆ.

■ **ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಪೀಠ, ಜೆಎಸ್‌ಎಸ್ ಮಹಾವಿದ್ಯಾಪೀಠ :** ಅಧ್ಯಯನ ಶಿಬಿರ, ಕಲ್ಲುಮಠದ ಪ್ರಭುದೇವರ ಲಿಂಗಲೀಲಾವಿಲಾಸ ಚಾರಿತ್ರ್ಯ, ಉಪನ್ಯಾಸ–1, ಪ್ರೊ. ಮೊರಬದ ಮಲ್ಲಿಕಾರ್ಜುನ ಅವರಿಂದ ಐಕ್ಯಸ್ಥಲ–ಸ್ವಲೀಲಾನಂದ ಭಕ್ತಿಸ್ಥಲ, ಉಪನ್ಯಾಸ–2, ಡಾ. ಮೃತ್ಯುಂಜಯ ರುಮಾಲೆ ಅವರಿಂದ ಕೃತಿ ಸೃಷ್ಟಿ ಸಂದರ್ಭ, ಉಪನ್ಯಾಸ–3, ಡಾ. ಮೃತ್ಯುಂಜಯ ರುಮಾಲೆ ಅವರಿಂದ ಸಾಹಿತ್ಯ ಸಂದರ್ಭ ಮತ್ತು ಯುಗಧರ್ಮ ಕುರಿತು ಉಪನ್ಯಾಸ, ಸ್ಥಳ: ಸುತ್ತೂರು ಶ್ರೀ ಕ್ಷೇತ್ರ, ಬೆಳಗ್ಗೆ 10 ರಿಂದ.

■ **ಶ್ರೀರಾಘವೇಂದ್ರಸ್ವಾಮಿ ಸೇವಾ ಸಮಿತಿ:** ವಿದ್ವಾಂಸರಾದ ಪಂಡಿತ್ ಅನಿರುದ್ಧಾಚಾರ್ ಪಾಂಡುರಂಗಿ ಅವರಿಂದ ಪದ್ಮಪುರಾಣ ಕುರಿತು ಪ್ರವಚನ, ಸ್ಥಳ: ಶ್ರೀರಾಯರ ಮಠ, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ವಿಶ್ವ ದೂರಸಂಪರ್ಕ ಮತ್ತು ಮಾಹಿತಿ ಸಮಾಜ ದಿನ ಆಚರಣೆ ಕುರಿತು ಭಾರತ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ. ಗೋಪಿನಾಥ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀರಾಘವೇಂದ್ರಸ್ವಾಮಿಗಳವರ ಬೃಂದಾವನ ಸನ್ನಿಧಾನ, ಕೃಷ್ಣಮೂರ್ತಿಪುರಂ :** ಶ್ರೀ ರಾಘವೇಂದ್ರ ಸ್ವಾಮಿಗಳ 76ನೇ ಬೃಂದಾವನ ಪ್ರತಿಷ್ಠಾಪನಾ ವರ್ಧಂತ್ಯುತ್ಸವ ಜ್ಞಾನಸತ್ರ, ಪಂಡಿತ್ ಕಪಿಲಾಚಾರ್ಯ ಗಲಗಲಿ, ಧಾರವಾಡ ಅವರಿಂದ ಶ್ರೀಮದ್ಭಾಗವತ ಪ್ರವಚನ, ಸ್ಥಳ: ತತ್ವಜ್ಞಾನ ಮಂದಿರ, ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಆವರಣ, ಸಂಜೆ 6ಕ್ಕೆ.

# ಸಮ್ಮಿಶ್ರ ಸರ್ಕಾರ ಪತನಕ್ಕೆ ಸಿದ್ದರಾಮಯ್ಯ ಪ್ರೇರಣೆಯೇ ಕಾರಣ

## ಮಾಜಿ ಸಚಿವರಾದ ಡಾ.ಸುಧಾಕರ್, ಎಸ್.ಟಿ.ಸೋಮಶೇಖರ್ ಟ್ವೀಟಾಸ್ತ್ರ ಪ್ರಯೋಗ; ಎಂಟಿಬಿ ನಾಗರಾಜ್ ಪ್ರತಿಯಾಗಿ ಟ್ವೀಟಾಸ್ತ್ರ





ಬೆಂಗಳೂರು, ಮೇ 17(ಕೆಎಂಶಿ)– ಹೆಚ್.ಡಿ. ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರ ಪತನಕ್ಕೆ ಮಾಜಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರ ಪ್ರೇರಣೆಯೇ ಕಾರಣ ಎಂದು ಮಾಜಿ ಸಚಿವರಾದ ಡಾ.ಸುಧಾಕರ್ ಮತ್ತು ಎಸ್.ಟಿ.ಸೋಮಶೇಖರ್ ಆರೋಪಿಸಿದ್ದಾರೆ. ಈ ಸಂಬಂಧ ಪ್ರತ್ಯೇಕ ಟ್ವೀಟ್ ಮಾಡಿರುವ ಮಾಜಿ ಸಚಿವರು, ಸಮ್ಮಿಶ್ರ ಸರ್ಕಾರ ಪತನಗೊಳ್ಳಲು ಸಿದ್ದರಾಮಯ್ಯ ಕಾರಣ ಎಂಬ ರೀತಿಯಲ್ಲಿ ಸ್ಫೋಟಕ ಮಾಹಿತಿ ಹೊರಹಾಕಿದ್ದಾರೆ.

ಇವರಿಬ್ಬರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಕಾಂಗ್ರೆಸ್ ತೊರೆದು ಆಪರೇಷನ್ ಕಮಲದ ಮೂಲಕ ಬಿಜೆಪಿ ಸೇರಿದ್ದವರು. 2018ರಲ್ಲಿದ್ದ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಲ್ಲಿ ನಮಗಾಗುತ್ತಿದ್ದ ಅನ್ಯಾಯದ ಬಗ್ಗೆ ಹೇಳಿಕೊಳ್ಳಲು ಶಾಸಕರುಗಳು ಸಮನ್ವಯ ಸಮಿತಿ ಅಧ್ಯಕ್ಷರಾಗಿದ್ದ ಸಿದ್ದರಾಮಯ್ಯನವರ ಬಳಿ ಹೋದಾಗಲೆಲ್ಲ ಈ ಸರ್ಕಾರದಲ್ಲಿ ನನ್ನದೇ ಏನೂ ನಡೆಯುತ್ತಿಲ್ಲ. ನನ್ನ ಕ್ಷೇತ್ರದ, ನನ್ನ ಜಿಲ್ಲೆಯ ಕೆಲಸಗಳೇ ಆಗುತ್ತಿಲ್ಲ ಎಂದು ಹೇಳುತ್ತಿದ್ದರು ಎಂದು ಸುಧಾಕರ್ ತಿಳಿಸಿದ್ದಾರೆ.

2019ರ ಲೋಕಸಭೆ ಚುನಾವಣೆವರೆಗೂ ಸಹಿಸಿಕೊಳ್ಳಿ. ಲೋಕಸಭೆ ಚುನಾವಣೆ ಮುಗಿದ ನಂತರ ಯಾವುದೇ ಕಾರಣಕ್ಕೂ ಒಂದು ದಿವಸವೂ ಹೆಚ್.ಡಿ. ಕುಮಾರಸ್ವಾಮಿ ಅವರ ನೇತೃತ್ವದ ಈ ಸಮ್ಮಿಶ್ರ ಸರ್ಕಾರ ಇರಲು ಬಿಡುವುದಿಲ್ಲ ಎಂದು ಶಾಸಕರುಗಳಿಗೆ ಸಮಾಧಾನ ಮಾಡುತ್ತಿದ್ದರು ಎಂದು ಆರೋಪಿಸಿದ್ದಾರೆ.

ನಮ್ಮ ಕ್ಷೇತ್ರಗಳಲ್ಲಿ ನಮ್ಮನ್ನು ನಂಬಿದ ಕಾರ್ಯಕರ್ತರನ್ನು, ಮುಖಂಡರನ್ನು ಉಳಿಸಿ ಕೊಳ್ಳಲು ದೊಡ್ಡ ರಿಸ್ಕ್ ತೆಗೆದುಕೊಂಡು ರಾಜೀನಾಮೆ ಕೊಟ್ಟು, ಮತ್ತೊಮ್ಮೆ ಜನರಿಂದ ಆರಿಸಿ ಬಂದು ಮಂತ್ರಿಗಳಾದೆವು. ನಮ್ಮ ನಡೆಯಲ್ಲಿ ಸಿದ್ದರಾಮಯ್ಯನವರ ಪ್ರೇರಣೆ, ಪ್ರತ್ಯಕ್ಷ ಅಥವಾ ಪರೋಕ್ಷ ಪಾತ್ರ ಇಲ್ಲವೆಂದು ಸಿದ್ದರಾಮಯ್ಯನವರು ನಿರಾಕರಿಸಲು ಸಾಧ್ಯವೇ? ಎಂದು ಮಾಜಿ ಸಚಿವ ಡಾ.ಸುಧಾಕರ್ ಪ್ರಶ್ನಿಸಿದ್ದಾರೆ.

ಇನ್ನು ಸೋಮಶೇಖರ್ ಅವರು ತಮ್ಮ ಟ್ವೀಟ್‌ನಲ್ಲಿ ಸಿದ್ದರಾಮಯ್ಯನವರು ಸಮ್ಮಿಶ್ರ ಸರ್ಕಾರದ ದಿನಗಳಲ್ಲಿ ಶಾಸಕರಲ್ಲಿ ತೋಡಿಕೊಳ್ಳುತ್ತಿದ್ದ ಅಸಹಾಯಕತೆ, ಕೊಡುತ್ತಿದ್ದ ಆಶ್ವಾಸನೆ ಇದೇ ಎಂಬುದು ಸತ್ಯ. ಸಿದ್ದರಾಮಯ್ಯನವರ ಅಸಹಾಯಕತೆ ಸಹ ನಾವು ಪಕ್ಷ ಬಿಡಲು ಒಂದು ಪ್ರೇರಣೆಯಾಯಿತು ಎಂದರೆ ಅದು ತಪ್ಪಾಗಲಾರದು ಎಂದು ಆರೋಪಿಸಿದ್ದಾರೆ.

**ಸತ್ಯಕ್ಕೆ ದೂರವಾಗಿದೆ:** ಸಿದ್ದರಾಮಯ್ಯ ಅವರ ಬಗ್ಗೆ ಮಾಜಿ ಸಚಿವ ಡಾ.ಸುಧಾಕರ್ ಹೇಳಿದ್ದು ಸತ್ಯಕ್ಕೆ ದೂರವಾದ ಮಾತು ಎಂದು ಮಾಜಿ ಸಚಿವ ಎಂ.ಟಿ.ಬಿ.ನಾಗರಾಜ್ ಹೇಳಿದ್ದಾರೆ. ಈ ಬಗ್ಗೆ ಟ್ವೀಟ್ ಮಾಡಿರುವ ಅವರು, ಬಿಜೆಪಿ ಸೇರಲು ಸಿದ್ದರಾಮಯ್ಯ ಅವರ ಪಾತ್ರ ಇದೆ ಎಂದು ಸುಧಾಕರ್ ತಮ್ಮ ಮನೆ ದೇವರ ಮೇಲೆ ಪ್ರಮಾಣ ಮಾಡಿ ಹೇಳುವರೇ ಎಂದು ಪ್ರಶ್ನೆ ಮಾಡಿದ್ದಾರೆ.



ಮಾನ್ಯ ಸಿದ್ದರಾಮಯ್ಯರವರನ್ನು ನಾನು ಕೂಡ ಹಲವಾರು ಬಾರಿ ಭೇಟಿ ಮಾಡಿ ಸಮ್ಮಿಶ್ರ ಸರ್ಕಾರದಲ್ಲಿ ನಮ್ಮ ಕ್ಷೇತ್ರದಲ್ಲಿ ಹಾಗೂ ನಮ್ಮ ಉಸ್ತುವಾರಿ ಜಿಲ್ಲೆಗಳಲ್ಲಿ ಏನು ಕೆಲಸ ಕಾರ್ಯಗಳು ಆಗುತ್ತಿಲ್ಲವೆಂದು ಹೇಳಿಕೊಂಡಾಗ ಲೋಕಸಭೆ ಚುನಾವಣೆವರೆಗೆ ಸುಮ್ಮನಿರಿ ಎಂದು ಹೇಳಿದ್ದರು ಇದು ಸತ್ಯ.

ಮಾಜಿ ಸಚಿವರಾದ ಸುಧಾಕರ್ ರವರು ಇಂದು ಸಿದ್ದರಾಮಯ್ಯರವರ ಬಗ್ಗೆ ಟ್ವಿಟರ್‌ನಲ್ಲಿ ಟ್ವೀಟ್ ಮಾಡಿರುವ ಮಾತುಗಳು ಸತ್ಯಕ್ಕೆ ದೂರವಾಗಿದ್ದು, ಸುಧಾಕರ್ ರವರು ಚುನಾವಣೆಯಲ್ಲಿ ಸೋತ ನಂತರ ಭ್ರಮನಿರಸನರಾಗಿ ಈ ಮಾತುಗಳನ್ನು ಹೇಳಿದ್ದಾರೆ. ಹಾಗಾದರೆ, ಇಷ್ಟು ದಿನ ಏಕೆ ಸುಮ್ಮನಿದ್ದರು. ಬಿಜೆಪಿ ಸೇರಲು ಸಿದ್ದರಾಮಯ್ಯರವರ ಪ್ರೇರಣೆ, ಪರೋಕ್ಷ ಅಥವಾ ಅಪರೋಕ್ಷ ಪಾತ್ರ ಇತ್ತೆಂದು ಸುಧಾಕರ್ ರವರು ತಮ್ಮ ಮನೆ ದೇವರ ಮೇಲೆ ಪ್ರಮಾಣ ಮಾಡಿ ಹೇಳುವರೆ, ಇಷ್ಟು ದಿನ ಮೌನವಾಗಿದ್ದು ಈಗ ಇದರ ಪ್ರಸ್ತಾಪದ ಮರ್ಮವಾದರೂ ಏನು.



ಶಿಕಾರಿಪುರ ವಿಧಾನಸಭಾ ಕ್ಷೇತ್ರದ ನೂತನ ಶಾಸಕ ಬಿ.ವೈ.ವಿಜಯೇಂದ್ರ ಅವರನ್ನು ಮೈಲ್ಯಾಕ್ ಮಾಜಿ ಅಧ್ಯಕ್ಷ ಆರ್.ರಘು ಕೌಟಿಲ್ಯ ಅಭಿನಂದಿಸಿದರು.



ಕೃಷ್ಣರಾಜ ಕ್ಷೇತ್ರದ ನೂತನ ಶಾಸಕ ಟಿ.ಎಸ್.ಶ್ರೀವತ್ಸ ಪರಕಾಲ ಮಠದ ಶ್ರೀ ಅಭಿನವ ವಾಗೀಶ ಬ್ರಹ್ಮತಂತ್ರ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಖಂಡೇಶ್, ಮಾಧ್ಯಮ ಸಹ ಸಂಚಾಲಕ ಪ್ರದೀಪ್‌ಕುಮಾರ್, ಕಲ್ಕೆರೆ ನಾಗರಾಜ್, ಟಿ.ಎಸ್.ಅರುಣ್, ದೀಪಕ್, ಮಧು, ರಾಕೇಶ್ ಭಟ್ ಹಾಗೂ ಬಿಜೆಪಿ ಮುಖಂಡರು ಉಪಸ್ಥಿತರಿದ್ದರು.

## ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಮೇ 17– ಮೈಸೂರಿನ ಸಿಕೆಸಿ ಪ್ರೌಢಶಾಲೆಯ ವಿದ್ಯಾರ್ಥಿನಿ ಎಲ್.ಕೆ.ವೇದಾವತಿ ಈ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 515 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಮೈಸೂರಿನ ಕೆ.ಜಿ.ಕೊಪ್ಪಲು ನಿವಾಸಿ ಆರ್.ಕುಮಾರ್ ಮತ್ತು ಶ್ರೀಮತಿ ಎಂ.ಲೀಲಾ ದಂಪತಿ ಪುತ್ರಿ.

## ಸಾರ್ವಜನಿಕ ಪ್ರಕಟಣೆ


ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರಾದ ಮೈಸೂರು ಸಿಟಿ ವಿದ್ಯಾರಣ್ಯ ಪುರಂ, 4ನೇ ಮೈನ್, 2ನೇ ಕ್ರಾಸ್, ಮನೆ ನಂ. 905/32 ರಲ್ಲಿ ವಾಸವಾಗಿರುವ ಸಿದ್ದಪ್ಪನವರ ಮಗನಾದ ಸುಮಾರು 52 ವರ್ಷವಯಸ್ಸಿನ ಎಸ್.ರಮೇಶ್ (ಆಧಾರ್ ನಂ7003 0462 6101) ರವರಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗಾದರೂ ಯಾವುದೇ ತಂಟೆ ತಕರಾರು ಇದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ 7 ದಿವಸಗಳೊಳಗೆ ಈ ಕೆಳಕಂಡ ವಿಳಾಸದಾರರಿಗೆ ಯಾವುದೇ ವ್ಯಕ್ತಿಗಳು ದಾಖಲೆ ಸಹಿತ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಮುಂದೆ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ತಂಟೆ ತಕರಾರು ಇಲ್ಲವೆಂದು ತಿಳಿದು – ವ್ಯವಹರಿಸುತ್ತಾರೆ. 7 ದಿನಗಳ ನಂತರ ಬಂದ ಯಾವುದೇ ದೂರನ್ನು ಸ್ವೀಕರಿಸಲಾಗುವುದಿಲ್ಲಾ. ನಮ್ಮ ಅಭಿಪ್ರಾಯ ದಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಭಂದಿಸಿದಂತೆ ಯಾವುದೇ ವಿಧವಾದ ವ್ಯಾಜ್ಯಗಳಾಗಲಿ ದಾವೆಗಳಾಗಲಿ ಇರುವುದಿಲ್ಲ. ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರಿಂದ ಖರೀದಿಸಬಹುದಾಗಿದೆ. ಯಾವುದೇ ದಾಖಲೆ ಇಲ್ಲದೆ ಸುಳ್ಳು ತಕರಾರನ್ನು ನೀಡಿದವರ ವಿರುದ್ಧ ಕ್ರಿಮಿನಲ್ ಕೇಸನ್ನು ದಾಖಲಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.


### ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಚಿಲ್ಲೆ .ಮೊಹಲ್ಲಾ, ವಿದ್ಯಾರಣ್ಯ ಪುರಂ 2ನೇಕ್ರಾಸ್ 4ನೇ ಮೈನ್ ನಲ್ಲಿರುವ ಸ್ವತ್ತಿನ ಸಂಖ್ಯೆ 905/32 ಹೊಸ ನಂ.ಎಫ್–9 ಸ್ವತ್ತಿಗೆ ಚಕ್ಕುಬಂದಿ; ಪೂರ್ವಕ್ಕೆ: ಸ್ವತ್ತಿನ ಸಂಖ್ಯೆ 905/31, ಪಶ್ಚಿಮಕ್ಕೆ: ಸ್ವತ್ತಿನ ಸಂಖ್ಯೆ 905/33ಎ, ಎಫ್10/1, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸ್ವತ್ತಿನ ಸಂಖ್ಯೆ 24 (ಹೊಸ ನಂ.39) ಈ ಮಧ್ಯೆಯಿರುವ ಪೂರ್ವ ಪಶ್ಚಿಮ– 40 ಅಡಿಗಳು ದಕ್ಷಿಣೋತ್ತರ 56.50 ಅಡಿಗಳು ಒಟ್ಟು 2260 ಚದರ ಅಡಿ ವಿಸ್ತೀರ್ಣವುಳ್ಳ ನಿವೇಶನ ಹಾಗು ಇದರಲ್ಲಿ ಕಟ್ಟಿರುವ ಸುಮಾರು 20 ಚದರ ಮನೆ.

Sd/- S UMESH, M.,M.S. VANI,
K.Sheshaih, ADVOCATES #369
Jhansi Lakshmi Bai Road,
MYSURU-570 005. Cell: 9448342677











(ಸಹಕಾರ ಇಲಾಖೆ)

ಸಹಕಾರ ಸಂಘಗಳ ಜಂಟಿ ನಿಬಂಧಕರು(ಸಿ.441), ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ, ಸಂಚಾರಿ ಪೀಠ, 1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ-590015

**ವಾದಿ** : ವ್ಯವಸ್ಥಾಪಕ ನಿರ್ದೇಶಕರು, ಸ್ಯೆಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ ಕಾರವಾರ ಕೇಶವ ಶೇಟ ರಸ್ತೆ, 1ನೇ ಕ್ರಾಸ್, ಸೋನಾರವಾಡ, ಕಾರವಾರ–581 304 (ಉ.ಕ.)

ವಿರುದ್ಧ

**ಪ್ರತಿವಾದಿಗಳು** : ವ್ಯಾಜ್ಯ ಸಂಖ್ಯೆ ಜೆಆರ್‌ಡಿ/ಕ.ರಾ.ಸೌ.ಸಂ.ಸ.ನಿ./2287/2021–22
3. ಭರತ್ ಬಿ.ಸಿ.ಬಿನ್ ಚನ್ನಯ್ಯ ಬಿ. ಎಚ್. ಸಾ: 926, 2 ನೇ ಹಂತ, ವಿಜಯನಗರ ಪೋ. ವಿಜಯನಗರ, 4ನೇ ಹಂತ, , ಮೈಸೂರು–570017

### ಪ್ರತಿವಾದಿಗಳಿಗೆ ಪತ್ರಿಕಾ ಪ್ರಕಟಣೆ ಮೂಲಕ ನೋಟಿಸ್


ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ಪ್ರತಿವಾದಿಗಳ ದಾವಾ ಸಂಖ್ಯೆ: ಡಿಆರ್‌ಡಿ/ಕ.ರಾ.ಸೌ.ಸಂ.ಸ.ನಿ. /2287/2021–22 ರಂತೆ ಸಹಕಾರಿಗಳ ಜಂಟಿ ನಿಬಂಧಕರು, ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ (ನಿ.441) ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಬೆಳಗಾವಿ ವಿಭಾಗೀಯ ಕಛೇರಿ, 119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ್‌ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ನ್ಯಾಯಾಲಯದಲ್ಲಿ ಪರಿಹಾರ ಕರಾರು ಅಡಿಯಲ್ಲಿ ದಾವೆಯನ್ನು ಸಲ್ಲಿಸಿದ್ದು, ನೀವು ಪ್ರತಿವಾದಿಯಾಗಿರುತ್ತೀರಿ. ಆದುದರಿಂದ ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ನ್ಯಾಯಾಲಯದ ಮುಂದೆ ದಿ: 23.05.2023 ರಂದು ಮಧ್ಯಾಹ್ನ 3.00 ಗಂಟೆಗೆ ಸರಿಯಾಗಿ ತಾವಾಗಲಿ, ತಮ್ಮಿಂದ ನೇಮಕಗೊಂಡ ವಕೀಲರ ಮುಖಾಂತರವಾಗಲಿ ಹಾಜರಾಗಲು ಈ ಮೂಲಕ ತಿಳಿಯಪಡಿಸುತ್ತೇವೆ. ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಲ್ಲ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸಲಾಗುವುದು.

ಸದರಿ ಪ್ರಕಟಣೆಯನ್ನು ದಿ:12/05/2023 ರಂದು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

Sd/- Branch Manager,
kalidasa Road, Mysuru,
St. Milagres Credit Co-op
Society Ltd., Karwar

ಸಹಿ/– ಸಹಕಾರಿಗಳ ಜಂಟಿ
ನಿಬಂಧಕರು(ನಿ.441)(ಪ್ರ) ದಾವಾ ಪಂಚಾಯ್ತಿ
ನ್ಯಾಯಾಲಯ ಕ.ರಾ.ಸೌ.ಸಂ.ಸ.ನಿ. ಬೆಳಗಾವಿ
ಸಂಚಾರಿ ಪೀಠ, ಬೆಳಗಾವಿ.



## ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : (ರೋಗಿಯನ್ನು ಪರೀಕ್ಷೆ ಮಾಡಿ) "ನಿಮ್ಮ ನಾಡಿ ಬಡಿತ ಗಡಿಯಾರದ ಮುಳ್ಳಿನಷ್ಟೇ ನಿಖರವಾಗಿದೆಯಲ್ಲಾ..?"

ರೋಗಿ : "ಡಾಕ್ಟರ್, ನೀವು ನನ್ನ ಗಡಿಯಾರವನ್ನು ಹಿಡಿದುಕೊಂಡಿದ್ದೀರಾ!"

ಮೈಸೂರು ಮಿತ್ರ

ಗುರುವಾರ, 18 ಮೇ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

**ಅಮೃತವಾಹಿನಿ.........**

ಸಲಹೆಗಳನ್ನು ಪಡೆಯುವವರು ಬಹಳ ಮಂದಿ.
ಅದರ ಲಾಭ ಪಡೆಯುವವರು ಕೆಲವೇ ಮಂದಿ – ಸೈರಸ್

**ವೇದ ಸುಳ್ಳಾದರೂ ಗಾದೆ ಸುಳ್ಳಾಗದು** { ಬಲ್ಲವನಾದರೂ ಕಲ್ಲು ತಗುಲಿದರೆ ತಲ್ಲಣಿಸದೇ ಇರನು

## ನಿಮ್ಮ ಪತ್ರಗಳು

### ಕಾಂಗ್ರೆಸ್ ಸರ್ಕಾರವು "ಗ್ಯಾರಂಟಿ" ಭರವಸೆಗಳನ್ನು ಈಡೇರಿಸಲು ಮನವಿ

ಮಾನ್ಯರೆ,

ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವು ಚುನಾವಣೆಯಲ್ಲಿ ಅಭೂತಪೂರ್ವ ಜಯಭೇರಿ ಬಾರಿಸಿದ್ದು, ಚುನಾವಣೆ ಪೂರ್ವದಲ್ಲಿ "ಗ್ಯಾರಂಟಿ" ಎಂಬ ಘೋಷಣೆ ಮೂಲಕ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದೆ. ಸತತ ಬೆಲೆ ಏರಿಕೆಗಳಿಂದ ಕಂಗಾಲಾಗಿದ್ದ ಜನರಿಗೆ ಆಸರೆಯಾಗುವಂತೆ, ಕಾಂಗ್ರೆಸ್ ಪಕ್ಷವು ಪ್ರಣಾಳಿಕೆಯಲ್ಲಿ ಉಚಿತ ಘೋಷಣೆಗಳನ್ನು ಮಾಡಿ, ಮತದಾರರನ್ನು ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾಯಿತು, ಅದರಂತೆ ಕಾಂಗ್ರೆಸ್ ಅಭ್ಯರ್ಥಿಗಳು ಪ್ರತಿ ಮನೆ ಮನೆಗೆ ತೆರಳಿ ಗ್ಯಾರಂಟಿಯ ಬಗ್ಗೆ ಮತದಾರರಿಗೆ ಮನವೊಲಿಸಿ ಆಶ್ವಾಸನೆಯನ್ನು ನೀಡಿತ್ತು. ಮತದಾರರು ಕೂಡ ಗ್ಯಾರಂಟಿಗೆ ಮನಸೋತು, ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬರುವಂತೆ ಮತ ಚಲಾಯಿಸಿ ಸ್ಪಷ್ಟ ಬಹುಮತವನ್ನು ನೀಡಿದ್ದಾರೆ. ಕೊಟ್ಟ ಮಾತಿನಂತೆ ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್, ಮಹಿಳೆಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣ, ಪ್ರತಿ ಮನೆಯ ಯಜಮಾನಿಗೆ 2,000 ರೂ, ಅನ್ನಭಾಗ್ಯ ಯೋಜನೆಯಡಿ ತಲಾ ಹತ್ತು ಕೆಜಿ ಅಕ್ಕಿ ಉಚಿತ, ನಿರುದ್ಯೋಗಿ ಪದವೀಧರರಿಗೆ ಪ್ರತಿ ತಿಂಗಳು 3,000 ರೂ, ನಿರುದ್ಯೋಗಿ ಡಿಪ್ಲೊಮಾ ಪೂರ್ಣಗೊಳಿಸಿದವರಿಗೆ 1,500 ರೂ, ಈ ಎಲ್ಲಾ ಯೋಜನೆಗಳನ್ನು ಕಾಂಗ್ರೆಸ್ ಪಕ್ಷವು ಗ್ಯಾರಂಟಿ ಪ್ರಣಾಳಿಕೆಯಲ್ಲಿ ಘೋಷಣೆಯನ್ನು ಮಾಡಿದ್ದು, ಅವುಗಳನ್ನು ಜಾರಿಗೆ ತಂದು ಜನರ ವಿಶ್ವಾಸವನ್ನು ಗಳಿಸಬೇಕು, ಕಾಂಗ್ರೆಸ್ ಪಕ್ಷವು ಅತಿ ಶೀಘ್ರದಲ್ಲಿ ಸರ್ಕಾರವನ್ನು ರಚನೆ ಮಾಡಿ, ಮತದಾರನಿಗೆ ಕೊಟ್ಟ ಮಾತಿನಂತೆ ನಡೆದುಕೊಳ್ಳಬೇಕು, ಈಗಾಗಲೇ ಹಲವು ಗ್ರಾಮಗಳಲ್ಲಿ ವಿದ್ಯುತ್ ಬಿಲ್ ವಸೂಲಿಗೆ ಹೋದ ಚೆಸ್ಕಾಂ ಸಿಬ್ಬಂದಿಗಳಿಗೆ ನಾವು ವಿದ್ಯುತ್ ಬಿಲ್ ಕಟ್ಟುವುದಿಲ್ಲ ಎಂದು ತಕರಾರು ಮಾಡುತ್ತಾ, ಗೊಂದಲದ ವಾತಾವರಣ ಸೃಷ್ಟಿಯಾಗಿದೆ, ಅನೇಕ ಕಡೆ ಛೀಮಾರಿ ಹಾಕಿ ವಾಪಸ್ ಕಳಿಸುತ್ತಿರುವ ಘಟನೆಗಳು ನಡೆಯುತ್ತಿವೆ, ಜನರ ಸಹನೆಯ ಕಟ್ಟೆ ಹೊಡೆಯುವುದಕ್ಕೂ ಮೊದಲೇ ಕಾಂಗ್ರೆಸ್ ಪಕ್ಷವು ಈಗಲೇ ಎಚ್ಚೆತ್ತುಕೊಂಡು ಗ್ಯಾರಂಟಿಯನ್ನು "ಗ್ಯಾರಂಟಿ" ಆಗುವಂತೆ ಮತದಾರರಿಗೆ ಅತಿ ಶೀಘ್ರದಲ್ಲೇ ಈಡೇರಿಸಬೇಕೆಂದು ಮನವಿ.

**–ಪರಶಿವಮೂರ್ತಿ ಎನ್ ಪಿ, ನಂಜೇಪುರ, ಸರಗೂರು ತಾಲೂಕು.**

### ಹೀಗೂ ಶಾಯಿ ಬಳಿಯುತ್ತಾರಾ?!



ಮಾನ್ಯರೆ,

ದಿನಾಂಕ 10.5.2023 ರಂದು ಕರ್ನಾಟಕ ರಾಜ್ಯದಲ್ಲಿ ವಿಧಾನಸಭೆಗೆ ಚುನಾವಣೆಗಳು ನಡೆದಿರುವುದು ಸರಿಯಷ್ಟೆ ಹಾಗೆ ಮತ ಚಲಾವಣೆಯ ಪ್ರಕ್ರಿಯೆಯಲ್ಲಿ ಭಾಗವಹಿಸುವ ಎಲ್ಲಾ ಸರ್ಕಾರಿ ಸಿಬ್ಬಂದಿಗಳಿಗೆ ಎರಡು, ಮೂರು ದಿನಗಳ ತರಬೇತಿಯನ್ನು ಸಹ ಸಂಬಂಧಿಸಿದ ಜಿಲ್ಲಾ ಕೇಂದ್ರಗಳಲ್ಲಿ ನೀಡಲಾಗಿತ್ತು ಆದರೆ, ವಿಪರ್ಯಾಸವೆಂದರೆ, ಆ ಸಿಬ್ಬಂದಿಗಳಿಗೆ ಮತ ಚಲಾಯಿಸುವ ಮಂದಿಯ ತೋರು ಬೆರಳಿಗೆ ಯಾವ ರೀತಿ ಮಸಿ ಹಾಕಬೇಕು ಎನ್ನುವುದನ್ನು ತಿಳಿಸಿ ಕೊಡಬೇಕಿತ್ತು ಉದಾಹರಣೆಗೆ ಚಿತ್ರ ನೋಡಿ, ಇದು ನಗರದ ಚಾಮರಾಜ ವಿಧಾನಸಭಾ ಕ್ಷೇತ್ರದ ಒಂದು ಮತಗಟ್ಟೆಯಲ್ಲಿನ ಮಹಿಳಾ ಸಿಬ್ಬಂದಿ ಮಸಿ ಹಾಕಿದ ಪರಿ. ಅವರು ಒಂದು ತೆಂಗಿನ ಕಡ್ಡಿಯ ಮುಂಭಾಗವನ್ನು ಜಜ್ಜಿ ಅದರಲ್ಲಿಯೇ ಮಸಿ ಹಾಕುತ್ತಿದ್ದರು, ಕ್ಷಮಿಸಿ ಬಳಿಯುತ್ತಿದ್ದರು. ಬಹಳಷ್ಟು ಜನರ ತೋರು ಬೆರಳಿಗೆ ಮಾತ್ರವಲ್ಲದೇ ಪಕ್ಕದ ಬೆರಳುಗಳಿಗೂ ಮತ್ತು ಕೈಗಳಿಗೆ ಈ ಮಸಿಯಾಗಿ ಅಸಹ್ಯವಾಗಿದೆ. ಅಂದ ಹಾಗೆ ಚುನಾವಣೆಗೆ ಇಷ್ಟೆಲ್ಲಾ ವೆಚ್ಚ ಭರಿಸುವ ಸರ್ಕಾರಗಳು ಅಥವಾ ಚುನಾವಣಾ ಆಯೋಗ, ಮಸಿ ಹಾಕಲಿಕ್ಕೆ ನೈಲ್ ಪಾಲಿಶ್ ಬ್ರಶ್ ತರಹದ ಬ್ರಶ್‌ಗಳನ್ನು ನೀಡಿ ತರಬೇತಿ ಏಕೆ ನೀಡಿಲ್ಲ ಎಂಬುದೇ ಸೋಜಿಗ. **–ವಿಜಯ್ ಹೆಮ್ಮಿಗೆ, ಮೈಸೂರು**

### ಹೆಸರು ಡಿಲೀಟ್ ಸಮಸ್ಯೆ ಬಗ್ಗೆ ಗಮನಹರಿಸಿ

ಮಾನ್ಯರೆ,

ನಾನು ಮೈಸೂರಿನ ದಟ್ಟಗಳ್ಳಿ 3ನೇ ಹಂತದ ನಿವಾಸಿ ಆಗಿದ್ದು ಪ್ರತಿ ಚುನಾವಣೆಯಲ್ಲೂ ಮತದಾನ ಮಾಡುತ್ತಾ ಬಂದಿದ್ದೇನೆ. ಆದರೆ ಈ ಚುನಾವಣೆಯಲ್ಲಿ ಮತ ಚಲಾಯಿಸಲು ಮತದಾನ ಕೇಂದ್ರಕ್ಕೆ ಹೋದಾಗ ನನ್ನ ಹೆಸರು ಲಿಸ್ಟ್‌ನಲ್ಲಿ ಇರಲಿಲ್ಲ. ಹಾಗಾಗಿ ನಾನು ಮತದಾನ ಮಾಡಲು ಸಾಧ್ಯವಾಗಲಿಲ್ಲ. ಆಶ್ಚರ್ಯ ಎಂದರೆ ನನ್ನ ಪತ್ನಿ ಹಾಗೂ ನನ್ನ ಮಗಳ ಹೆಸರು ಲಿಸ್ಟ್‌ನಲ್ಲಿ ಇತ್ತು. ಒಂದೇ ಫ್ಯಾಮಿಲಿಯ ಒಬ್ಬರ ಹೆಸರು ಮಾತ್ರ ಡಿಲೀಟ್ ಆಗಲು ಹೇಗೆ ಸಾಧ್ಯ? ಮತದಾನ ಮಾಡಲು ಆಗದೆ ಹೋಗಿದ್ದರಿಂದ ನನಗೆ ಬಹಳ ನಿರಾಸೆ ಆಯಿತು. ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಗಮನ ಹರಿಸಿ ಆಗಿರುವ ಪ್ರಮಾದವನ್ನು ಸರಿಪಡಿಸುವರೇ?

**–ಎಂ.ಎನ್. ಸುರೇಶ್, ದಟ್ಟಗಳ್ಳಿ 3ನೇ ಹಂತ, ಮೈಸೂರು.**

### ಜನಪರ ಸರ್ಕಾರದ ರಚನೆಯಾಗಿ ಜನರಿಗಾಗಿ ದುಡಿಯಿರಿ?!

ಮಾನ್ಯರೆ,

ಚುನಾವಣೆ ಮುಗಿಯಿತು. ಎಣಿಕೆಯು ಆಯಿತು. ಪಕ್ಷಗಳು ಸ್ಥಾನಗಳನ್ನು ಗಳಿಸಿದವು. ಜನತೆಯು ತಮ್ಮ ಚುನಾಯಿತ ಅಭ್ಯರ್ಥಿಗಳಿಂದ ಉತ್ತಮವಾದ ಆಡಳಿತವನ್ನು ಎದುರು ನೋಡುತ್ತಿದ್ದಾರೆ. ಆದರೆ ಸರ್ಕಾರದ ರಚನೆಯು ಇನ್ನು ವಿಳಂಬವಾಗುತ್ತಿದೆ. ಅಭ್ಯರ್ಥಿಗಳ ನಡುವೆಯೇ ಉನ್ನತ ಗದ್ದುಗೆ ಏರಲು ಆಂತರಿಕ ಕಲಹಗಳು ಆರಂಭವಾಗಿರುವುದು ಜನರಿಗೆ ಕನ್ನಡಿಯಂತೆ ಕಾಣಿಸುತ್ತಿದೆ. ಶೀಘ್ರವಾಗಿ ಬಹುಮತ ಪಡೆದ ಪಕ್ಷಗಳು ಸರ್ಕಾರದ ರಚನೆ ಮಾಡುವಂತಾಗಲಿ. ಭಿನ್ನಾಭಿಪ್ರಾಯಗಳನ್ನು ಬಿಟ್ಟು ಎಲ್ಲಾ ನಾಯಕರು ಒಕ್ಕೊರಲಾಗಿ ಸರ್ಕಾರದ ರಚನೆ ಮಾಡುವಂತಾಗಲಿ ಎಂಬುದು ಜನಾಭಿಪ್ರಾಯ.

ಚುನಾವಣೆಗೆ ಮುನ್ನ ಪಕ್ಷಗಳು ಕೊಟ್ಟ ಭರವಸೆಯನ್ನು ಎದುರು ನೋಡುತ್ತಿದ್ದೇವೆ. ಜನತೆಯು ತಮ್ಮ ಅಮೂಲ್ಯವಾದ ಮತವನ್ನು ನಿಮಗೆ ನೀಡಿ ನಿಮ್ಮನ್ನು ನಾಯಕರನ್ನಾಗಿ ಮಾಡಿದ್ದಾರೆ. ಇದರ ಫಲವಾಗಿ ನೀವು ಜನತೆಗೆ ಉತ್ತಮವಾದ ಆಡಳಿತವನ್ನು ನೀಡಬೇಕು. ಜನಪರವಾಗಿ ನೀವು ಸದಾ ನಿಲ್ಲಬೇಕು. ಯಾವುದೇ ಹಣದ ಆಮಿಷಗಳಿಗೆ ನಾಯಕನು ಒಳಗಾಗಬಾರದು. ಮತದಾನ ಮಾಡಿದ್ದಕ್ಕೆ ಪ್ರತಿಫಲವಾಗಿ ಅವರಿಗೆ ನೀವು ಚುನಾವಣೆಯ ಪ್ರಚಾರದ ಸಮಯದಲ್ಲಿ ಕೊಟ್ಟ ಆಶ್ವಾಸನೆಗಳನ್ನು ಗಮನದಲ್ಲಿಟ್ಟು ಕೆಲಸ ಮಾಡುವಂತಾಗಬೇಕು.

ಮತದಾನ ಪ್ರಭುಗಳು ಸದಾ ನಿಮ್ಮನ್ನು ನಿಮ್ಮ ಮನೆಯಲ್ಲಿ ದಿನಕ್ಕೊಂದು ಬಾರಿ ಇಲ್ಲದಿದ್ದರೂ ವಾರಕ್ಕೊಮ್ಮೆಯಾದರೂ ನೆನೆಯುವಂತರಾಗಬೇಕು. ಈ ನಿಟ್ಟಿನಲ್ಲಿ ನೀವು ಪಾದರಸದಂತೆ ಕೆಲಸವನ್ನು ನಿರ್ವಹಿಸುವಂತಾಗಬೇಕು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ತಕ್ಕ ಪ್ರತಿಫಲವನ್ನು ನೀವು ಒದಗಿಸುವಂತಾಗಬೇಕು. ನಿಮ್ಮ ನಿಮ್ಮಲ್ಲೇ ಮುನಿಸು ಕೋಪ ಕಲಹಗಳಿಗೆ ಎಡೆಮಾಡಿಕೊಡಬೇಡಿ. ಕೂತು ಚರ್ಚಿಸಿ ಒಂದೊಳ್ಳೆ ಜನಮೆಚ್ಚುವ ಜನಪರ ಸರ್ಕಾರವನ್ನು ರಚಿಸಿ ಉತ್ತಮ ಆಡಳಿತವನ್ನು ನೀಡಿ ಮತದಾರರಿಂದ ಮೆಚ್ಚುಗೆ ಪಡೆಯುವಂತಾಗಲಿ. ನಮ್ಮ ಮತ ನಿಮ್ಮ ಗೆಲುವಿಗಾಗಿ ಹೊರತು ನಿಮ್ಮ ಸ್ವಾರ್ಥಕ್ಕಾಗಿ ಅಲ್ಲ.

**–ಅನಿಲ್ ರಾಜ, ಗೀತಾ ಭಾರತಿ ಶಾಲೆ, ಸಿದ್ಧಾರ್ಥನಗರ. ಮೈಸೂರು**



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

# ಜನಾದೇಶ 2013

## ಕಲಿಸಿದ ಪಾಠಗಳು ಮತ್ತು ಕೊಟ್ಟ ಎಚ್ಚರಿಕೆ



ಆಹಾ, ಕಾಂಗ್ರೆಸ್ ಪಕ್ಷಕ್ಕೆ ಎಂತಹ ಅಭೂತಪೂರ್ವ ಗೆಲುವು. ಭ್ರಷ್ಟ, ಅಹಂಕಾರಿ, ಅಸಮರ್ಥ ರಾಜ್ಯ ಭಾರತೀಯ ಜನತಾ ಪಕ್ಷಕ್ಕೆ ಇದು ತಕ್ಕ ಪಾಠ.

ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಈ ಪರಿಯ ಗೆಲುವು ಹಾಗೂ ಮತ ಹಂಚಿಕೆ ಕಳೆದ 30 ವರ್ಷಗಳಲ್ಲೇ ದಾಖಲೆಯಾಗಿದೆ. ಆ ಪಕ್ಷವು, ಶೇಕಡಾ 42.9 ಮತ ಹಂಚಿಕೆಯೊಂದಿಗೆ 135 ಸ್ಥಾನಗಳನ್ನು ಗೆದ್ದಿದೆ. ಕಾಂಗ್ರೆಸ್ ಪಕ್ಷಕ್ಕೆ ಇಂತಹ ಅಪೂರ್ವ ಗೆಲುವು 1989ರ ಚುನಾವಣೆಯಲ್ಲಿ ಲಭಿಸಿತ್ತು. ಆಗ ಕಾಂಗ್ರೆಸ್ ಶೇ.43.76ರಷ್ಟು ಮತ ಹಂಚಿಕೆಯೊಂದಿಗೆ 178 ಸ್ಥಾನಗಳನ್ನು ಪಡೆದಿತ್ತು.

ಕಾಂಗ್ರೆಸ್ ಪಕ್ಷವು ಸಾಕಷ್ಟು ಸರಿಯಾದ ಕ್ರಮಗಳನ್ನು ಕೈಗೊಂಡರೆ, ಭಾರತೀಯ ಜನತಾ ಪಕ್ಷ ಅನೇಕ ತಪ್ಪುಗಳ ಮಾಡಿತು. ನಿಮಗೆ ಗೊತ್ತಿರಲಿ, ಕಳೆದ 30 ವರ್ಷಗಳಲ್ಲಿ ಯಾವುದೇ ಆಡಳಿತಾರೂಢ ಪಕ್ಷಕ್ಕೆ ಎರಡನೇ ಬಾರಿಗೆ ಅವಕಾಶ ನೀಡದಂತಹ ರಾಜ್ಯದಲ್ಲಿ ಆರಂಭದಿಂದಲೇ, ಬಿಜೆಪಿ ಪ್ರಬಲ ಆಡಳಿತ ವಿರೋಧಿ ಅಲೆ ಎದುರಿಸುತ್ತಾ ಬಂದಿತು. ಇದನ್ನು ಸಮರ್ಥ ರೀತಿ ಎದುರಿಸಲು ಭಾರತೀಯ ಜನತಾ ಪಕ್ಷವು ಹೆಚ್ಚಿನ ತಯಾರಿ ಮಾಡಿಕೊಳ್ಳಬೇಕಾಗಿತ್ತು.

ತನ್ನ ಲಿಂಗಾಯತರ ವೋಟ್ ಬ್ಯಾಂಕ್ ಅನ್ನು ಕ್ರೋಢೀಕರಿಸಿಕೊಳ್ಳುವುದರ ಬದಲು, ಆ ಸಮಾಜದ ಪ್ರಭಾವಶಾಲಿ ನಾಯಕ **ಬಿ.ಎಸ್.ಯಡಿಯೂರಪ್ಪ** ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಹೊರ ಹಾಕಲಾಯಿತು. ಇದರ ಪರಿಣಾಮ? ಕಾಂಗ್ರೆಸ್ ಪಕ್ಷ, ಈ ಸಮುದಾಯದ ಒಳಹೊಕ್ಕಿ, ಲಿಂಗಾಯತ ಪ್ರಾಬಲ್ಯವುಳ್ಳ ಕ್ಷೇತ್ರಗಳಲ್ಲಿ ತನ್ನ ಸ್ಥಾನಗಳನ್ನು ದ್ವಿಗುಣಗೊಳಿಸಿಕೊಂಡಿತು.

2018ರಲ್ಲಿ ಕಾಂಗ್ರೆಸ್ ಪಕ್ಷವು ಲಿಂಗಾಯತ ಪ್ರಾಬಲ್ಯವುಳ್ಳ ಪ್ರದೇಶಗಳಲ್ಲಿ ಕೇವಲ 21 ಸ್ಥಾನಗಳನ್ನು ಹೊಂದಿತ್ತು. ಆದರೆ, ಈ ಬಾರಿ ಆ ಪಕ್ಷ 42 ಸ್ಥಾನಗಳನ್ನು ಗಳಿಸಿದೆ. ಒಟ್ಟಾರೆಯಾಗಿ, ಕಾಂಗ್ರೆಸ್ ಪಕ್ಷವು ಈಗ 39 ಲಿಂಗಾಯತ ಶಾಸಕರನ್ನು ಹೊಂದಿದ್ದು, ಜೊತೆಗೆ ಲಿಂಗಾಯಿತರ ಪ್ರಾಬಲ್ಯವುಳ್ಳ ಇನ್ನಿತರ ಮೀಸಲು ಕ್ಷೇತ್ರಗಳಲ್ಲೂ ಸ್ಥಾನಗಳನ್ನು ಹೊಂದಿದೆ! ಇದರ ಅರ್ಥ, ಕಾಂಗ್ರೆಸ್ ಶಾಸಕರ ಪೈಕಿ ಶೇಕಡಾ 30ರಷ್ಟು ಒಂದೇ ಸಮುದಾಯಕ್ಕೆ ಸೇರಿದ್ದಾರೆ ಹಾಗೂ ಶೇಕಡಾ 10ರಷ್ಟು ಇದೇ ಸಮುದಾಯದ ಮೇಲೆ ಅವಲಂಭಿತರಾದವರಾಗಿದ್ದಾರೆ. ಒಂದು ಗಮನಾರ್ಹ ಸಂಗತಿ ಎಂದರೆ, ಮುಂಬರುವ ಕೆಲ ಕಾಲ, ಬಿಜೆಪಿ ಲಿಂಗಾಯತರ ಮತ ಬ್ಯಾಂಕ್ ಕಳೆದುಕೊಂಡಿದೆಯೇ?

ಒಕ್ಕಲಿಗ ಸಮುದಾಯ ಪ್ರಾಬಲ್ಯವುಳ್ಳ ಹಳೆಯ ಮೈಸೂರು

> **ಒಕ್ಕಲಿಗರು ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬಹುದು ಎಂಬ ಬಲವಾದ ನಿರೀಕ್ಷೆಯೊಂದಿಗೆ ಕಾಂಗ್ರೆಸ್‌ಗೆ ಬೆಂಬಲ ನೀಡಿರಬಹುದು. ಒಂದು ವೇಳೆ ತಮ್ಮ ನಿರೀಕ್ಷೆ ಹುಸಿಯಾದಲ್ಲಿ ಅವರು ಮತ್ತೆ ತಮ್ಮ ಸಾಂಪ್ರದಾಯಿಕ ನೆಲೆಯತ್ತ (ಜೆಡಿಎಸ್) ಹೊರಳುವ ಸಾಧ್ಯತೆಗಳು ಹೆಚ್ಚಾಗಿದೆ. ನೋಡೋಣ...**

ವಲಯದಲ್ಲಿ ಬಿಜೆಪಿಗೆ ಆ ಸಮುದಾಯವನ್ನು ಮುನ್ನಡೆಸಬಲ್ಲ ಒಬ್ಬನೇ ಒಬ್ಬ ಸಮರ್ಥ ನಾಯಕನೂ ಇರಲಿಲ್ಲ. ಹೇಳಿಕೊಳ್ಳಲು ಇದ್ದ ಆರ್.ಅಶೋಕ್ ಅವರನ್ನೂ ಮೂಲೆಗುಂಪು ಮಾಡಲಾಯಿತು. ಮತ್ತೊಂದೆಡೆ, ಒಕ್ಕಲಿಗರಾದ ಕಾಂಗ್ರೆಸಿನ ಡಿ.ಕೆ. ಶಿವಕುಮಾರ್, ಒಕ್ಕಲಿಗ ಸಮುದಾಯ ತನ್ನ ಸಾಂಪ್ರದಾಯಿಕ ಪಕ್ಷವಾದ ಜೆಡಿಎಸ್ ಅನ್ನು ತೊರೆದು ಕಾಂಗ್ರೆಸ್‌ಗೆ ಮತ ಹಾಕುವಂತೆ ಮನವೊಲಿಸುವಲ್ಲಿ ಯಶಸ್ವಿಯಾದರು. ಇದರ ಪರಿಣಾಮ? ಕಾಂಗ್ರೆಸ್, ಒಕ್ಕಲಿಗರ ಪ್ರಾಬಲ್ಯವುಳ್ಳ ಹಳೆಯ ಮೈಸೂರು ಭಾಗವನ್ನು ಕೈ ವಶಮಾಡಿಕೊಂಡು, ತನ್ನ ಸ್ಥಾನಗಳನ್ನು ದ್ವಿಗುಣಗೊಳಿಸಿಕೊಂಡಿತು. 2018ರಲ್ಲಿ ಈ ಭಾಗದಲ್ಲಿ 11 ಸ್ಥಾನಗಳನ್ನು ಹೊಂದಿದ್ದ ಕಾಂಗ್ರೆಸ್, ಈ ಬಾರಿ 28 ಸ್ಥಾನಗಳನ್ನು ಗಳಿಸಿತು. ಅಚ್ಚರಿಯ ಸಂಗತಿ ಎಂದರೆ, ಜೆಡಿಎಸ್ ಒಕ್ಕಲಿಗ ಮತ ಬ್ಯಾಂಕ್ ಕಳೆದುಕೊಂಡಿದಿಯೆ?

ಇಲ್ಲಿಯೂ ಒಕ್ಕಲಿಗರು ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗಬಹುದು ಎಂಬ ಬಲವಾದ ನಿರೀಕ್ಷೆಯೊಂದಿಗೆ ಕಾಂಗ್ರೆಸ್‌ಗೆ ಬೆಂಬಲ ನೀಡಿರಬಹುದು. ಒಂದು ವೇಳೆ ತಮ್ಮ ನಿರೀಕ್ಷೆ ಹುಸಿಯಾದಲ್ಲಿ ಅವರು ಮತ್ತೆ ತಮ್ಮ ಸಾಂಪ್ರದಾಯಿಕ ನೆಲೆಯತ್ತ (ಜೆಡಿಎಸ್) ಹೊರಳುವ ಸಾಧ್ಯತೆಗಳು ಹೆಚ್ಚಾಗಿದೆ. ನೋಡೋಣ...

ಭಾರತೀಯ ಜನತಾ ಪಕ್ಷವು ತನ್ನ ಸ್ಥಳೀಯ ನಾಯಕರನ್ನು ಬಿಂಬಿಸುವುದರ ಬದಲು ಉತ್ತರ ಭಾರತದ ನಾಯಕರ ಮೇಲೆಯೇ ಹೆಚ್ಚಾಗಿ ಅವಲಂಭಿತವಾಯಿತು. ಗ್ರಾಮೀಣ ಕರ್ನಾಟಕದ ಮತದಾರರು, ಪ್ರಧಾನಿ ಮೋದಿಯವರ ಹಿಂದಿ ಭಾಷಣವನ್ನು ಅದ್ಯಾವ ಮಟ್ಟಿಗೆ ಅರ್ಥ ಮಾಡಿಕೊಳ್ಳುತ್ತಾರೆ ಹೇಳಿ? ಅದಕ್ಕಿಂತ ದುರದೃಷ್ಟಕರ ಸಂಗತಿ ಎಂದರೆ, ಮೋದಿಯವರು ತಮ್ಮ ಪ್ರಚಾರ ಭಾಷಣಗಳಲ್ಲಿ, ಎಲ್ಲಿಯೂ ತಮ್ಮ ಪಕ್ಷದ ಸ್ಥಳೀಯ ಅಭ್ಯರ್ಥಿಯ ಹೆಸರನ್ನು ಒಮ್ಮೆಯೂ ಉಲ್ಲೇಖ ಮಾಡಲಿಲ್ಲ ಇಲ್ಲವೇ ಸ್ಪಷ್ಟವಾಗಿ, ಇಂತಹ ಅಭ್ಯರ್ಥಿಯ ಪರವಾಗಿ ಮತ ಹಾಕುವಂತೆಯೂ ಮತದಾರರನ್ನು ಕೇಳಲಿಲ್ಲ.

ಪ್ರಾಯಶಃ, ನರೇಂದ್ರ ಮೋದಿಯವರ ಭಾಷಣ, ಕೇವಲ ಬೃಹತ್ ಬೆಂಗಳೂರು ಭಾಗದ ಮತದಾರರ ಮೇಲೆ ಗುಣಾತ್ಮಕ ಪರಿಣಾಮ ಬೀರಿರಬಹುದು. ಈ ಪ್ರದೇಶಗಳಲ್ಲಿ 2018ರಲ್ಲಿ 11 ಸ್ಥಾನಗಳನ್ನು ಹೊಂದಿದ್ದ ಬಿಜೆಪಿ ಈ ಬಾರಿ 16 ಸ್ಥಾನಗಳನ್ನು ಗಳಿಸಿ, ತನ್ನ ಸ್ಥಾನವನ್ನು ಗಟ್ಟಿ ಮಾಡಿಕೊಂಡಿದೆ.

ಇದರ ಜೊತೆಗೆ, ಚುನಾವಣೆ ಸಮೀಪಿಸುತ್ತಿದ್ದ ಸಮಯದಲ್ಲಿ ಸ್ಥಳೀಯ ಬಿಜೆಪಿ ನಾಯಕರು ಹಾಗೂ ಕಾರ್ಯಕರ್ತರು, ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪ್ರಚಾರ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದರ ಬದಲು, ಅವರು ತಮ್ಮ ಸಮಯ ಮತ್ತು ಹಣವನ್ನು ರಾಷ್ಟ್ರೀಯ ನಾಯಕರಿಗಾಗಿ ರೋಡ್ ಶೋಗಳನ್ನು ಏರ್ಪಡಿಸುವುದರಲ್ಲೇ ತಲ್ಲೀನರಾಗಿ ವ್ಯರ್ಥ ಮಾಡಿಕೊಂಡರು.

ಇತ್ತ ಸ್ಥಳೀಯ ಕಾಂಗ್ರೆಸ್ ನಾಯಕರು, ನಿರಂತರವಾಗಿ ಪ್ರಚಾರ ಕೈಗೊಂಡರು. ಅವರ ಕಾರ್ಯಕರ್ತರು, ಬೀದಿಗಿಳಿದು ಮತದಾರರನ್ನು ಮತಗಟ್ಟೆಗಳತ್ತ ಕರೆದೊಯ್ಯುವಲ್ಲಿ ಕಾರ್ಯನಿರತರಾದರು. ಇದರಿಂದಾಗಿ ಅವರು ಹಣವನ್ನೂ ಉಳಿಸಿದರು. ಅದನ್ನೇ ಮತದಾರರಿಗೆ ಅಧಿಕ ಪ್ರಮಾಣದಲ್ಲಿ ಖರ್ಚು ಮಾಡಲು ಸಾಧ್ಯವಾಯಿತು.

ಕಾಂಗ್ರೆಸ್ ಗೆಲುವಿಗೆ ಸಹಕಾರಿಯಾದ ಅತ್ಯಂತ ಮಹತ್ವದ ಎರಡು ವಿಚಾರ ಹಾಗೂ ಬಿಜೆಪಿಗೆ ಒಂದು ನಿರ್ಣಾಯಕ ಪಾಠವೆಂದರೆ–ಗ್ಯಾರಂಟಿ ಯೋಜನೆಗಳು ಮತ್ತು ಪಾನ್ ಕರ್ನಾಟಕ ನಾಯಕತ್ವದ ಕಾರ್ಯಗಳು. ಮತದಾರರ ಆರ್ಥಿಕ ಆದ್ಯತೆಗಳ ಮುಂದೆ, ಧಾರ್ಮಿಕ ಭಾವನೆಗಳ ಕ್ರೋಢೀಕರಣ ಕೆಲಸಕ್ಕೆ ಬಾರಲಿಲ್ಲ.

ಕೋವಿಡ್ ಸೋಂಕಿನಿಂದ ಎದುರಾದ ಆರ್ಥಿಕ ಸಂಕಷ್ಟಗಳಿಂದ ಜನರು ಇನ್ನೂ ಹೊರಬಂದಿಲ್ಲವೆಂಬುದನ್ನು ಬಿಜೆಪಿ ಅರ್ಥ ಮಾಡಿಕೊಳ್ಳಬೇಕಾಗಿತ್ತು. ಜನರ ಕಲ್ಯಾಣ ಕಾರ್ಯಕ್ರಮಗಳನ್ನು ಉಚಿತವೆಂದು ಭಾವಿಸಿ ತ್ಯಜಿಸುವ ಬದಲು, ಅದನ್ನು ಅವರು ಒಪ್ಪಿಕೊಂಡು ಕೆಲವು ನೆರವನ್ನು ಜನರಿಗೆ ಕಲ್ಪಿಸಬೇಕಾಗಿತ್ತು. ಚುನಾವಣೆಗಿಂತ ಮುಂಚಿತವಾಗಿ ಅಂದರೆ ಕೆಲವು ತಿಂಗಳ ಹಿಂದೆ ಮಂಡಿಸಿದ ತಮ್ಮ ಆಯ–ವ್ಯಯದಲ್ಲೂ (ಬಜೆಟ್) ಜನರಿಗೆ ಅವರು ಏನನ್ನೂ ಮಾಡಲಿಲ್ಲ.

> **ಬಿಜೆಪಿಗೆ ಓರ್ವ ಸಮರ್ಥ ನಾಯಕನಿರಲಿಲ್ಲ. ಬಸವರಾಜ ಬೊಮ್ಮಾಯಿಯವರು ಯಡಿಯೂರಪ್ಪನವರ ನೆರಳು ಕೂಡ ಅಲ್ಲ. ರಾಜ್ಯದ ಮಾತು ಹಾಗಿರಲಿ, ತನ್ನದೇ ಲಿಂಗಾಯತ ಸಮಾಜಕ್ಕೂ ಮನವಿ ಮಾಡಿಕೊಳ್ಳುವಂತಹ ನಾಯಕರೂ ಅಲ್ಲ. ಒಂದಂತೂ ನಿಜ, ಯಡಿಯೂರಪ್ಪನವರಿಗೆ ಇದೇ ಪ್ರಿಯವಾಗಿದ್ದು. ಕಾರಣ, ಬಸವರಾಜ ಬೊಮ್ಮಾಯಿಯವರು ಮತ ಸೆಳೆಯುವವರಲ್ಲ ಹಾಗೂ ನಾಯಕನೂ ಅಲ್ಲ ಎಂಬುದು ಅವರಿಗೆ ಚೆನ್ನಾಗಿ ಗೊತ್ತಿತ್ತು. ಬಿಜೆಪಿಗೆ ಪಾಠ ಕಲಿಸಲು ಬೊಮ್ಮಾಯಿಯವರ ನೇಮಕ, ಯಡಿಯೂರಪ್ಪನವರಿಗೆ ಸಹಕಾರಿಯಾಯಿತು. ನಿಮಗೆ ತಿಳಿದಿರಲಿ, 2013ರಲ್ಲಿ ಅವರನ್ನು ಬದಿಗೆ ಸರಿಸಿದ ಬಿಜೆಪಿ ಯಾವ ಪಾಠವನ್ನೂ ಕಲಿಯಲಿಲ್ಲ.**

ಮತ್ತೊಂದೆಡೆ ಕಾಂಗ್ರೆಸ್ ಪಕ್ಷವು ಗ್ಯಾರಂಟಿ ಕಾರ್ಡುಗಳೊಂದಿಗೆ ತನ್ನ ಕಾರ್ಯಕರ್ತರನ್ನು ಮನೆ–ಮನೆಗಳಿಗೆ ಕಳುಹಿಸಿತು. ಅವರು ಐದು ಗ್ಯಾರಂಟಿ ಯೋಜನೆ ನೀಡಿದರು. 'ಗೃಹ ಲಕ್ಷ್ಮಿ' ಯೋಜನೆಯಡಿ ಕುಟುಂಬದ ಮಹಿಳೆಗೆ ಮಾಸಿಕ ರೂ.2000/–, 'ಅನ್ನಭಾಗ್ಯ' ಯೋಜನೆಯಡಿ ಕುಟುಂಬದ ಪ್ರತಿಯೊಬ್ಬರಿಗೆ ಪ್ರತಿ ತಿಂಗಳು 10 ಕೆ.ಜಿ. ಅಕ್ಕಿ, 'ಉಚಿತ ಪ್ರಯಾಣ' ಯೋಜನೆಯಡಿಯಲ್ಲಿ ರಾಜ್ಯಾದ್ಯಂತ ಸಾರಿಗೆ ಬಸ್‌ನಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ, 'ಗೃಹ ಜ್ಯೋತಿ' ಯೋಜನೆಯಡಿ ಪ್ರತಿ ಕುಟುಂಬಕ್ಕೆ 200 ಯೂನಿಟ್ ಉಚಿತ ವಿದ್ಯುತ್, 'ಯುವನಿಧಿ' ಯೋಜನೆಯಡಿ 3,000 ರೂ. ಹಾಗೂ 1,500 ರೂ. ನಿರುದ್ಯೋಗಿ ಪದವೀಧರರಿಗೆ ಹಾಗೂ ಡಿಪ್ಲೋಮಾ ಪಡೆದವರಿಗೆ ಎರಡು ವರ್ಷ ಕಾಲ ಮಾಸಿಕ ನಿರುದ್ಯೋಗ ಭತ್ಯೆ. ಈ ಗ್ಯಾರಂಟಿಗಳು ಕಾಂಗ್ರೆಸ್ ಪಕ್ಷಕ್ಕೆ ಮಹಿಳೆಯರು ಮತ್ತು ಯುವಜನರ ಮತವನ್ನು ಭಾರೀ ಪ್ರಮಾಣದಲ್ಲಿ ತಂದುಕೊಟ್ಟಿತು.

ಅದೆಷ್ಟರ ಮಟ್ಟಿಗೆ ಎಂದರೆ ಹಣ ಹಾಗೂ ಜಾತಿ ವಿಷಯಕ್ಕಿಂತಲೂ ಜನರಿಗೆ ಉಚಿತವಾಗಿ ಸಿಗುವ ಗ್ಯಾರಂಟಿಗಳು ಕಾಂಗ್ರೆಸ್ ಅನ್ನು ಗೆಲುವಿನ ದಡ ಸೇರಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸಿವೆ.

ಕಾಂಗ್ರೆಸ್ ಈ ಗ್ಯಾರಂಟಿ ಯೋಜನೆಗಳನ್ನು ಪ್ರಕಟಿಸುವ ಸಂದರ್ಭದಲ್ಲಿ 'ಷರತ್ತುಗಳು ಅನ್ವಯಿಸುತ್ತವೆ ಎಂದು ಹೇಳಿಲ್ಲದೇ ಇರಬಹುದು. ಇಲ್ಲವೆ ಈ ಯೋಜನೆಗಳಿಗೆ ಅರ್ಹತೆ ಮಾನದಂಡಗಳನ್ನು ಸದ್ಯಕ್ಕೆ ತಿಳಿಸದೇ ಇರಬಹುದು. ಆದರೆ ಅದೊಂದು ತಂತ್ರವಾಗಿದೆ. ಅದುವೇ ಪ್ರಚಾರದ ಗುಟ್ಟು, ಅವರು ತಮ್ಮ ಭರವಸೆಗಳಿಗೆ ಬದ್ಧರಾಗಿರುತ್ತಾರೋ, ಇಲ್ಲವೋ ಎಂಬುದು ಬೇರೆ ಮಾತು. ಆದರೆ ತಕ್ಷಣಕ್ಕೆ ಈ ಭರವಸೆಗಳು ಮತದಾರರ ಮೇಲೆ ಪ್ರಭಾವ ಬೀರಿ ಕಾಂಗ್ರೆಸ್ ಪರ ಮತ ಚಲಾಯಿಸುವಷ್ಟರ ಮಟ್ಟಿಗೆ ಅವರನ್ನು ಉನ್ಮತ್ತಗೊಳಿಸಿದೆ.

ಭಾರತೀಯ ಜನತಾ ಪಕ್ಷವೂ ತನ್ನದೇ ಆದ ಸ್ವಂತ ಯೋಜನೆಗಳ ಮೂಲಕ ಕಾಂಗ್ರೆಸ್‌ನ ಈ ಗ್ಯಾರಂಟಿ ಯೋಜನೆಗಳನ್ನು, ಸ್ವಲ್ಪಮಟ್ಟಿಗಾದರೂ ಜಾರಿಗೊಳಿಸಬಹುದಾದ ಕಾಂಗ್ರೆಸ್ ಅನ್ನು ಸಮರ್ಥವಾಗಿ ಎದುರಿಸಬಹುದಾಗಿತ್ತು. ಆದರೆ, ಅದಕ್ಕೆ ಬದಲಾಗಿ, ಬಿಜೆಪಿ ಜನರಿಗೆ ಏನನ್ನು ನೀಡಿತು? ಏನೂ ಇಲ್ಲ. ಇದರ ಪರಿಣಾಮ? ಅವರು ತಾವು ನೀಡಿದ ಬಹುತೇಕ ಭರವಸೆಗಳನ್ನು ಈಡೇರಿಸುತ್ತಾರೋ ಇಲ್ಲವೋ, ಕಾಂಗ್ರೆಸ್ ಪಕ್ಷ ಮುಂದಿನ ಐದು ವರ್ಷಗಳ ಕಾಲ ರಾಜ್ಯವನ್ನು ಆಳುತ್ತದೆ. ಆ ಉಚಿತ ಯೋಜನೆಗಳ ಬಗ್ಗೆ ಅವರು ಮತ್ತೆ ಚಿಂತೆ ಮಾಡುವುದೇ 2028ಕ್ಕೆ. ಸದ್ಯಕ್ಕೆ ಇವುಗಳ ಹೆಸರಲ್ಲಿ ಗೆದ್ದದ್ದು ಗೆದ್ದಾಯ್ತು....!

ಬಿಜೆಪಿಗೆ ಓರ್ವ ಸಮರ್ಥ ನಾಯಕನಿರಲಿಲ್ಲ. ಬಸವರಾಜ ಬೊಮ್ಮಾಯಿಯವರು ಯಡಿಯೂರಪ್ಪನವರ ನೆರಳು ಕೂಡ ಅಲ್ಲ. ರಾಜ್ಯದ ಮಾತು ಹಾಗಿರಲಿ, ತನ್ನದೇ ಲಿಂಗಾಯತ ಸಮಾಜಕ್ಕೂ ಮನವಿ ಮಾಡಿಕೊಳ್ಳುವಂತಹ ನಾಯಕರೂ ಅಲ್ಲ. ಒಂದಂತೂ ನಿಜ, ಯಡಿಯೂರಪ್ಪನವರಿಗೆ ಇದೇ ಪ್ರಿಯವಾಗಿದ್ದು. ಕಾರಣ, ಬಸವರಾಜ ಬೊಮ್ಮಾಯಿಯವರು ಮತ ಸೆಳೆಯುವವರಲ್ಲ ಹಾಗೂ ನಾಯಕನೂ ಅಲ್ಲ ಎಂಬುದು ಅವರಿಗೆ ಚೆನ್ನಾಗಿ ಗೊತ್ತಿತ್ತು. ಬಿಜೆಪಿಗೆ ತಕ್ಕ ಪಾಠ ಕಲಿಸಲು ಬೊಮ್ಮಾಯಿಯವರ ನೇಮಕ, ಯಡಿಯೂರಪ್ಪನವರಿಗೆ ಸಹಕಾರಿಯಾಯಿತು. ನಿಮಗೆ ತಿಳಿದಿರಲಿ, 2013ರಲ್ಲಿ ಅವರನ್ನು ಬದಿಗೆ ಸರಿಸಿದ ಬಿಜೆಪಿ ಯಾವ ಪಾಠವನ್ನೂ ಕಲಿಯಲಿಲ್ಲ.

ಕರ್ನಾಟಕದಲ್ಲಿ 'ಮೋದಿ ಮಂತ್ರ'ದಿಂದ ಪ್ರಯೋಜನವಿಲ್ಲ. ಏನಿದ್ದರೂ 'ಯಡ್ಡಿ ಮಂತ್ರ' ಮಾತ್ರ ಕೆಲಸ ಮಾಡುತ್ತದೆ. ಲಿಂಗಾಯಿತ ಪ್ರಾಬಲ್ಯವುಳ್ಳ ವರುಣ ಕ್ಷೇತ್ರದಲ್ಲಿ ವಿ.ಸೋಮಣ್ಣನವರು ಸಿದ್ದರಾಮಯ್ಯನವರ ಎದುರು ಭಾರೀ ಮತಗಳ ಅಂತರದಿಂದ ಪರಾಜಯ ಅನುಭವಿಸಿದ್ದರಲ್ಲಿ ಯಡಿಯೂರಪ್ಪ ಕೈವಾಡ ಇದೆ ಎಂಬುದನ್ನು ಸೂಚಿಸುತ್ತದೆ. ಅವರೆಂದೂ ಸೋಮಣ್ಣ ಅವರನ್ನು ಇಷ್ಟಪಡಲಿಲ್ಲ. ತಮ್ಮನ್ನು ಮೂಲೆಗುಂಪು ಮಾಡಿದ್ದಕ್ಕಾಗಿ ಬಿಜೆಪಿ ವರಿಷ್ಠರನ್ನು ದ್ವೇಷಿಸುತ್ತಿದ್ದರು. ಯಡಿಯೂರಪ್ಪನವರು, ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡ ಜಗದೀಶ್ ಶೆಟ್ಟರ್ ಸೋಲಿಸುವುದರತ್ತ ತೋರಿದ ತೀವ್ರ ಆಸಕ್ತಿಯನ್ನು ಸ್ವಲ್ಪವೂ ಸೋಮಣ್ಣನವರ ಗೆಲ್ಲಿಸುವುದರತ್ತ ತೋರಲಿಲ್ಲ.

ಹಳೆ ಮೈಸೂರು ಭಾಗದ ಲಿಂಗಾಯತ ಸಮುದಾಯ ಸೋಮಣ್ಣರ ಸೋಲಿನೊಂದಿಗೆ ತನ್ನ ಮುತ್ಸದ್ದಿಗಳಾದ ಗುರುಪಾದಸ್ವಾಮಿ, ರಾಜಶೇಖರಮೂರ್ತಿ ಮಾದರಿಯ ನಾಯಕನನ್ನು ಪಡೆಯುವಂತಹ ಒಂದು ಸದವಕಾಶವನ್ನು ಕಳೆದುಕೊಂಡಂತಾಗಿದೆ. ಇರಲಿ...

ಯಡಿಯೂರಪ್ಪ ಪ್ರಭಾವಕ್ಕೆ ಮತ್ತೊಂದು ಉದಾಹರಣೆ ಎಂದರೆ ಚಿಕ್ಕಮಗಳೂರು ಕ್ಷೇತ್ರ. ಇಲ್ಲಿ ಸಿ.ಟಿ.ರವಿ ಸಹ ಸೋತರು. ಸಿ.ಟಿ.ರವಿ, ಬಿಜೆಪಿ ಟಿಕೆಟುಗಳನ್ನು ಯಾರೊಬ್ಬರ ಅಡುಗೆ ಮನೆಯಲ್ಲಿ ವಿತರಿಸಲಾಗುವುದಿಲ್ಲ ಎಂದು ಹೇಳುವ ಮೂಲಕ ಅನವಶ್ಯಕವಾಗಿ ಯಡಿಯೂರಪ್ಪನವರನ್ನು ಕೆಣಕಿದರು. ಹಲವಾರು ವರ್ಷಗಳ ಕಾಲ ಸಿ.ಟಿ.ರವಿಯವರ ಹಿಂಬಾಲಕ ಹಾಗೂ ಲಿಂಗಾಯತ ಸಮುದಾಯದ ಹೆಚ್.ಡಿ. ತಮ್ಮಯ್ಯನವರು ಬಿಜೆಪಿಯನ್ನು ತೊರೆದು, ಕಾಂಗ್ರೆಸ್ ಸೇರಿ, ಈಗ ಸಿ.ಟಿ.ರವಿಯವರನ್ನು ಸುಮಾರು 5,000 ಮತಗಳಿಂದ ಪರಾಭವಗೊಳಿಸಿದರು. ಚಿಕ್ಕಮಗಳೂರಿನಲ್ಲಿ ಲಿಂಗಾಯಿತರ ಪ್ರಾಬಲ್ಯವಿದೆ. ಹಾಗೂ ಎಲ್ಲರಿಗೂ ಗೊತ್ತಿರುವ ಹಾಗೆ ತಮ್ಮಯ್ಯನವರು ಯಡಿಯೂರಪ್ಪನವರಿಗೆ ಆಪ್ತರು.

ಅತ್ತ ಕಾಂಗ್ರೆಸ್ ಪಕ್ಷವು ಸಿದ್ದರಾಮಯ್ಯನವರ ನಾಯಕತ್ವ ಬೆಂಬಲಿಸಿ, ಪ್ರೋತ್ಸಾಹಿಸಿತು. ಅವರಿಗೆ ಪಾನ್ ಕರ್ನಾಟಕ (Pan Karnataka) ಮಾದರಿಯಲ್ಲಿ ಜನಮನ್ನಣೆ ಇದ್ದು, ಸಾಮಾಜಿಕ ಮೈತ್ರಿಯನ್ನು ದೊಡ್ಡ ಮಟ್ಟದಲ್ಲಿ ಒಗ್ಗೂಡಿಸುವ ಸಾಮರ್ಥ್ಯವನ್ನು ಹೊಂದಿದ್ದಾರೆ. ಇತ್ತ ಒಕ್ಕಲಿಗ ಸಮುದಾಯದ ಓರ್ವ ಪ್ರಭಾವಿ ನಾಯಕ ಜೊತೆಗೆ ಹಣ ಬಲವುಳ್ಳ ಮತ್ತು ಸಂಘಟನಾ ಚಾತುರ್ಯವುಳ್ಳ ಡಿ.ಕೆ.ಶಿವಕುಮಾರ್ ಅವರನ್ನು ಪ್ರೋತ್ಸಾಹಿಸಿತು. ಹಾಗೂ ರಾಜ್ಯದ ಪಾನ್ ಮಾದರಿಯ ದಲಿತ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರನ್ನು ಎಐಸಿಸಿಯ ಅಧ್ಯಕ್ಷರನ್ನಾಗಿ ಮಾಡಿತು. ಸ್ಥಳೀಯವಾಗಿ ಬಲಾಢ್ಯರಾದ ಲಿಂಗಾಯಿತ ನಾಯಕರಿಗೂ ಟಿಕೆಟ್ ನೀಡಿತು. ಮುಖ್ಯವಾಗಿ, ಈ ನಾಯಕರ ಮಧ್ಯೆ ಇದ್ದಿರಬಹುದಾದಂತಹ 'ಅಹಂ' ಗಾರಿಕೆಯನ್ನು ಪರಿಣಾಮಕಾರಿಯಾಗಿ ನಿಭಾಯಿಸಿದರು. ಇದರ ಪರಿಣಾಮ?

ಅಲ್ಪಸಂಖ್ಯಾತರ ಹಾಗೂ ಹಿಂದೂ ಮತಗಳ ಕ್ರೋಢೀಕರಣ, ಅದು ಲಿಂಗಾಯಿತರೇ ಆಗಲಿ ಇಲ್ಲವೇ ಒಕ್ಕಲಿಗ ಇತ್ಯಾದಿಯೇ ಇರಲಿ. ಪಕ್ಷಕ್ಕೆ ಬದಲಾಗಿ, ಅವರೆಲ್ಲರೂ, ತಮ್ಮ ತಮ್ಮ ನಿಷ್ಠೆಗಳಿಗೆ ಅನುಗುಣವಾಗಿ, ಸ್ಥಳೀಯ ನಾಯಕರ ಪರವಾಗಿ ಮತ ಚಲಾಯಿಸಿ

> **ಹಳೆ ಮೈಸೂರು ಭಾಗದ ಲಿಂಗಾಯತ ಸಮುದಾಯ ಸೋಮಣ್ಣರ ಸೋಲಿನೊಂದಿಗೆ ತನ್ನ ಮುತ್ಸದ್ದಿಗಳಾದ ಗುರುಪಾದಸ್ವಾಮಿ, ರಾಜಶೇಖರಮೂರ್ತಿ ಮಾದರಿಯ ನಾಯಕನನ್ನು ಪಡೆಯುವಂತಹ ಒಂದು ಸದವಕಾಶವನ್ನು ಕಳೆದುಕೊಂಡಂತಾಗಿದೆ. ಇರಲಿ...**

ದರು. ಇದರಿಂದ ಸೀಟುಗಳನ್ನು ಗೆಲ್ಲಲು ಅವರಿಗೆ ಸಾಧ್ಯವಾಯಿತು.

ಈ ಹಿಂದೆ ಕಾಂಗ್ರೆಸ್ ಕಾರ್ಯ ನಿರ್ವಹಿಸಿದಂತೆ, ಬಿಜೆಪಿ ಸಹ ಈಗ ದೆಹಲಿಯ ಸೂಚನೆಗಳಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸುತ್ತಿದೆ. ಮತದಾರರ ತೀರ್ಪು ಅವರು ಹಾಗೆ ಮಾಡಬಾರದೆಂಬ ಪಾಠ ಕಲಿಸಿದೆ. ನಿಷ್ಠ ಹಾಗೂ ಬಲಿಷ್ಠ ಸ್ಥಳೀಯ ನಾಯಕರ ಅಗತ್ಯ ಅವರಿಗೆ ಇದೆ.

ಅಂತಿಮವಾಗಿ, ಕನ್ನಡಿಗರಾದ ನಾವು, ಕಾಂಗ್ರೆಸ್ ಪಕ್ಷವು ಅಭೂತಪೂರ್ವ ವಿಜಯವನ್ನು ಸಾಧಿಸಿರುವುದಕ್ಕೆ ಸಂತೋಷ ಪಡಬೇಕು. ಏಕೆಂದರೆ, 'ಆಪರೇಷನ್ ಕಮಲ' ಹಾಗೂ ಜೆಡಿಎಸ್‌ನ 'ಕಿಂಗ್ ಮೇಕರ್' ಪ್ರಯೋಗಗಳಿಂದ ನಮ್ಮ ರಾಜ್ಯ ಪ್ರಕ್ಷುಬ್ಧ ಪರಿಸ್ಥಿತಿ ಎದುರಿಸಬೇಕಾಗುತ್ತಿತ್ತು.

ಪ್ರಸ್ತುತ, ದೇಶದಲ್ಲಿ ಕರ್ನಾಟಕ ಮೂರನೇ ದೊಡ್ಡ ಆರ್ಥಿಕ ಬಲವುಳ್ಳ ಹಾಗೂ ಸಂಪದ್ಭರಿತ ರಾಜ್ಯವಾಗಿದೆ. ಉಚಿತ ಕೊಡುಗೆಗಳನ್ನು ನೀಡುವುದರ ಮೂಲಕ ಈ ಕಾಂಗ್ರೆಸ್ ಸರ್ಕಾರವು, ಬೊಕ್ಕಸವನ್ನು ಖಾಲಿ ಮಾಡಿ ನಮ್ಮ ರಾಜ್ಯವನ್ನು ದಿವಾಳಿಯ ಅಂಚಿಗೆ ತಂದು, ಸಾಲದ ಶೂಲಕ್ಕೆ ಗುರಿಪಡಿಸದಿರಲಿ ಎಂದು ಆಶಿಸೋಣ.

ಹಾಗೆಯೇ ಇದು ಭ್ರಷ್ಟಾಚಾರ ಮುಕ್ತ ಸರ್ಕಾರವಾಗಿದ್ದು, ತೆರಿಗೆದಾರರ ಹಣವನ್ನು ಮುಂಬರುವ 2024ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಬೊಕ್ಕಸವನ್ನು ತುಂಬಲು ಬಳಸಿಕೊಳ್ಳುವುದಿಲ್ಲ ಎಂದೂ ಭಾವಿಸೋಣ.

ಈ ಜನಾದೇಶವು, ಬಿಜೆಪಿಗೆ ಒಂದು ಪಾಠವಾಗಿ ಹಾಗೂ ಕಾಂಗ್ರೆಸ್‌ಗೆ ಒಂದು ಎಚ್ಚರಿಕೆಯಾಗಿದೆ.

**ಸೂಚನೆ:** ಅತಂತ್ರ ಪರಿಸ್ಥಿತಿಯನ್ನು ಎದುರು ನೋಡುತ್ತಿದ್ದ ರೆಸಾರ್ಟ್ ಮಾಲೀಕರಿಗೆ ಹಾಗೂ ಕುದುರೆ ವ್ಯಾಪಾರಿಗಳಿಗೆ ನಮ್ಮ ಹೃತ್ಪೂರ್ವಕ ಸಂತಾಪಗಳು.

**email: vikram @ starofmysore.com**

# ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

---

**ಬೇಕಾಗಿದ್ದಾರೆ**
ಸಸ್ಯಾಹಾರಿ ಹೋಟೆಲ್‌ಗೆ ಕ್ಯಾಶಿಯರ್, ಸೂಪರ್‌ವೈಸರ್ ಹಾಗೂ ಸಪ್ಲೆಯರ್ ಬೇಕಾಗಿದ್ದಾರೆ
9916206561

**WANTED**
IT-Based Company @ Siddartha Nagar Requires Computer Faculty for Franchise of KEONICS (Basic/Tally/ Coding) 1/2 Yrs Exp.
Any Administrative Staff (Any Degree) 1 Yr & above Exp.
9008027304
9008027308

**ಮಂಟಪ ಮನೆ**

ನಿತ್ಯ ಪೂಜೆ ಮಾಡಲು ನಿಮಗೊಂದು ದೇವರ ಮಂಟಪ ಬೇಕೇ ಬೀಟೆ ಮತ್ತು ಹಲಸು ಮರದಿಂದ ತಯಾರಿಸುತ್ತೇವೆ
ಸಂಪರ್ಕಿಸಿ: ಶ್ರೀನಗರ ಮೈಸೂರು
9448207634
9036742526

**ಮಾರುವವರು / ಕೊಳ್ಳುವವರು**
20x30 ಮನೆ Ground + 1st Floor 55 ಲಕ್ಷ, ದಟ್ಟಗಳ್ಳಿ.
Mob: 9945042875

**ಶ್ರೀ ಗೌರಿಶಂಕರ ಟ್ರಾವೆಲ್ಸ್**
28-5-23(10ದಿನ)- ಘಾಟಿಸುಬ್ರಮಣ್ಯ, ಕೋಟಿಲಿಂಗ, ಇಶಾಫೌಂಡೇಷನ್
28-6-23(4ದಿನ)- ಶಿರಡಿ, ತ್ರಯಂಬಕೇಶ್ವರ, ಭೀಮಶಂಕರ, ನಾಸಿಕ್, ಘೃಷ್ಣೇಶ್ವರ, ಎಲ್ಲೋರ ಇತ್ಯಾದಿ
11-8-23(7ದಿನ)- ಅಯೋಧ್ಯ, ಕಾಶಿ, ಪ್ರಯಾಗ್‌ರಾಜ್, ಬಾಬಾ ಬೈದ್ಯನಾಥ್, ಗಯಾ, ಬುದ್ಧಗಯಾ,ಇತರೆ ವಿಮಾನ/ಬಸ್/ರೂಂ/ಊಟ
9620002114

**ಬೇಕಾಗಿದ್ದಾರೆ**
ಮೈಸೂರಿನ ಹೆಬ್ಬಾಳದಲ್ಲಿರುವ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಕಾರ್ಯದರ್ಶಿ ಸ್ಥಾನಕ್ಕೆ, ಅನುಭವವುಳ್ಳ ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ:
Mob: 9591781745

**ಡ್ರೈವರ್ ಬೇಕಾಗಿದ್ದಾರೆ**
ಗೂಡ್ಸ್ ಗಾಡಿಗೆ ಡ್ರೈವರ್ ಬೇಕಾಗಿದ್ದಾರೆ ಸಂಬಳ: 15000/– ವಸತಿ ಉಚಿತ
8073625645

**ನಿವೇಶನ ಮಾರಾಟಕ್ಕಿದೆ**
EWS 390, ಬನ್ನಿಮಂಟಪ 3ನೇ ಹಂತ, ಭುವನೇಶ್ವರಿ ಚೌಲ್ಟ್ರಿ ಮುಂಭಾಗ
8618144835

**ಬೇಕಾಗಿದ್ದಾರೆ**
ಮೇಟಗಳ್ಳಿ ಮತ್ತು ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ: 10th Pass or Fail
8105651601
9611601179

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ಸ್
ಊಟ, ತಿಂಡಿ, ತಿಂಗಳಿಗೆ 4 ದಿನ ರಜೆ ESI, PF ಇದೆ ಆಕರ್ಷಕ ಸಂಬಳ ದೊರೆಯುತ್ತದೆ. 12 ಗಂಟೆ ಪಾಳಿಗೆ
6364440999
6364560079

**ವಧು ಬೇಕಾಗಿದ್ದಾರೆ**
ಬೆಂಗಳೂರಿನ 49 ವಯಸ್ಸಿನ MNC ಯಲ್ಲಿರುವ ಉನ್ನತ ವೇತನದ ವಿಚ್ಛೇದಿತ ಬ್ರಾಹ್ಮಣ ವರನಿಗೆ ವಧು ಬೇಕಾಗಿದ್ದಾರೆ.
9844408895
9538267942

**ಉಚಿತ ತರಬೇತಿ**
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

**ಸೈಟ್ಸ್ @ ಮೈಸೂರು**
ಇಲವಾಲ ಬಸ್ ಸ್ಟ್ಯಾಂಡ್ ಹತ್ತಿರ
DTCP APPROVED
ಹೂಡಿಕೆಗೆ / ಮನೆ ಕಟ್ಟಲು ಸೂಕ್ತವಾದ ಸ್ಥಳ
ಮುಂಬರಲಿರುವ ಮೈಸೂರು ಕುಶಾಲ್ ನಗರ ರಾಷ್ಟ್ರೀಯ ಹೆದ್ದಾರಿಯ ಹತ್ತಿರ
GSS 89512-76688

**ಸೈಟ್ಸ್ @ ಮೈಸೂರು**
T-Narasipura Road
ವರುಣ ಲೇಕ್ ವ್ಯೂ
MUDA APPROVED
ಮುಂಬರಲಿರುವ ಜೆಎಸ್‌ಎಸ್ ಯೂನಿವರ್ಸಿಟಿ ಹತ್ತಿರ
GSS 89512-76688

**ಹೊಸ ಮನೆ ಮಾರಾಟಕ್ಕಿದೆ**
40x70 ಮೂಡಾ ಅಪ್ರೂವ್, 30 ಚದರ ಮನೆ, 4BHK ಬ್ಯಾಂಕ್ ಲೋನ್ ಇದೆ, ಜೆಪಿನಗರ ಹತ್ತಿರ ರಿಂಗ್ ರಸ್ತೆ, ಮಹದೇವಪುರ Rs. 1.20 Cr
9342288281

**ಸಾಲ/LOANS**
1) House Purchase Loan
2) Site Purchase Loan
3) Construction Loan
4) Mortgage Loan
77605-98705

**ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್**
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

**WANTED TEACHERS**
GURUKULA ACADEMY
Pre Primary and Primary School (English Medium)
Wanted teachers for the subject Maths, Van Drivers and also Montessori teachers.
Preferable lady teacher and English fluency.
Contact: 98861 42884

**Sudarshan Saur**
SOLAR WATER HEATER

ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

**ಉದ್ಯೋಗ ಅವಕಾಶ**
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

**ಸಂಪು ಕ್ಲೀನಿಂಗ್‌ಗಾಗಿ**
ಸಂಪರ್ಕಿಸಿ:
8861612486

**ಬೇಕಾಗಿದ್ದಾರೆ**
ಫುಡ್ ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು: 18 ರಿಂದ 45, ಸಂಬಳ: ESI, PF ಒಳಗೊಂಡು 17600, Week off ಇರುತ್ತದೆ. 8 hrs Duty.
ಹೆಚ್ಚಿನ ಮಾಹಿತಿಯನ್ನು ಸ್ಥಳಕ್ಕೆ ಬಂದು ಪಡೆಯತಕ್ಕದ್ದು, ಸ್ಥಳ: CIPET ಕಾಲೇಜ್ ಹತ್ತಿರ, ಮೇಟಗಳ್ಳಿ ರಿಂಗ್ ರಸ್ತೆ, ಮೈಸೂರು
9986874584

**TEACHERS REQUIRED**

| | |
|---|---|
| B.SC, B.ED (CBZ) - | 01 |
| B.SC, B.ED (PCM)- | 01 |
| B.A., B.ED (SOCIAL)- | 01 |
| D.ED- | 03 |
| P.T TEACHER- | 01 |

7090130435

**HOUSE FOR LEASE**
Available 2 BHK at Alanahalli, Mysore, Giridarshini Layout, Nirmala Hospital, T.Narasipura Road, near Mahashakti Ganapathi Temple "Aijee Bandar Stores"
Call: 72044 45908

**SITES FOR SALE**
30x40, 30x30 dimensions, bank loan available. DTCP approved in Maratikyathanahalli, Mysuru. 4 kms from Bogadi Ring Road. Rs. 2160 per sq.ft.. Contact:
Mob: 8971918088

**CHANGE OF NAME**
I, P. Sudha Bhandary, W/o P. Ramachandra Bhandary, residing at #493, Saraswathi Road, Kaveri Main Road, Vidyashankara Layout, Mysuru-570 019, in my passport my name is entered as Sudha Bhandari. I have changed my name as P. Sudha Bhandary (new name as per Aadhaar Card No. 456373201792) which shall be considered for all further documentation, sworn in before Notary C.R. Seetharam, vide affidavit dated 8.5.2023.
Sd/- P. Sudha Bhandary

**Change of Name**
I, P. Ramachandra Bhandary, S/o Late P. Madhava Bhandary, residing at No. #493, Saraswathi Road, Kaveri Main Road, Vidyashankara Layout, Mysuru-570 019, in my wife's passport my name is entered as Ramachandra Bhandari. I have changed my name as P. Ramachandra Bhandary (new name as per Aadhaar Card No. 38423724 2100) which shall be consired for all further documentation, sworn in before Notary C.R. Seetharam, vide affidavit dated 8.5.2023.
Sd/- P. Ramachandra Bhandary

**ಕಳೆದಿದೆ**
ಅರ್ಷಿಯಾ ಮೊಹ್ಸಿನ್ ಫಾತೀಮ, ನಂ. 330, ಹುಡ್ಕೋ, ಬನ್ನಿಮಂಟಪ, ಮೈಸೂರು, ನನಗೆ ಸೇರಿದ ಸೈಟ್ ನಂ. 16/1, ಬನ್ನಿಮಂಟಪ 'ಎ' ಬಡಾವಣೆಯಲ್ಲಿರುವ ಈ ಸ್ವತ್ತಿನ ಅಲಾಟ್‌ಮೆಂಟ್ ಕಾಪಿ, ಟೈಟಲ್ ಡೀಡ್ ಮತ್ತು ಪೊಸಿಷನ್ ಡೀಡ್‌ಗಳು ಮನೆ ಬದಲಿಸುವಾಗ ಕಳೆದುಹೋಗಿರುತ್ತದೆ.
ಸಿಕ್ಕಿದವರು ಸಂಪರ್ಕಿಸಿ:
Mob: 08213322886

**St. Mary's GIRLS PU COLLEGE**
Chamundipuram, Mysore
* Admission Open
* Arts & Commerce
* Affordable Fee
9972389020
9844144232
above 85%, Free Admission

**WANTED**
Experience Lady Teacher to Teach 10th and 8th Std CBSE Syllabus, in Bannimantap, Mysore near KSRTC Depo
8861437181

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್
ಸಂಬಳ: ರೂ. 8000 ರಿಂದ 10,000. ಸ್ಥಳ: ರಮ್ಮನಹಳ್ಳಿ, ಬಂಡೀಪಾಳ್ಯ ಹತ್ತಿರ, ರಾಜೀವ್‌ನಗರ, ಶ್ರೀರಾಂಪುರ, ಮಂಡಿಮೊಹಲ್ಲಾ, ಎನ್.ಆರ್. ಮೊಹಲ್ಲಾ ಮತ್ತು ಬನ್ನಿಮಂಟಪ. ಸಂಪರ್ಕಿಸಿ:
Mob: 98445 93530

**ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ**
ಸಂಪರ್ಕಿಸಿ:
Mob: 91085 66022

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ಸ್ (12 ಗಂಟೆ)
ಸಂಬಳ: ರೂ. 10,000. ಊಟ ಮತ್ತು ವಸತಿ ಉಚಿತ. ಸ್ಥಳ: ಬನ್ನಿಮಂಟಪ, ಗೋಕುಲಂ.
ಸೆಕ್ಯೂರಿಟಿ ಗಾರ್ಡ್ಸ್
ಸಂಬಳ: ರೂ. 11,000 (12 ಗಂಟೆಗಳು). ಸ್ಥಳ: ಕುವೆಂಪುನಗರ, ಆಲನಹಳ್ಳಿ. ವಯಸ್ಸು: 30 ರಿಂದ 55. ಸಂಪರ್ಕಿಸಿ:
Mob: 8050505786

**Change of Name**
I, Zameer, S/o Abdul Sathar, residing at No. 208, 10th Cross, Gousiyanagar, Mysuru-570 019 has changed my name from Zameer to Abdul Zameer sworn before Notary Asadulla Khan, Mysore on 16-05-2023.
Sd/- Abdul Zameer

**Wanted Teachers**
IDEAL SCHOOL YELWALA
ENGLISH MEDIUM.
LKG to Xth Std.
BA, B.Sc., B.Ed., D.Ed., MA, M.Sc., B.Ed.
Hindi and Kannada
9900593211, 9845353761

**WANTED**
Wanted Sales Executives in Housing Loan Department
Only for Boys
Freshers / Experianced are allowed., Qualification: PUC/Any Degree
9986144999

**ಮೈಸೂರಿನ ಸಸ್ಯಾಹಾರಿ ಹೋಟೆಲ್‌ಗೆ ಕೆಲಸಕ್ಕೆ ಬೇಕಾಗಿದ್ದಾರೆ**
* ಕೌಂಟರ್ ಬಾಯ್ಸ್ (ಸಸ್ಯಾಹಾರಿ)–4,
* ಅಡುಗೆ ಭಟ್ಟರು (ಅನುಭವ 10 ವರ್ಷ) 1,
* ದೋಸೆ ಭಟ್ಟರು –1, ಆಲ್‌ರೌಂಡರ್–2
9945059645

**ಕೊಳ್ಳೇಗಾಲದ ಜ್ಯೋತಿಷ್ಯರು**
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

**ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು**
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ದಾರ್ಥನಗರ, ಮೈಸೂರು.

**JOBNET**
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲೇ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ರಿಂದ 20,000 ಸಂಪಾದಿಸಿ.
9731891409

**ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ**
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

**PART TIME JOBS**
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
Mob: 9148733213

**ಕಳೆದಿದೆ**
ನಮ್ಮ ಮನೆಯ ನಿವೇಶನ ಸಂಖ್ಯೆ 154ರ ಹಕ್ಕುಪತ್ರವು ದಿನಾಂಕ: 15–05–2023 ರಂದು ಸಿಟಿ ಬಸ್ ಸ್ಟ್ಯಾಂಡಿನಲ್ಲಿ ಕಳೆದಿದೆ. ಚಿಕ್ಕರಂಗಯ್ಯ, S/o ಲೇ। ದಾಸಪ್ಪ ಎಂಬ ಹೆಸರಿನಲ್ಲಿದೆ ನಾಗನಹಳ್ಳಿ ಗ್ರಾಮ & ಅಂಚೆ ಮೈಸೂರು ತಾ। & ಜಿಲ್ಲೆ
ಸಿಕ್ಕವರು ಸಂಪರ್ಕಿಸಿ: 9880540727

**ADMISSION OPEN**
Govt. of Karnataka Dept. of Tourism
Food Craft Institute, Mysuru
Exsibition ground, Ittigegudu
HOTEL MANAGEMENT
100% Job Placement / Govt. College /80% Practical Class
6362018821
www.fcimysuru.com

**ಬೇಕಾಗಿದ್ದಾರೆ**
ಟಿ.ನರಸೀಪುರ ತಾಲ್ಲೂಕು, ಮೇಗಳಾಪುರ ವಾಟರ್ ಫ್ಯಾಕ್ಟರಿಗೆ ಕಾರ್ಯನಿರ್ವಹಿಸಲು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಹಾಗೂ ಡಿಪ್ಲೋಮಾ, ಐ.ಟಿ.ಐ. ಅಭ್ಯರ್ಥಿಗಳು ಬೇಕಾಗಿದ್ದಾರೆ.
9972729997, 9611207870

**ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು**
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

**ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು**
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡಣ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

**ತಕ್ಷಣವೇ ಬೇಕಾಗಿದ್ದಾರೆ**
ಮೈಸೂರು, ಹೆಬ್ಬಾಳಿನಲ್ಲಿರುವ ಕಂಪನಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು, ಟೈಲರುಗಳು, ಹೆಲ್ಪರ್‌ಗಳು ಮತ್ತು ಡ್ರೈವರ್‌ಗಳು ತಕ್ಷಣ ಬೇಕಾಗಿದ್ದಾರೆ. ESI & PF ವಾರದ ರಜೆ ಮತ್ತು ಕೆಲವು ಸ್ಥಳಗಳಿಗೆ ಬಸ್ಸಿನ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
7795285485, 8105249880

**LADIES STAFF REQUIRED**
For education institute, near City Bus Stand, Mysuru.
Mob: 7892407345

**WANTED**
For Transport Company
Transport Experience Prefered. Staff -3
Goods Autodriver- 2
attractive Salary
T&C apply
9945026767

**ಸಂಭ್ರಮ ಬಾರ್ & ರೆಸ್ಟೋರೆಂಟ್, ನಜರ್‌ಬಾದ್**
ಸಪ್ಲೈಯರ್, ಕ್ಲೀನರ್, ವಾಚ್‌ಮ್ಯಾನ್, ಕಿಚನ್, ಅಸಿಸ್ಟೆಂಟ್ ಬೇಕಾಗಿದ್ದಾರೆ.
7411164808
9945108109

**WANTED**
HR, Accountant, Telecallers, Event Managers, TV Anchors, Marketing Managers, Pigmy Collection Boy.
Call: 8050052444

**WANTED**
Telecallers: 10 Nos. Male
Female: 10 Nos.
Kannada language required. Salary 12K.
Contact: Meghana HR
Mob: 7829803426
Free PG facilities available.

**Warden cum Teachers**
Qfn: BE / MSW / B.Sc. / M.Sc. / B.Com / BBA. Honorarium: 15,000 to 18,000 + Veg Food + Accommodation.
DIVYA DEEPA CHARITABLE TRUST
Manandavadi Road, Kenchalagudu, Mysore-570 008
Contact: Mob: 9341369901, 9538499901, 8088586087
www.divyadeepatrust.org

**SAI NALANDA CENTRAL SCHOOL**
K.R.NAGAR-571602
WANTED TEACHER
1. B.A. B.Sc / M.A M.Sc, With B.Ed.
2. BCA, MCA / M.Sc in Computer & NTT.
3. BBA/MBA.
4. SECURITY
FREE ACCOMODATION
nalandakrn@gmail.com, Web: www.sainalanda.com
8722093456 | 8722073456

**WANTED**
We require ITI Turner, Fitter, Electricians and Diploma in Mechanical, preferably Female.
MOB: 0821-2582668, 7204445679
Address: - Mystech Machines #Q113, 4th Cross, 8th Main, Hebbal Industrial Estate, Mysore-570016

**WANTED**
Sales Boys For Sports Shop in Mysore
Age 20 to 25 Yrs
Timing 10 am to 7 pm
7760109047
8105368325
At Mysore Sports, Dewans Road, Devraja Mohalla

**ಮೈಸೂರಿನಲ್ಲಿ ಉದ್ಯೋಗ**
SSLC (Pass) PUC, ITI, Diploma, Any Degree Pass ಆದಂತ ಅಭ್ಯರ್ಥಿಗಳನ್ನು ನೇರ ಸಂದರ್ಶನದೊಂದಿಗೆ ನೇರ ಆಯ್ಕೆ ಮಾಡಿಕೊಳ್ಳಲಾಗುತ್ತಿದೆ ವಯೋಮಿತಿ: 18 to 31 Years
ತಿಂಗಳಿಗೆ: 26000 ರಿಂದ 32000 (ಉಚಿತ ಊಟ ವಸತಿ ಸೌಲಭ್ಯವಿರುತ್ತದೆ.)
9900163228
ಸ್ವಾತಿಗೌಡ: 7349699460

**SITE FOR SALE**
40x60 East Facing Site Sale in Vijaynagara 4th Stage. Near Marimallappa Compound Price: 1.45 Cr Negotiable
Contact: JK Property
8197707001

**ತಕ್ಷಣ ಬೇಕಾಗಿದ್ದಾರೆ**
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ ವಿದ್ಯಾರ್ಹತೆ :- ಕನಿಷ್ಠ ಓದು/ಬರಹ ಗೊತ್ತಿರಬೇಕು. ವೇತನ:–13,448 + ESI & PF & ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲೆಗಳು, ಆಧಾರ್, ಬ್ಯಾಂಕ್ ಪಾಸ್ ಬುಕ್, ಫೋಟೊ –6, ಟಿ.ಸಿ, ಮಾರ್ಕ್ಸ್‌ಕಾರ್ಡ್ ಕಡ್ಡಾಯ
8453408502 , 9108100117

**ಬೇಕಾಗಿದ್ದಾರೆ**
ಮೈಸೂರಿನಲ್ಲಿ ಮಹಿಳಾ ವಿದ್ಯಾರ್ಥಿ ನಿಲಯದಲ್ಲಿ ಅಡುಗೆ ಕೆಲಸ ಮಾಡಲು ಮಹಿಳಾ ಅಡುಗೆಯವರು ಬೇಕಾಗಿರುತ್ತಾರೆ. ಅನುಭವ ವಿದ್ದರೆ ಅನುಕೂಲ. ವಯೋಮಿತಿ 45 ವರ್ಷ ಹಾಗೂ ರಾಮಕೃಷ್ಣ ನಗರದಲ್ಲಿ ಇರುವ ಟೈರ್ ಶೋರೂಂ ಗೆ ಬಿಲ್ಲಿಂಗ್ ಕೌಂಟರ್ ಅಲ್ಲಿ ಕೆಲಸ ಮಾಡಲು ಬೇಕಾಗಿರುತ್ತದೆ.
9986339606

**ಸೈಟು ಮಾರಾಟಕ್ಕಿದೆ ಮೂಡ ಅಪ್ರೂವ್ಡ್**
30x40 - East, North, West
40x60 - N/F, 40x60 - W/F
30x60 - North East Corner
58x60 - North East Corner ರಿಂಗ್ ರೋಡ್ ಹತ್ತಿರ ಯುನಿವರ್ಸಿಟಿ ಲೇಔಟ್ ಎದುರು, 30x50 - E/F ATME Engineering ಕಾಲೇಜ್ ಪಕ್ಕ,
40x60 - East Face ವರುಣ ಹತ್ತಿರ
9900372792

**HOUSE FOR RENT**
Two Bed Room House Ground Floor, Three Bed Room House Ist Floor, 6th cross Gokulam Ist Stage, Near Nirmala Convet
9986589770
9986724216

**ಬೇಕಾಗಿದ್ದಾರೆ**
ಫರ್ನಿಶಿಂಗ್ ಅಂಗಡಿಗೆ ಅಕೌಂಟೆಂಟ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
1 Year Tally Experience) Akbar Road, Near Ashoka Road, (ಸಂಬಳ 10000 to 14000) (ಸಮಯ 10am to 7pm)
9916459786

**ಮೈಸೂರಿನಲ್ಲಿರುವ ಹೋಟೆಲ್‌ಗೆ ಕೆಳಕಂಡ ಸಿಬ್ಬಂದಿ ಬೇಕಾಗಿದ್ದಾರೆ.**
1) ಟೀ, ಕಾಫಿ ಮಾಡುವವರು,
2) ರುಬ್ಬುವವರು, 3) ಕ್ಯಾಶಿಯರ್ (ಮಹಿಳೆ)
4) ವೈಟರ್, 5) ಕೌಂಟರ್ ಸ್ಟಾಫ್, 6) ಅಡುಗೆ ಭಟ್ಟರಿಗೆ ಅಸಿಸ್ಟೆಂಟ್ 7) ದೋಸೆ ಮಾಡುವವರು
8) ಜ್ಯೂಸ್ ಮಾಡುವವರು
9480286094
9632782624

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಕೆಲಸ ಮಾಡಲು Room Boys ಬೇಕಾಗಿದ್ದಾರೆ. ಊಟ ಹಾಗೂ ವಸತಿ ಸೌಕರ್ಯ ವಿರುತ್ತದೆ
ಹೋಟೆಲ್ ದಿವಾನ್ ರೆಸಿಡೆನ್ಸಿ ದಿವಾನ್ ರಸ್ತೆ, (ಶೃಂಗಾರ್ ಹೋಟೆಲ್ ಎದುರು, ಮೈಸೂರು
9845155940

**ತಕ್ಷಣ ಬೇಕಾಗಿದ್ದಾರೆ**
1. ಸೆಕ್ಯೂರಿಟಿ ಗಾರ್ಡ್ಸ್ (ಪುರುಷ) SSLC
2. ಮಷಿನ್ ಆಪರೇಟರ್ (ಪುರುಷರು) SSLC /PUC
3. ಹೆಲ್ಪರ್ (ಪುರುಷರು)
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9739199355
9844235981

**ಬೇಕಾಗಿದ್ದಾರೆ**
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. (ಕನ್ನಡ, ತೆಲಗು, ಹಿಂದಿ) ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ
ಸಂಬಳ: 8000/-
8150005111

**ತಕ್ಷಣ ಬೇಕಾಗಿದ್ದಾರೆ**
T.V.S. Toyota, ಬ್ರಿಟಾನಿಯಾ, ಟಾಟಾ ಮೋಟಾರ್, ಬಿಗ್‌ಬಜಾರ್, ಕಂಪನಿಗಳಿಗೆ ಆಫೀಸ್‌ಗಳಿಗೆ 5th, 7th, 10th, PUC, Degree ITI, Diploma ಯುವಕ/ಯುವತಿಯರು ನೇರನೇಮಕಾತಿ ಸಂಬಳ18,000/- 56,000/- ವಸತಿ ಊಟವಿದೆ.
9035520339

**WANTED TEACHERS**
For Coaching Centre
Kuvempunagar, Mysore,
* B.Sc B.Ed Maths Science
* B.A. B.Ed, Kannada, English, Hindi, Sanskrit, Social
* MSc, Physics Chemistry Maths, Biology
* M.Com, Accountancy, B/studies Statistics
Office Assistant (Female) B.Com/B.Sc
8197969078

**HOUSE FOR RENT**
3 Bed Room, Ground Floor, Door North Face, Solar, Near A to Z Super Market Kuvempunagar
9945516373

**WANTED**
DRIVER CUM HELPER
AGE 25 TO 35
SALARY 12,000/-
9448263927
9535584111

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ
Salary +OT 18800/-68000/-
9731029241
9035022214

**WANTED RECEPTIONIST**
Wanted Female Receptionist with Minimum 2 Years Experience & Good Communication Skills for Reputed Hospital in Mysore Immidiatly Contact:
8105912167

**Vidyavahini School (R)**
Hebbal, 2nd Stage, Mysore-570017
TEACHERS REQUIRED
Nursery - NST Teacher
High School - English & Kannada
B.A. / M.A., B.Ed.
Email:vidyavahini06@gmail.com
9844032278
7795115811

**ಮೈಸೂರು ಮಿತ್ರ — ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

## ಸುಸೂತ್ರವಾಗಿ ಸಿಇಟಿ ನಡೆಸುವಂತೆ ಡಿಸಿ ಡಾ.ಹೆಚ್.ಎನ್ ಗೋಪಾಲಕೃಷ್ಣ ಸೂಚನೆ



ಮಂಡ್ಯ, ಮೇ 17– ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಮೇ 20 ಮತ್ತು 21 ರಂದು 2023 ನೇ ಸಾಲಿನ ಇಂಜಿನಿಯರಿಂಗ್, ಕೃಷಿ ವಿಜ್ಞಾನ, ವೆಟರಿನರಿ, ಬಿ.ಎಸ್.ಸಿ(ನರ್ಸಿಂಗ್) ಮುಂತಾದ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕಾಗಿ ನಡೆಯುವ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಸುಸೂತ್ರ ಹಾಗೂ ಪಾರದರ್ಶಕವಾಗಿ ನಡೆಸಿ ಎಂದು ಜಿಲ್ಲಾಧಿಕಾರಿ ಡಾ.ಹೆಚ್ ಎನ್ ಗೋಪಾಲಕೃಷ್ಣ ಅವರು ತಿಳಿಸಿದರು.

ಅವರು ಇಂದು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆ ಸಂಬಂಧ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಅಧಿಕಾರಿಗಳು ಪರೀಕ್ಷಾ ಸೂಚನೆಗಳನ್ನು ಪಾಲನೆ ಮಾಡಿ ವ್ಯವಸ್ಥಿತವಾಗಿ ಪರೀಕ್ಷೆ ನಡೆಸಲು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಿ ಎಂದರು.

ಮೇ 20 ರಂದು ಬೆಳಿಗ್ಗೆ 10:30 ಗಂಟೆಯಿಂದ 11:50 ಗಂಟೆಯವರೆಗೆ ಜೀವಶಾಸ್ತ್ರ ಹಾಗೂ ಮಧ್ಯಾಹ್ನ 2:30 ರಿಂದ 3:50 ಗಂಟೆಯವರೆಗೆ ಗಣಿತ ಪರೀಕ್ಷೆ ನಡೆಯಲಿದೆ. ಮೇ 21 ರಂದು ಬೆಳಿಗ್ಗೆ 10:30 ಗಂಟೆಯಿಂದ 11:50 ಗಂಟೆಯವರೆಗೆ ಭೌತಶಾಸ್ತ್ರ ಹಾಗೂ ಮಧ್ಯಾಹ್ನ 2:30 ರಿಂದ 3:50 ಗಂಟೆಯವರೆಗೆ ರಾಸಾಯನಶಾಸ್ತ್ರ ಪರೀಕ್ಷೆ ನಡೆಯಲಿದೆ. ಜಿಲ್ಲೆಯಲ್ಲಿ ಒಟ್ಟು 5,076 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಕೆ.ಆರ್ ಪೇಟೆಯ 2 ಹಾಗೂ ಮಂಡ್ಯದ 10 ಕೇಂದ್ರಗಳಲ್ಲಿ ಪರೀಕ್ಷಾ ಕೇಂದ್ರಗಳು ಸೇರಿದಂತೆ ಒಟ್ಟು 12 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ ಎಂದರು.

# ಸೋಲಿನಿಂದ ಹತಾಶನಾಗಿಲ್ಲ.... ಕಾರ್ಯಕರ್ತರು ಎದೆಗುಂದಬೇಕಿಲ್ಲ

**ಕೌನ್ಸಿಲರ್ ವೈ.ಕೆ. ಬಾಬು ಶ್ರದ್ಧಾಂಜಲಿ ಸಭೆಯಲ್ಲಿ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು**

ಪಾಂಡವಪುರ, ಮೇ 17– ಚುನಾವಣೆಯ ಸೋಲಿನಿಂದ ನಾನು ಹತಾಶನಾಗಿಲ್ಲ, ಕ್ಷೇತ್ರದ ನನ್ನ ಕಾರ್ಯಕರ್ತರು, ಮುಖಂಡರು ಹೆದರುವ ಅಗತ್ಯವಿಲ್ಲ. ನಿಮ್ಮ ಕಷ್ಟ ಸುಖದಲ್ಲಿ ಸದಾ ಜತೆ ಇರುತ್ತೇನೆ ಎಂದು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಧೈರ್ಯತುಂಬಿದರು.

ಪಟ್ಟಣದ ಟಿಎಪಿಸಿಎಂಎಸ್ ಸಭಾಂಗಣದಲ್ಲಿ ಏರ್ಪಡಿಸಿದ್ದ ಇತ್ತೀಚೆಗೆ ಮೃತಪಟ್ಟ ಪುರಸಭೆ ಸದಸ್ಯ ಬಿ.ವೈ.ಬಾಬು ಅವರ ಶ್ರದ್ಧಾಂಜಲಿ ಸಭೆಯಲ್ಲಿ ಅವರು ಮಾತನಾಡಿದರು. ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದರೂ ನಿರಂತರ ಅಪಪ್ರಚಾರ ಮತ್ತು ಕಾಂಗ್ರೆಸ್ ಪಕ್ಷದ ಗ್ಯಾರಂಟಿಗಳಿಂದ ನನಗೆ ಸೋಲುಂಟಾಯಿತು.

ಚುನಾವಣೆ ಫಲಿತಾಂಶ ಘೋಷಣೆಯಾಗುತ್ತಿದ್ದಂತೆ ಹಲವಾರು ಕಡೆ ರೈತಸಂಘದ ಕಾರ್ಯಕರ್ತರು ಜೆಡಿಎಸ್ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದ್ದಾರೆ. ಕೆನ್ನಾಳು ಗ್ರಾಮದ ನಮ್ಮ ಪಕ್ಷದ ಮುಖಂಡ ಲಕ್ಷ್ಮೀಶ ಅವರ ಕಾಲು ಮುರಿದಿದ್ದಾರೆ. ಈ ಬಗ್ಗೆ ದೂರು ದಾಖಲಾಗಿದೆ. ಕ್ಷೇತ್ರದಾದ್ಯಂತ ಹಲ್ಲೆಗಳು, ದೌರ್ಜನ್ಯಗಳು ನಡೆದಿವೆ. ನಾವು ಇದುವರೆಗೂ ಕ್ಷೇತ್ರದಲ್ಲಿ ಶಾಂತಿ ಕಾಪಾಡಿಕೊಂಡು ಬಂದಿದ್ದೇವೆ. ನೂತನ ಶಾಸಕರೂ ಸಹ ಶಾಂತಿ ಕಾಪಾಡಬೇಕು. ನಮ್ಮ ಕಾರ್ಯಕರ್ತರ ತಂಟೆಗೆ ಬಂದರೆ ನಾವು ಸುಮ್ಮನಿರಲ್ಲ ಎಂದು ಎಚ್ಚರಿಕೆ ನೀಡಿದರು.



ಪಾಂಡವಪುರದಲ್ಲಿ ನಡೆದ ಬಿ.ವೈ.ಬಾಬು ಅವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಫೋಟೋಗೆ ಪುಷ್ಪಾರ್ಚನೆ ಸಲ್ಲಿಸಿದರು.

**ಬಾಬು ನಿಧನವೂ ಸೋಲಿಗೆ ಕಾರಣ :** ಜೆಡಿಎಸ್ ಭದ್ರಕೋಟೆಯಾಗಿದ್ದ ಮೇಲುಕೋಟೆ ಕ್ಷೇತ್ರದಲ್ಲಿ ನನ್ನ ಸೋಲಿಗೆ ಪುರಸಭೆ ಸದಸ್ಯ ಬಿ.ವೈ.ಬಾಬು ಅವರ ಅಕಾಲಿಕ ನಿಧನವೂ ಕಾರಣವಾಯಿತು ಎಂದ ಪುಟ್ಟರಾಜು, ಮೇ 7 ರಂದು ಸಂಜೆ 4 ಗಂಟೆಗೆ ಪಾಂಡವಪುರದಲ್ಲಿ ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡರ ರ‍್ಯಾಲಿ ನಿಗದಿಯಾಗಿತ್ತು. ದುರದೃಷ್ಟವಶಾತ್ ಅಂದು ಬೆಳಗ್ಗೆ 8 ಗಂಟೆಗೆ ಅಪಘಾತದಲ್ಲಿ ಪುರಸಭೆ ಸದಸ್ಯ ಬಾಬು ನಿಧನರಾದರು. ನಮ್ಮ ಪಕ್ಷದ ಮುಖಂಡರ ಮನೆಯಲ್ಲಿ ಶೋಕ ಇದ್ದಿದ್ದರಿಂದ ನಾನು ದೇವೇಗೌಡರ ರ‍್ಯಾಲಿಯನ್ನು ಅನಿವಾರ್ಯವಾಗಿ ರದ್ದು ಮಾಡಿದ್ದೆ. ದೇವೇಗೌಡರು ಕ್ಷೇತ್ರಕ್ಕೆ ಬಂದಿದ್ದರೆ ನನ್ನ ಮತಗಳಿಗೆ ಇನ್ನಷ್ಟು ವೃದ್ಧಿಯಾಗುತ್ತಿತ್ತು ಎಂದು ಪುಟ್ಟರಾಜು ತಮ್ಮ ಸೋಲಿನ ಕಾರಣಗಳನ್ನು ವಿವರಿಸಿದರು.

ಟಿಎಪಿಸಿಎಂಎಸ್ ಅಧ್ಯಕ್ಷ ಡಿ.ಶ್ರೀನಿವಾಸ್ ಮಾತನಾಡಿ, ಮೇಲುಕೋಟೆ ಕ್ಷೇತ್ರದ ಅಭಿವೃದ್ಧಿಯಲ್ಲಿ ಮಾಜಿ ಶಾಸಕ ಸಿ.ಎಸ್.ಪುಟ್ಟರಾಜು ಅವರ ಪಾತ್ರ ಬಹಳ ದೊಡ್ಡದು. ಆದರೂ ಜನ ಅವರನ್ನು ಸೋಲಿಸುವ ಮೂಲಕ ಕ್ಷೇತ್ರವನ್ನು ಮತ್ತಷ್ಟು ಹಿಂದಕ್ಕೆ ಕೊಂಡೊಯ್ದಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಇತ್ತೀಚೆಗೆ ಮೃತಪಟ್ಟ ಪುರಸಭೆ ಸದಸ್ಯ ಬಿ.ವೈ.ಬಾಬು ಅವರ ಭಾವಚಿತ್ರಕ್ಕೆ ಮಾಜಿ ಶಾಸಕ ಸಿ.ಎಸ್.ಪುಟ್ಟರಾಜು ಹಾಗೂ ಮುಖಂಡರು ಪುಷ್ಪಾರ್ಚನೆ ಸಲ್ಲಿಸಿದರು.

ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಜೆಡಿಎಸ್ ತಾಲೂಕು ಅಧ್ಯಕ್ಷ ಎಸ್.ಎ.ಮಲ್ಲೇಶ್, ಪುರಸಭೆ ಮಾಜಿ ಅಧ್ಯಕ್ಷ ಲಿಂಗರಾಜು(ಗುಣ), ವೀರಶೈವ ಸಮುದಾಯದ ಮುಖಂಡ ದ್ಯಾವಪ್ಪ, ಗುರುಸ್ವಾಮಿ ಸೇರಿದಂತೆ ಹಲವರು ಇದ್ದರು.

## ಮನ್‌ಮುಲ್ ಅಧ್ಯಕ್ಷ ಸ್ಥಾನಕ್ಕೆ ರಾಮಚಂದ್ರ ರಾಜೀನಾಮೆ ಅಂಗೀಕಾರ

ಮಂಡ್ಯ, ಮೇ 17– ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷ ಸ್ಥಾನಕ್ಕೆ ಬಿ.ಆರ್. ರಾಮಚಂದ್ರ ಅವರು ವರಿಷ್ಠರ ಸೂಚನೆಯಂತೆ ಏ.17ರಂದೇ ರಾಜೀನಾಮೆ ಸಲ್ಲಿಸಿದ್ದು, ಒಕ್ಕೂಟದ ಆಡಳಿತ ಮಂಡಳಿ ಸಭೆಯಲ್ಲಿ ರಾಜೀನಾಮೆ ಅಂಗೀಕಾರವಾಗಿದೆ.



ಮಂಡ್ಯ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿದ್ದ ಅವರು, ಅಭ್ಯರ್ಥಿ ಎಂದು ಘೋಷಣೆಗೂ ಮುನ್ನವೇ ಒಬ್ಬರಿಗೆ ಒಂದೇ ಹುದ್ದೆ ಎಂಬ ನಿಯಮದಡಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡುವಂತೆ ವರಿಷ್ಠರು ಸೂಚಿಸಿದ್ದರು. ಈ ನಿಟ್ಟಿನಲ್ಲಿ ರಾಮ ಚಂದ್ರ ಏ.17ರಂದೇ ರಾಜೀನಾಮೆ ಸಲ್ಲಿಸಿ ದ್ದರು ಎನ್ನಲಾಗಿದೆ. ರಾಮಚಂದ್ರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಜೆಡಿಎಸ್‌ನಲ್ಲಿ ಭಾರೀ ಲಾಬಿ ನಡೆಯುತ್ತಿದ್ದು, ಒಕ್ಕೂಟದ ಆಡಳಿತ ಮಂಡಳಿಯಲ್ಲಿ ಬಹುಮತವಿರುವ ಜೆಡಿಎಸ್‌ನಿಂದ ಅಧ್ಯಕ್ಷರಾಗಲು ಹಲವರು ಪೈಪೋಟಿ ನಡೆಸುತ್ತಿದ್ದಾರೆ.

ಆಡಳಿತ ಮಂಡಳಿಯಲ್ಲಿರುವ ಒಟ್ಟು 12 ನಿರ್ದೇಶಕ ಸ್ಥಾನಗಳ ಪೈಕಿ 8 ಸದಸ್ಯ ಬಲವನ್ನು ಜೆಡಿಎಸ್ ಹೊಂದಿದ್ದು, ಕಾಂಗ್ರೆಸ್ ಹಾಗೂ ಬಿಜೆಪಿ ತಲಾ ಎರಡು ಸದಸ್ಯ ಬಲವನ್ನು ಹೊಂದಿದೆ. ಒಂದು ನಾಮ ನಿರ್ದೇಶಿತ ಸದಸ್ಯರು ಹಾಗೂ ಮೂವರು ಸರ್ಕಾರಿ ನಾಮ ನಿರ್ದೇಶಿತ ಅಧಿಕಾರಿಗಳು ಇದ್ದಾರೆ.

ಪ್ರಸಕ್ತ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತದೊಂದಿಗೆ ರಾಜ್ಯದಲ್ಲಿ ಅಧಿಕಾರ ಹಿಡಿದಿದ್ದು, ಅಧಿಕಾರಿ ವರ್ಗದ ಮೂವರು ನಾಮ ನಿರ್ದೇಶಕರು ಹಾಗೂ ಒಂದು ಸರ್ಕಾರಿ ನಾಮ ನಿರ್ದೇಶನ ಕಾಂಗ್ರೆಸ್‌ಗೆ ದೊರೆಯಲಿದೆ. ಹೀಗಿದ್ದರೂ ಕಾಂಗ್ರೆಸ್‌ಗೆ 6 ಸ್ಥಾನಗಳು ಮಾತ್ರ ಲಭಿಸಲಿದ್ದು, ಬಿಜೆಪಿಯ ಒಬ್ಬ ಅಭ್ಯರ್ಥಿಯನ್ನು ಸೆಳೆದುಕೊಂಡರೂ ಅಧಿಕಾರ ಗದ್ದುಗೆ ಏರುವುದು ಕಷ್ಟಕರವಾಗಿದೆ.

**ಅಧಿಕಾರ ಹಿಡಿಯಲು ಕಾಂಗ್ರೆಸ್ ಕಸರತ್ತು:** ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿರುವ ಹಿನ್ನೆಲೆಯಲ್ಲಿ ಜೆಡಿಎಸ್ ಅಥವಾ ಬಿಜೆಪಿ ನಿರ್ದೇಶಕರನ್ನು ತಮ್ಮೆಡೆಗೆ ಸೆಳೆದುಕೊಂಡು ಅಧಿಕಾರ ಹಿಡಿಯುವುದಕ್ಕೆ ಮುಂದಾಗಿದೆ. ಅಧ್ಯಕ್ಷ ರಾಮಚಂದ್ರ ರಾಜೀನಾಮೆ ನೀಡಿದ ಬೆನ್ನಲ್ಲೆ ಆಪರೇಷನ್ ಹಸ್ತ ನಡೆಸುವುದಕ್ಕೆ ಚಿಂತನೆ ನಡೆಸಿದೆ.

ಮನ್‌ಮುಲ್ ನಿರ್ದೇಶಕರಾಗಿರುವ ಕೆ.ಆರ್.ಪೇಟೆಯ ನೂತನ ಶಾಸಕ ಹೆಚ್.ಟಿ.ಮಂಜು ಬೆಂಬಲಿಸಿ, ಜೆಡಿಎಸ್ ಸೇರಿರುವ ನಿರ್ದೇಶಕ ಡಾಲು ರವಿ, ಆಡಳಿತ ಮಂಡಳಿಯಲ್ಲಿ ಬಹುಮತವಿರುವ ಜೆಡಿಎಸ್‌ನಿಂದ ಅಧ್ಯಕ್ಷರಾಗಲು ಪ್ರಯತ್ನಿಸಿದರೆ, ಇತ್ತ ಎರಡು ನಿರ್ದೇಶಕರ ಕೊರತೆ ಎದುರಿಸುತ್ತಿರುವ ಕಾಂಗ್ರೆಸ್, ಹೇಗಾದರೂ ಮಾಡಿ ಅಧಿಕಾರ ಹಿಡಿಯಲು ತಂತ್ರಗಾರಿಕೆ ರೂಪಿಸುತ್ತಿದೆ.

## ಇಂದು ಜನಸಂಪರ್ಕ ಸಭೆ

ಮಂಡ್ಯ, ಮೇ 17– ಮಂಡ್ಯ ತಾಲೂಕು ವ್ಯಾಪ್ತಿಯಲ್ಲಿರುವ ಮಂಡ್ಯ ಉಪ ವಿಭಾಗ, ಕೊತ್ತತ್ತಿ ಉಪ ವಿಭಾಗ ಮತ್ತು ಕೆರಗೋಡು ಉಪ ವಿಭಾಗದ ವ್ಯಾಪ್ತಿಯ ವಿದ್ಯುತ್ ಸಮಸ್ಯೆಗಳ ಕುರಿತು ಚರ್ಚಿಸಲು ವಿದ್ಯುತ್ ಗ್ರಾಹಕರ ಕುಂದು ಕೊರತೆ ವಿಚಾರಣೆಯ ಜನಸಂಪರ್ಕ ಸಭೆಯನ್ನು ಅಧೀಕ್ಷಕ ಇಂಜಿನಿಯರ್ ಮಂಡ್ಯ ವೃತ್ತ ಮಂಡ್ಯ ರವರ ಅಧ್ಯಕ್ಷತೆಯಲ್ಲಿ ಮೇ 18ರ ಬೆಳಗ್ಗೆ 11 ಗಂಟೆಗೆ ಮಂಡ್ಯ ವಿಭಾಗದ ಸೆಸ್ಕ್ ಕಚೇರಿ ಆವರಣದಲ್ಲಿ ನಡೆಸಲಾಗುವುದು. ಸಾರ್ವಜನಿಕರ ಮತ್ತು ವಿದ್ಯುತ್ ಗ್ರಾಹಕರ ತಿಳುವಳಿಕೆಗಾಗಿ ಹಾಗೂ ಸಹಕರಿಸಲು ಸೆಸ್ಕ್ ಮಂಡ್ಯ ವಿಭಾಗ ಕಾರ್ಯನಿರ್ವಾಹಕ ಇಂಜಿನಿಯರ್ ಹೆಚ್. ಕೆ ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸ್ಥಾನಕ್ಕೆ ಉಮೇಶ್ ರಾಜೀನಾಮೆ

### ಕಾಂಗ್ರೆಸ್‌ಗೆ ತೆಕ್ಕೆಗೆ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಗಾದಿ ಖಚಿತ

ಮಂಡ್ಯ: ಪ್ರಸಕ್ತ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತದೊಂದಿಗೆ ಅಧಿಕಾರಕ್ಕೆ ಬಂದಿದ್ದು, ಡಿಸಿಸಿ ಬ್ಯಾಂಕ್‌ನ ಅಧಿಕಾರ ಕಾಂಗ್ರೆಸ್ ಪಾಲಾಗುವುದು ಖಚಿತವಾಗಿದೆ. ಈ ನಿಟ್ಟಿನಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸಿ.ಪಿ. ಉಮೇಶ್ ರಾಜೀನಾಮೆ ನೀಡಿದ್ದಾರೆ.



ಡಿಸಿಸಿ ಬ್ಯಾಂಕ್‌ನಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿಯುವುದನ್ನು ತಪ್ಪಿಸಲು ಹೆಚ್ಚು ನಿರ್ದೇಶಕರನ್ನು ಹೊಂದಿದ್ದ ಜೆಡಿಎಸ್, ಬಿಜೆಪಿಗೆ ಅಧ್ಯಕ್ಷ ಸ್ಥಾನವನ್ನು ಬಿಟ್ಟುಕೊಟ್ಟು, ಉಪಾಧ್ಯಕ್ಷ ಸ್ಥಾನವನ್ನು ತಾನು ಪಡೆದುಕೊಂಡಿತ್ತು. ಸರ್ಕಾರದ ನಾಮನಿರ್ದೇಶಕರ ಬಲದೊಂದಿಗೆ ಬಿಜೆಪಿ– ಜೆಡಿಎಸ್ ಬಹುಮತ ಪಡೆದಿತ್ತು.

ಮಂಡ್ಯ ಡಿಸಿಸಿ ಬ್ಯಾಂಕ್‌ನಲ್ಲಿ ಕಾಂಗ್ರೆಸ್–7, ಜೆಡಿಎಸ್ –5, ಸರ್ಕಾರದ ನಾಮನಿರ್ದೇಶನ ಸದಸ್ಯರು–ಮೂವರು ಇದ್ದುದ್ದರಿಂದ ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿಯಾಗಿ ಬಿಜೆಪಿಯ ನಾಮ ನಿರ್ದೇಶಿತ ಸದಸ್ಯ ಸಿ.ಪಿ.ಉಮೇಶ್ ಅಧ್ಯಕ್ಷರಾದರೆ, ಜೆಡಿಎಸ್‌ನ ಅಶೋಕ್ ಉಪಾಧ್ಯಕ್ಷರಾಗಿದ್ದರು. ಇದೀಗ ಮೂರು ನಾಮ ನಿರ್ದೇಶನ ಸದಸ್ಯರೊಂದಿಗೆ ಕಾಂಗ್ರೆಸ್ ಬಲ ಹತ್ತಕ್ಕೆ ಏರಲಿದ್ದು, ಆದರೆ ಜಿಪಂ ಮಾಜಿ ಅಧ್ಯಕ್ಷ ಗುರುಚರಣ್ ಬೆಂಬಲಿಗ ಸಂದರ್ಶ್ ಜೆಡಿಎಸ್ ಸೇರಿರುವುದರಿಂದ ಕಾಂಗ್ರೆಸ್ ಬಲ 9ಕ್ಕೆ ಕುಸಿಯಲಿದೆ. ಆದರೂ ಸುಲಭವಾಗಿ ಕಾಂಗ್ರೆಸ್‌ಗೆ ಅಧಿಕಾರ ಸಿಗಲಿದೆ.

## ಸಡಗರ, ಸಂಭ್ರಮದ ಮದ್ದೂರಮ್ಮ ಕೊಂಡೋತ್ಸವ



ಮದ್ದೂರು, ಮೇ 17– ಪಟ್ಟಣದ ಪುರಾಣದ ಪ್ರಸಿದ್ಧ ಹಾಗೂ ಅಧಿದೇವತೆ ಶ್ರೀ ಮದ್ದೂರಮ್ಮನವರ ಕೊಂಡೋತ್ಸವ ಬುಧವಾರ ಬೆಳಗ್ಗೆ ಸಡಗರ ಸಂಭ್ರಮದಿಂದ ಅದ್ದೂರಿಯಾಗಿ ನೆರವೇರಿತು.

ದೇಗುಲದ ಆವರಣದಲ್ಲಿ ಶ್ರೀ ಮದ್ದೂರಮ್ಮನವರ ದೇವರ ಪಟ ಹೊತ್ತ ಅರ್ಚಕ ಶಿವಣ್ಣ ಯಶಸ್ವಿಯಾಗಿ ಕೊಂಡ ಹಾಯ್ದರು. ಈ ಸಂದರ್ಭದಲ್ಲಿ ಕೊಂಡೋತ್ಸವಕ್ಕೆ ಆಗಮಿಸಿದ ಸಹಸ್ರಾರು ಭಕ್ತಾದಿಗಳ ಉದ್ಘೋಷ ಮುಗಿಲು ಮುಟ್ಟಿತ್ತು. ಜಿಲ್ಲೆ ಹಾಗೂ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ ಹೆಚ್ಚಿನ ಸಂಖ್ಯೆಯ ಭಕ್ತಾದಿಗಳನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಡುವಂತಾಗಿತ್ತು. ಕೊಂಡೋತ್ಸವ ಅಂಗವಾಗಿ ದೇವಾಲಯಲ್ಲಿ ವಿಶೇಷ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಮಂಗಳವಾರ ಬೆಳಗ್ಗೆ 10.30 ಗಂಟೆಗೆ ಶ್ರೀ ಮದ್ದೂರಮ್ಮ ಮಠಮನೆ ದೇವಸ್ಥಾನದಲ್ಲಿ ಹೋಮ, ಹವನ ಕಾರ್ಯ, 2.30 ಕ್ಕೆ ಶ್ರೀ ಎಲ್ಲಮ್ಮ ದೇವಿಯವರಿಗೆ ಚಂದ್ರಭಂಡಾರ ಸೇವೆ ಸಲ್ಲಿಸಲಾಯಿತು. ಸಂಜೆ 4 ಗಂಟೆಗೆ ಗ್ರಾಮಸ್ಥರಿಂದ ಕೊಂಡ ಬಂಡಿ ಉತ್ಸವ, ಪ್ರಮುಖ ಬೀದಿಗಳಲ್ಲಿ ಸಂಜೆ 6.30 ಕ್ಕೆ ಶ್ರೀ ಮದ್ದೂರಮ್ಮನವರ ಮೂಲ ದೇಗುಲದಲ್ಲಿ ಅಭಿಷೇಕ, ಹೋಮ, ಹವನ ಹಾಗೂ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ ಮಾಡಲಾಯಿತು.

ರಾತ್ರಿ 11.30 ಕ್ಕೆ ಕೊಂಡಕ್ಕೆ ಅಗ್ನಿ ಸ್ಪರ್ಶ ಪೂಜೆ ಮಾಡಲಾಯಿತು. ರಾತ್ರಿ 1 ಗಂಟೆಗೆ ಮಠಮನೆಯಿಂದ ಮಂಗಳವಾದ್ಯದೊಂದಿಗೆ ಶಿಂಷಾ ನದಿಗೆ ಬಂದು ನದಿಯ ದಡದಲ್ಲಿ ಶ್ರೀ ಮದ್ದೂರಮ್ಮನವರಿಗೆ 101 ಚಂದ್ರಭಂಡಾರ ಎಡೆ ಪೂಜೆ, ಹೂ ಹೊಂಬಾಳೆ ಪೂಜೆ, ಕರಗ ಪೂಜೆ ಮಾಡಿಕೊಂಡು ಊರಿನ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆಯೊಂದಿಗೆ ಮಠದ ಮನೆಗೆ ಕರತರಲಾಯಿತು. ಬುಧವಾರ ಬೆಳಗ್ಗೆ ಜೇಷ್ಠ ನಕ್ಷತ್ರ ಶುಭ ಬ್ರಾಹ್ಮಿ ಮಹೂರ್ತದಲ್ಲಿ ಕೊಂಡೋತ್ಸವ ಶಾಸ್ತ್ರೋಕ್ತವಾಗಿ ಅದ್ದೂರಿಯಾಗಿ ನಡೆಯಿತು.

## ಡೆಲ್ಲಿ ಕ್ಯಾಪಿಟಲ್ ವಿರುದ್ಧ ಪಂಜಾಬ್‌ಗೆ ಸೋಲು; ಆರ್‌ಸಿಬಿಗೆ ಪ್ಲಸ್



ಧರ್ಮಶಾಲಾ, ಮೇ 17(ಸಿಎನ್)– ರಿಲೀ ರೋಸ್ಸೌವ್ ಸ್ಫೋಟಕ ಆಟ ಹಾಗೂ ಸಂಘಟಿತ ಬೌಲಿಂಗ್ ನೆರವಿನಿಂದಾಗಿ ಪಂಜಾಬ್ ವಿರುದ್ಧ ಡೆಲ್ಲಿ ತಂಡ 15 ರನ್‌ಗಳ ಜಯ ಸಾಧಿಸಿತು.

ಇಲ್ಲಿನ ಹಿಮಾಚಲಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ಟಾಸ್ ಸೋತು ಬ್ಯಾಟಿಂಗ್ ಮಾಡಿದ ಡೆಲ್ಲಿ ನಿಗದಿತ 20 ಓವರ್‌ಗಳಲ್ಲಿ ಕೇವಲ 2 ವಿಕೆಟ್ ನಷ್ಟಕ್ಕೆ ಬರೋಬ್ಬರಿ 213 ರನ್‌ಗಳ ಬೃಹತ್ ಮೊತ್ತ ಪೇರಿಸಿತು. ತಂಡದ ಪರ ಡೇವಿಡ್ ವಾರ್ನರ್(54), ಪೃಥ್ವಿ ಷಾ(54), ರೋಸ್ಸೌವ್ ಪಂಜಾಬ್ ಬೌಲರ್‌ಗಳನ್ನು ಬೆಂಡೆತ್ತಿದ್ದರು. ಕೇವಲ 37 ಎಸೆತದಲ್ಲಿ 6 ಸಿಕ್ಸರ್ ಹಾಗೂ 6 ಬೌಂಡರಿ ಒಳಗೊಂಡ 82 ರನ್ ಸಿಡಿಸಿ ಅಜೇಯರಾಗಿ ಉಳಿದರು. ಸಾಲ್ಟ್ 26 ರನ್ ಗಳಿಸಿ ತಂಡ ಮೊತ್ತ 200ರ ಗಡಿ ದಾಟಿಸಿ ದರು. ಪಂಜಾಬ್ ಪರ ಸ್ಯಾಮ್‌ಕರ್ರನ್ 2 ವಿಕೆಟ್ ಪಡೆದಿದ್ದು ಬಿಟ್ಟರೆ ಉಳಿದ ಬೌಲರ್ ಗಳು ರನ್ಸ್ ಕೊಟ್ಟು ದುಬಾರಿಯಾದರು.

214 ರನ್‌ಗಳ ಬೃಹತ್ ಗುರಿ ಬೆನ್ನತ್ತಿದ ಪಂಜಾಬ್ ನಾಯಕ ಶಿಖರ್‌ಧವನ್ ಖಾತೆ ತೆರೆಯುವ ಮುನ್ನವೇ ವಿಕೆಟ್ ಕಳೆದುಕೊಂಡರೆ, ಪ್ರಭ್ಸಿಮ್ರನ್(22), ಅಥರ್ವ ಟೈಡೆ(55), ಶಾರುಕ್‌ಖಾನ್(6), ಸ್ಯಾಮ್ ಕರ್ರನ್(11) ರನ್ ಕಲೆ ಹಾಕಿದರೆ, ಜಿತೇಶ್, ಹಪ್ರೀತ್‌ಬ್ರಾರ್, ರಾಹುಲ್ ಚಹಾರ್ ಸೊನ್ನೆ ಸುತ್ತಿ ವಿಕೆಟ್ ಒಪ್ಪಿಸಿದರು. ಅತ್ತ ವಿಕೆಟ್ ಬೀಳುತ್ತಿದ್ದರು ಏಕಾಂಗಿ ಹೋರಾಟ ನಡೆಸಿದ ಲಿವಿಂಗ್‌ಸ್ಟನ್ ಕೇವಲ 48 ಎಸೆತಗಳಲ್ಲಿ ಆಕರ್ಷಕ 9 ಸಿಕ್ಸರ್ ಹಾಗೂ 5 ಬೌಂಡರಿ ಒಳಗೊಂಡ 94 ರನ್ ಸಿಡಿಸಿದರಾದರೂ ಪಂದ್ಯ ಗೆಲ್ಲಿಸಲು ಸಾಧ್ಯವಾಗಲಿಲ್ಲ. ಡೆಲ್ಲಿ ಪರ ಇಶಾಂತ್ ಶರ್ಮಾ, ನೋಕಿಯೆ ತಲಾ 2 ವಿಕೆಟ್ ಪಡೆದರೆ, ಖಲೀಲ್‌ಅಹ್ಮದ್, ಅಕ್ಸರ್‌ಪಟೇಲ್ ತಲಾ ಒಂದೊಂದು ವಿಕೆಟ್ ಉರುಳಿಸಿ ತಂಡದ ಗೆಲುವಿಗೆ ಕಾರಣರಾದರು. ಇದರೊಂದಿಗೆ ಆರ್‌ಸಿಬಿ ಪ್ಲೇಆಫ್ ಪ್ರವೇಶಾವಕಾಶ ಇನ್ನು ಮುಕ್ತವಾಯಿತು. ಡೆಲ್ಲಿ ತಂಡದ ರಿಲೀ ರೋಸ್ಸೌವ್ ಪಂದ್ಯೋತ್ತಮ ಪ್ರಶಸ್ತಿಗೆ ಭಾಜನರಾದರು.



*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

ಮೈಸೂರು ಮಿತ್ರ ಗುರುವಾರ 18 ಮೇ 2023

# ಕೊಡಗಿನಲ್ಲಿ ಬಿಜೆಪಿ ಸೋಲಿಗೆ ವಿಪಕ್ಷಗಳ ಒಳಒಪ್ಪಂದ ಕಾರಣ

**ಮಡಿಕೇರಿ, ವಿರಾಜಪೇಟೆ ಶಾಸಕರ ಸೋಲಿಗೆ ಜಿಲ್ಲಾ ಬಿಜೆಪಿ ಅಧ್ಯಕ್ಷ ವಿಶ್ಲೇಷಣೆ**



ಮಡಿಕೇರಿ, ಮೇ 17– ಕೊಡಗಿನ ಎರಡು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಸೋಲಿಗೆ ವಿಪಕ್ಷಗಳ ಒಳ ಒಪ್ಪಂದವೇ ಕಾರಣವೆಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಬಿನ್ ದೇವಯ್ಯ ಅವರು ನೇರ ಆರೋಪ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿನ ಬಿಜೆಪಿ ಸೋಲಿನ ಹೊಣೆಗಾರಿಕೆಯನ್ನು ಜಿಲ್ಲಾಧ್ಯಕ್ಷನಾಗಿ ತಾನೇ ಹೊರುವುದಾಗಿ ತಿಳಿಸಿದರು. ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿಯನ್ನು ಅಧಿಕಾರದಿಂದ ಹೊರಗಿಡಬೇಕೆನ್ನುವ ಏಕ ಮಾತ್ರ ಉದ್ದೇಶದಿಂದ ವಿಪಕ್ಷಗಳೆಲ್ಲವೂ ಒಂದಾಗಿ ಕೆಲಸ ಮಾಡಿರುವುದಾಗಿ ಟೀಕಿಸಿದರು.

ಜಿಲ್ಲೆಯ ಎರಡು ಕ್ಷೇತ್ರಗಳನ್ನು ಬಿಜೆಪಿ ಕಳೆದುಕೊಂಡಿದ್ದರೂ, ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಪಡೆದುಕೊಂಡ ಮತಗಳನ್ನು ತುಲನೆ ಮಾಡಿದಲ್ಲಿ, ಈ ಬಾರಿ ಬಿಜೆಪಿ ಹೆಚ್ಚಿನ ಮತಗಳನ್ನು ಪಡೆದು ಕೊಂಡಿದೆ. ಮಡಿಕೇರಿ ಕ್ಷೇತ್ರದಲ್ಲಿ ಕಳೆದ ಬಾರಿ ಬಿಜೆಪಿ 69,954 ಮತ ಗಳನ್ನು ಪಡೆದಿದ್ದರೆ, ಈ ಬಾರಿ 80,470 ಮತ ಗಳನ್ನು, ವಿರಾಜಪೇಟೆ ಕ್ಷೇತ್ರದಲ್ಲಿ ಕಳೆದ ಬಾರಿ 77,944 ಮತಗಳನ್ನು ಪಡೆದಿದ್ದರೆ, ಈ ಬಾರಿ 79,500 ಮತ ಗಳನ್ನು ಪಡೆದಿದ್ದು, ಒಟ್ಟಾಗಿ ಕಳೆದ ಬಾರಿ ಗಿಂತ 13,079 ಹೆಚ್ಚಿನ ಮತಗಳನ್ನು ಬಿಜೆಪಿ ಗಳಿಸಿದೆ ಎಂದು ತಿಳಿಸಿದರು.

**ಜೆಡಿಎಸ್ ಹೊತ್ತ ಬೆಂಬಲ:** ಜಿಲ್ಲೆಯಲ್ಲಿ ಕಾಂಗ್ರೆಸ್ ಗೆಲುವಿಗೆ ಜೆಡಿಎಸ್ ಪರೋಕ್ಷ ಬೆಂಬಲವನ್ನು ನೀಡಿರುವುದಾಗಿ ಆರೋಪಿಸಿದ ಅವರು, ಕಳೆದ ಚುನಾವಣೆ ಯಲ್ಲಿ ಜೆಡಿಎಸ್ ಮಡಿಕೇರಿ ಕ್ಷೇತ್ರದಲ್ಲಿ 54 ಸಾವಿರ ಮತಗಳನ್ನು ಪಡೆದಿದ್ದರೆ, ಈ ಬಾರಿ ಕೇವಲ 7 ಸಾವಿರ ಮತಗಳ ನ್ನಷ್ಟೆ ಪಡೆದಿದೆ. ವಿರಾಜಪೇಟೆ ಕ್ಷೇತ್ರದಲ್ಲಿ ಕಳೆದ ಬಾರಿ ಜೆಡಿಎಸ್ 11 ಸಾವಿರ ಪಡೆದಿದ್ದರೆ, ಈ ಬಾರಿ ಕೇವಲ 1 ಸಾವಿರ ಮತಗಳನ್ನು ಪಡೆದಿರುವುದರತ್ತ ಬೊಟ್ಟು ಮಾಡಿ, ಬಿಜೆಪಿ ಸೋಲಿಗೆ ಜೆಡಿಎಸ್ ಒಳಗೊಂಡಂತೆ ಎಲ್ಲ ಪಕ್ಷಗಳ ಒಳ ಒಪ್ಪಂದಗಳನ್ನು ಮಾಡಿಕೊಂಡಿರು ವುದಾಗಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ವಕ್ತಾರ ಮಹೇಶ್ ಜೈನಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಪಂಡ ಕಾಳಪ್ಪ, ಪಕ್ಷದ ಪ್ರಮುಖರಾದ ಅರುಣ್ ಕುಮಾರ್, ಮಾದಪ್ಪ ಉಪಸ್ಥಿತರಿದ್ದರು.

# ಜಿಲ್ಲೆಯಲ್ಲಿ ಬಿಜೆಪಿಯ ಅಭಿವೃದ್ಧಿ ಶೂನ್ಯ, ಭ್ರಷ್ಟಾಚಾರದಿಂದ ಕಾಂಗ್ರೆಸ್‌ಗೆ ಗೆಲುವು

**ಕೊಡಗು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ ವಿವರಣೆ**



ಮಡಿಕೇರಿ, ಮೇ 17– ಅಭಿವೃದ್ಧಿ ಶೂನ್ಯ ಮತ್ತು ಭ್ರಷ್ಟಾಚಾರವನ್ನು ಮುಚ್ಚಿ ಹಾಕಲು ಜನರ ಹಾದಿ ತಪ್ಪಿಸುವುದಕ್ಕಾಗಿ ಬಿಜೆಪಿ ಮಾಡಿದ ಪ್ರಯತ್ನಗಳು ವಿಫಲವಾಗಿದ್ದು, ಜನರು ಪರಿವರ್ತನೆ ಬಯಸಿದ ಪರಿಣಾಮ ಕಾಂಗ್ರೆಸ್ ಭರ್ಜರಿ ಗೆಲುವನ್ನು ಸಾಧಿಸಿದೆ ಎಂದು ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಧರ್ಮಜ ಉತ್ತಪ್ಪ ಅಭಿಪ್ರಾಯಪಟ್ಟಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 20 ವರ್ಷಗಳಿಂದ ಗೆಲ್ಲಲು ಸಾಧ್ಯವಾಗದಿದ್ದ ಕೊಡಗು ಜಿಲ್ಲೆಯ ಎರಡೂ ಕ್ಷೇತ್ರಗಳನ್ನು ಕಾಂಗ್ರೆಸ್ ಗೆದ್ದುಕೊಂಡಿದೆ. ಮಡಿಕೇರಿ ಕ್ಷೇತ್ರದ ಮಂತರ್ ಗೌಡ ಹಾಗೂ ವಿರಾಜಪೇಟೆ ಕ್ಷೇತ್ರದ ಎ.ಎಸ್.ಪೊನ್ನಣ್ಣ ಅವರು ಉತ್ಸಾಹಿ ಶಾಸಕರುಗಳಾಗಿದ್ದಾರೆ. ಈ ಗೆಲುವು ನನ್ನ ಒಬ್ಬನಿಂದ ಸಾಧ್ಯವಾಗಿಲ್ಲ, ತಳಮಟ್ಟದ ಕಾರ್ಯಕರ್ತರಿಂದ ಹಿಡಿದು ಪ್ರತಿಯೊಬ್ಬ ಪದಾಧಿಕಾರಿ ಹಾಗೂ ಮೇಲ್ಮಟ್ಟದ ನಾಯಕರಿಗೂ ಯಶಸ್ಸಿನ ಕೀರ್ತಿ ಸಲ್ಲಬೇಕು ಎಂದರು.

ಬಿಜೆಪಿ ಸ್ಟಾರ್ ಪ್ರಚಾರಕನ್ನು ಕರೆತಂದರೂ ಎರಡು ಕ್ಷೇತ್ರಗಳನ್ನು ಕಾಂಗ್ರೆಸ್ ಗೆದ್ದುಕೊಂಡಿದೆ. ಜಿಲ್ಲೆಯ ಇಬ್ಬರು ನೂತನ ಶಾಸಕರು ಅಭಿವೃದ್ಧಿ ಕಾರ್ಯಗಳಿಗೆ ಒತ್ತು ನೀಡಲಿದ್ದಾರೆ. ಚುನಾವಣೆ ಪೂರ್ವದಲ್ಲೇ ಮಂಥರ್ ಗೌಡ ಹಾಗೂ ಪೊನ್ನಣ್ಣ ಅವರುಗಳು ಸಮಸ್ಯೆಗಳಿಗೆ ಸ್ಪಂದಿಸುತ್ತಾ ಜನರ ಮನಸನ್ನು ಗೆದ್ದಿದ್ದಾರೆ. ಎರಡು ಕ್ಷೇತ್ರಗಳಲ್ಲಿ ಪ್ರತ್ಯೇಕವಾಗಿ ಬಿಡುಗಡೆ ಮಾಡಲಾಗಿರುವ ಪ್ರಣಾಳಿಕೆಯ ಭರವಸೆಗಳನ್ನು ಈಡೇರಿಸಲಿದ್ದೇವೆ. ಜಿಲ್ಲೆಗೆ ಅಗತ್ಯವಾಗಿ ಬೇಕಾಗಿರುವ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಬೇಡಿಕೆಯನ್ನು ಮುಂದಿನ ಐದು ವರ್ಷಗಳಲ್ಲಿ ಪೂರ್ಣ ಗೊಳಿಸಲಿದ್ದೇವೆ ಎಂದು ಭರವಸೆ ನೀಡಿದರು. ಗೋಣಿಕೊಪ್ಪಲಿನಲ್ಲಿ ನೆನಗುದಿಗೆ ಬಿದ್ದಿರುವ ಹೈಟೆಕ್ ಬಸ್ ನಿಲ್ದಾಣದ ಕನಸನ್ನು ನನಸು ಮಾಡಲಿದ್ದೇವೆ ಮತ್ತು ಭಾಗಮಂಡಲದ ಮೇಲು ಸೇತುವೆ ಕಾಮಗಾರಿಯನ್ನು ಪೂರ್ಣಗೊಳಿಸಲಿದ್ದೇವೆ ಎಂದು ತಿಳಿಸಿದರು.

ನಾನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಳ್ಳುವ ಸಂದರ್ಭ ಪಕ್ಷ ತೀವ್ರ ಹಿನ್ನಡೆಯಲ್ಲಿತ್ತು. ಆದರೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರ ಬೆಂಬಲದಿಂದ ಹಲವು ಘಟ್ಟಗಳಲ್ಲಿ ನಾನು ಯಶಸ್ಸನ್ನು ಸಾಧಿಸಲು ಸಾಧ್ಯವಾಯಿತು. ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ಧ್ರುವನಾರಾಯಣ ಅವರು ನನ್ನ ಮೇಲೆ ವಿಶ್ವಾಸವಿಟ್ಟು, ಎರಡೂ ಕ್ಷೇತ್ರಗಳನ್ನು ಗೆಲ್ಲಿಸಿಕೊಂಡು ಬರುವಂತೆ ತಿಳಿಸಿದ್ದರು. ಅಲ್ಲದೆ ಎರಡು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದರೆ ಉತ್ತಮ ಸ್ಥಾನಮಾನ ಕೊಡಿಸುವ ಭರವಸೆ ನೀಡಿದ್ದರು. ಆದರೆ ಅವರು ಇಂದು ನಮ್ಮೊಂದಿಗೆ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಪಕ್ಷದ ಪ್ರಚಾರ ಸಮಿತಿಯ ಜಿಲ್ಲಾಧ್ಯಕ್ಷ ಟಿ.ಪಿ. ರಮೇಶ್ ಅವರು ಮಾತನಾಡಿ, ಜಿಲ್ಲೆಯಲ್ಲಿ ನಾವು ಐತಿಹಾಸಿಕ ಗೆಲುವನ್ನು ಸಾಧಿಸಿದ್ದೇವೆ. ಯಾವ ಪ್ರದೇಶಗಳಲ್ಲಿ ಕಾಂಗ್ರೆಸ್‌ಗೆ ಕಡಿಮೆ ಮತಗಳು ಬಿದ್ದಿವೆಯೋ ಅಲ್ಲಿ ಪಕ್ಷ ಸಂಘಟನೆಯನ್ನು ತೀವ್ರಗೊಳಿಸಲಾಗುವುದು. ಆ ಮೂಲಕ ಮುಂಬರುವ ಲೋಕಸಭಾ ಚುನಾವಣೆಗೆ ತಯಾರಿ ನಡೆಸಲಾಗುವುದೆಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ವಕ್ತಾರ ಟಾಟುಮೊಣ್ಣಪ್ಪ, ಪ್ರಧಾನ ಕಾರ್ಯದರ್ಶಿ ಕೊಲ್ಯದ ಗಿರೀಶ್, ಡಿಸಿಸಿ ಉಪಾಧ್ಯಕ್ಷ ಸಲಾಂ ಹಾಗೂ ನಗರ ಕಾಂಗ್ರೆಸ್ ಅಧ್ಯಕ್ಷ ಬಿ.ವೈ.ರಾಜೇಶ್ ಉಪಸ್ಥಿತರಿದ್ದರು.

## ದುಬಾರೆಯಲ್ಲಿ ಆನೆ ಕಾವಾಡಿಗರ ನೇಮಕಾತಿ ಆರಂಭ



ಸಿದ್ದಾಪುರ, ಮೇ 17– ವಿರಾಜಪೇಟೆ ತಾಲೂಕಿನ ದುಬಾರೆ ಸಾಕಾನೆ ಶಿಬಿರದಲ್ಲಿ ಕಾವಾಡಿಗರ ಸಂಖ್ಯೆ ಕೊರತೆ ಇರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಆದೇಶದಂತೆ ಅರಣ್ಯ ಇಲಾಖೆ ಅಧಿಕಾರಿಗಳ ಸಮ್ಮುಖದಲ್ಲಿ ಪರಿಣಿತ ಆನೆ ಕಾವಾಡಿಗರ ನೇರ ನೇಮಕಾತಿ ಪ್ರಕ್ರಿಯೆಗೆ ಕೊಡಗು ಅರಣ್ಯ ಸಂರಕ್ಷಣಾಧಿಕಾರಿ ಬಿ.ಎನ್ ಎನ್ ಮೂರ್ತಿ ಚಾಲನೆ ನೀಡಿದರು.

ರಾಜ್ಯದ ನಾನಾ ಭಾಗಗಳಿಂದ 29 ಕಾವಾಡಿಗರು ನೇಮಕಾತಿ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದಾರೆ. ಆನೆ ಪಳಗಿಸುವ ಪರಿಣಿತರಿಗೆ ಆದ್ಯತೆ ನೀಡಲಾಗುತ್ತಿದ್ದು, ದುಬಾರೆ ಸಾಕಾನೆ ಶಿಬಿರದಲ್ಲಿ ಕೊರತೆಯಾಗಿರುವ 5 ಕಾವಾಡಿಗರನ್ನು ನೇಮಿಸಲಾಗುವುದು ಎಂದು ಬಿಎನ್‌ಎನ್ ಮೂರ್ತಿ ತಿಳಿಸಿದರು.

ಈ ಸಂದರ್ಭ ಡಿಸಿಎಫ್ ಶಿವರಾಂ ಬಾಬು, ಶರಣಬಸಪ್ಪ, ಎಸಿಎಫ್ ಗೋಪಾಲ್, ಶ್ರೀನಿವಾಸ್ ನಾಯ್ಕ್, ನೆಹರು, ಆರ್‌ಎಫ್‌ಓ ಅನನ್ಯ ಕುಮಾರ್, ಶಿವರಾಮ್, ಡಿಆರ್‌ಎಫ್‌ಓ ರಂಜನ್, ಚೇತನ್, ಸವಣ ಮತ್ತಿತರರು ಹಾಜರಿದ್ದರು.

## ಶ್ರೀ ಕಂಚಿ ಕಾಮಾಕ್ಷಿ ದೇವರ ಕರಗೋತ್ಸವ

ವಿರಾಜಪೇಟೆ, ಮೇ.17– ನಗರದ ಮಿನುಪೇಟೆಯಲ್ಲಿರುವ 'ಶ್ರೀ ಕಂಚಿ ಕಾಮಾಕ್ಷಿ ದೇವರ ಕರಗೋತ್ಸವ'ವು ಮಂಗಳವಾರದಿಂದ ಪ್ರಾರಂಭವಾಗಿದ್ದು, ಗುರುವಾರದವರೆಗೂ ವಿಜೃಂಭಣೆಯಿಂದ ನಡೆಯಲಿದೆ.



ಕಂಚಿ ಕಾಮಾಕ್ಷಿ ದೇವಿಯ ಕರಗೋತ್ಸವದ ಅಂಗವಾಗಿ ಮಂಗಳವಾರ ಪ್ರಾತಃಕಾಲ ದೇವಾಲಯದಲ್ಲಿ ಗಣಪತಿ ಹೋಮ ನೆರವೇರಿಸಲಾಯಿತು. ಬಳಿಕ ಕರಗೋತ್ಸವಕ್ಕೆ ಚಾಲನೆ ನೀಡಲಾಯಿತು. ಸಂಜೆ 6 ಗಂಟೆಗೆ ಪಟ್ಟಣದ ತೆಲುಗರ ಬೀದಿಯಲ್ಲಿರುವ ಶ್ರೀ ಮಾರಿಯಮ್ಮ ದೇವಸ್ಥಾನ, ಶ್ರೀ ಅಂಗಳಾ ಪರಮೇಶ್ವರಿ ದೇವಸ್ಥಾನ ಮತ್ತು ಜೈನರ ಬೀದಿಯಲ್ಲಿರುವ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಬಳಿಕ ಶ್ರೀ ಕಂಚಿ ಕಾಮಾಕ್ಷಿ ಮತ್ತು ಮಾರಿಯಮ್ಮ ದೇವಿಯ ಕರಗಗಳ ಮೆರವಣಿಗೆಯು ಪಟ್ಟಣದ ಮುಖ್ಯಬೀದಿಗಳಲ್ಲಿ ನಡೆಯಿತು.

ಬುಧವಾರ ದೇವಸ್ಥಾನದಲ್ಲಿ ಬೆಳಗ್ಗೆಯಿಂದಲೇ ವಿಶೇಷ ಪೂಜೆಗಳು ನಡೆದು ಮಧ್ಯಾಹ್ನ 1 ಗಂಟೆಗೆ ಮಹಾಪೂಜೆ ಪ್ರಸಾದ ವಿನಿಯೋಗ ನಂತರ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಗುರುವಾರ ದೇವರಿಗೆ ಅಲಂಕಾರ, ಮಹಾಪೂಜೆ, ಅನ್ನಸಂತರ್ಪಣೆ ಬಳಿಕ ಮಾರಿಯಮ್ಮ ದೇವಿಯ ವಿಸರ್ಜನೆ ನಡೆಯಲಿದೆ. ಕರಗೋತ್ಸವದಲ್ಲಿ ದೇವಾಲಯ ಸಮಿತಿ ಅಧ್ಯಕ್ಷ ಜಿ.ಜಿ.ಮೋಹನ್, ಗೌರವ ಅಧ್ಯಕ್ಷ ನಾರಾಯಣ ಸ್ವಾಮಿ, ಖಜಾಂಚಿ ಪ್ರಸಾದ್, ಕಾರ್ಯದರ್ಶಿ ಜಿ.ಎ.ಗಣೇಶ್, ಸಹಕಾರ್ಯದರ್ಶಿ ಜಿ.ಜಿ.ಗಣೇಶ್ ಸೇರಿದಂತೆ ನೂರಾರು ಸಂಖ್ಯೆಯಲ್ಲಿ ಭಕ್ತಾದಿಗಳು ನೆರೆದಿದ್ದರು.

# ಕಾಡಾನೆ ದಾಳಿಯಿಂದ ಗಾಯಗೊಂಡವರಿಗೆ ಧೈರ್ಯ ತುಂಬಿದ ಶಾಸಕ ಪೊನ್ನಣ್ಣ

**ಶಾಸಕರ ಸೂಚನೆ ಮೇರೆಗೆ ಆಸ್ಪತ್ರೆಗೆ ಭೇಟಿ ನೀಡಿದ ಸಂಕೇತ್ ಪೂವಯ್ಯ**



ಸಿದ್ದಾಪುರ, ಮೇ 17– ಕಾಡಾನೆ ದಾಳಿಯಿಂದ ಗಂಭೀರವಾಗಿ ಗಾಯಗೊಂಡು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಪಾಲಿಬೆಟ್ಟದ ಕಾರ್ಮಿಕ ಬಾಬಿ ಹಾಗೂ ಹೊಸೂರು ಕಾರೆಕಾಡುವಿನ ಕಾರ್ಮಿಕ ಮಾದು ಅವರಿಗೆ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಧೈರ್ಯ ತುಂಬಿದ್ದಾರೆ.

ಜೊತೆಗೆ ಕಾಡಾನೆ ದಾಳಿಯಲ್ಲಿ ಗಾಯಗೊಂಡು ಗಂಭೀರ ಸ್ಥಿತಿಯಲ್ಲಿರುವ ಇಬ್ಬರ ಚಿಕಿತ್ಸೆ ವೆಚ್ಚವನ್ನು ಸಂಪೂರ್ಣವಾಗಿ ಭರಿಸುವಂತೆ ಅರಣ್ಯ ಇಲಾಖೆಗೆ ಪೊನ್ನಣ್ಣ ಸೂಚನೆ ನೀಡಿದ್ದಾರೆ. ಕಾಡಾನೆ ದಾಳಿಯಿಂದ ತೀವ್ರವಾಗಿ ಗಾಯಗೊಂಡು ಮೈಸೂರಿನ ಖಾಸಗಿ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಇಬ್ಬರ ಆರೋಗ್ಯ ವಿಚಾರಿಸುವಂತೆ ಕೆಪಿಸಿಸಿ ವಕ್ತಾರ ಮೇರಿಯಂಡ ಸಂಕೇತ್ ಪೂವಯ್ಯ ಅವರಿಗೆ ಶಾಸಕ ಪೊನ್ನಣ್ಣ ಅವರು ತಿಳಿಸಿದ ಮೇರೆಗೆ ಆಸ್ಪತ್ರೆಗೆ ಪೂವಯ್ಯ ಭೇಟಿ ನೀಡಿ ದೂರವಾಣಿ ಕರೆ ಮಾಡಿ ಶಾಸಕರ ಜೊತೆ ಗಾಯಾಳುಗಳೊಂದಿಗೆ ಮಾತನಾಡಿಸಿದರು.

ಇದೇ ಸಂದರ್ಭ ದೂರವಾಣಿ ಮೂಲಕ ಪೊನ್ನಣ್ಣ ಅವರು ಅರಣ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ಗಾಯಾಳುಗಳು ಗುಣಮುಖರಾಗುವವರೆಗೂ ಅವರ ಬಗ್ಗೆ ಮುತುವರ್ಜಿ ವಹಿಸಬೇಕು. ಅದರೊಂದಿಗೆ ಕಾಡಾನೆಗಳ ಉಪಟಳವಿರುವ ಪ್ರದೇಶಗಳಲ್ಲಿ ವೈಜ್ಞಾನಿಕವಾಗಿ ಕಾರ್ಯಾಚರಣೆ ನಡೆಸಿ ಕಾಡಿಗಟ್ಟುವ ಕೆಲಸವಾಗಬೇಕು, ರಾಜ್ಯ ಸರಕಾರದಿಂದ ಇದಕ್ಕೆ ಬೇಕಾದ ಅನುಮತಿಯನ್ನು ತ್ವರಿತವಾಗಿ ದೊರಕಿಸಿಕೊಡುವುದಾಗಿ ಭರವಸೆ ನೀಡಿದರು.

ಸಂಕೇತ್ ಪೂವಯ್ಯ ಈ ಬಗ್ಗೆ ಪ್ರತಿಕ್ರಿಯಿಸಿ, ನೂತನ ಶಾಸಕರು ಸರಕಾರ ರಚನೆಯ ಪ್ರಕ್ರಿಯೆ ಹಿನ್ನೆಲೆ ಬೆಂಗಳೂರಿನಲ್ಲಿದ್ದಾರೆ. ಗಾಯಾಳುಗಳನ್ನು ಭೇಟಿ ಮಾಡುವಂತೆ ತನಗೆ ತಿಳಿಸಿದ ಮೇರೆಗೆ ಬಂದಿದ್ದೇನೆ. ಜಿಲ್ಲೆಯ ಅರಣ್ಯ ಇಲಾಖೆ ಅಧಿಕಾರಿಗಳು ಮೈಸೂರಿನ ಆಸ್ಪತ್ರೆಯಲ್ಲಿದ್ದು, ಅವರಿಂದ ಮಾಹಿತಿ ಪಡೆದು ಶಾಸಕರಿಗೆ ತಿಳಿಸಿದ್ದೇನೆ. ಕಳೆದ ಹಲವು ವರ್ಷಗಳಿಂದ ಜಿಲ್ಲೆಯಲ್ಲಿ ವನ್ಯ ಜೀವಿ–ಮಾನವ ಸಂಘರ್ಷವನ್ನು ಶಾಶ್ವತವಾಗಿ ತಡೆಯುವ ನಿಟ್ಟಿನಲ್ಲಿ ಶೀಘ್ರದಲ್ಲಿ ಶಾಸಕರು ಸಭೆ ನಡೆಸಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

# ನಾಳೆಯಿಂದ 'ಗೋಲ್ಡ್ ಕಪ್' ಫುಟ್ಬಾಲ್ ಪಂದ್ಯಾವಳಿ



ಮಡಿಕೇರಿ, ಮೇ 17– ಡಿ.ಶಿವಪ್ಪ ಸ್ಮರಣಾರ್ಥ ಸುಂಟಿಕೊಪ್ಪದ ಬ್ಲೂಬಾಯ್ಸ್ ಯುವಕ ಸಂಘದ ವತಿಯಿಂದ ಮೇ 19ರಿಂದ 28ರವರೆಗೆ ರಾಜ್ಯಮಟ್ಟದ 25ನೇ ಬೆಳ್ಳಿ ಮಹೋತ್ಸವದ 'ಗೋಲ್ಡ್ ಕಪ್' ಫುಟ್ಬಾಲ್ ಪಂದ್ಯಾವಳಿ ನಡೆಯಲಿದೆ ಎಂದು ಸಂಘದ ಪ್ರವರ್ತಕರು ಹಾಗೂ ಗೋಲ್ಡ್ ಕಪ್ ದಾನಿ ಬಿ.ವಿನೋದ್ ಶಿವಪ್ಪ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಂಟಿಕೊಪ್ಪದ ಪ್ರಾಥಮಿಕ ಸರ್ಕಾರಿ ಶಾಲಾ ಮೈದಾನದಲ್ಲಿ ಪಂದ್ಯಾವಳಿ ನಡೆಯಲಿದ್ದು, ಮೇ 19 ರಂದು ಮಧ್ಯಾಹ್ನ 3 ಗಂಟೆಗೆ ಕೊಡಗು ಎಸ್ಪಿ ಕೆ.ರಾಮರಾಜನ್ ಮತ್ತು ಎ.ಎಸ್.ಪಿ. ಸುಂದರ್ ರಾಜ್, ಬ್ಲೂಬಾಯ್ಸ್ ಯುವಕ ಸಂಘದ ಸ್ಥಾಪಕರಾದ ಜೆರ್ಮಿ ಡಿಸೋಜ, ಹಿರಿಯ ಆಟಗಾರ ಪ್ಯಾಟ್ರಿಕ್ ಸೇರಿದಂತೆ ಹಲವಾರು ಗಣ್ಯರು ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು.

ಈ ಬಾರಿ ಪಂದ್ಯಾವಳಿಯಲ್ಲಿ ಬೆಂಗಳೂರು, ಮಂಡ್ಯ, ಮೈಸೂರು, ಕೇರಳದ ಕ್ಯಾಲಿಕಟ್, ಮಲಪುರಂ, ಕೂತುಪರಂಬು, ಕಂಬೈ ಉಪ್ಪಳ, ನಂಜನಗೂಡು, ಕೆಜಿಎಫ್‌ನ ವಾರಿಯರ್ಸ್ ಫುಟ್ಬಾಲ್ ಕ್ಲಬ್, ಕೊಡಗಿನ ಪ್ರತಿಷ್ಠಿತ ತಂಡಗಳಾದ ಕುಶಾಲನಗರ, ಮಿಡ್ ಸಿಟಿ, ಪನ್ಯ, ಬೆಟ್ಟಗೇರಿ, ಒಂಟಿಯಂಗಡಿ, ಕೊಡಗರ ಹಳ್ಳಿಯ ನೇತಾಜಿ ಯುವಕ ಸಂಘ, ಗದ್ದೆಹಳ್ಳದ ಎಮಿಟಿ, ಆತಿಥೇಯ ಸುಂಟಿಕೊಪ್ಪದ ಬ್ಲೂಬಾಯ್ಸ್ ಯೂತ್ ಕ್ಲಬ್ ತಂಡ ಸೇರಿದಂತೆ 22 ತಂಡಗಳಿಂದ ಗೋಲ್ಡ್ ಕಪ್‌ಗಾಗಿ ಹಣಾಹಣಿ ನಡೆಯಲಿದೆ ಎಂದು ತಿಳಿಸಿದರು.

ಪ್ರತಿನಿತ್ಯ ಮಧ್ಯಾಹ್ನ 3 ಗಂಟೆಯಿಂದ 2 ಪಂದ್ಯಗಳು ನಡೆಯಲಿದ್ದು, ಭಾನುವಾರ 3 ಪಂದ್ಯಗಳು ನಡೆಯಲಿದೆ. ಮೇ 27ರಂದು ಸೆಮಿಫೈಲ್, ಮೇ 28ರಂದು ಫೈನಲ್ ಪಂದ್ಯ ಜರುಗಲಿದೆ ಎಂದರು. ಪಂದ್ಯಾವಳಿಯ ಪ್ರಥಮ ವಿಜೇತ ತಂಡಕ್ಕೆ ಡಿ.ಶಿವಪ್ಪ ಸ್ಮರಣಾರ್ಥ ಗೋಲ್ಡ್ ಕಪ್ ಮತ್ತು 1 ಲಕ್ಷ ರೂ.ನಗದು, ದ್ವಿತೀಯ ಬಹುಮಾನವಾಗಿ 50 ಸಾವಿರ ನಗದು ಮತ್ತು ಟ್ರೋಫಿ ಹಾಗೂ ವೈಯಕಿಕ ಬಹುಮಾನಗಳನ್ನು ನೀಡಲಾಗುವುದೆಂದು ತಿಳಿಸಿದರು.

ಈ ಬಾರಿ ಬ್ಲೂಬಾಯ್ಸ್ ಫುಟ್ಬಾಲ್ ಪಂದ್ಯಾವಳಿಯ ಪ್ರಯುಕ್ತ ಪ್ರತ್ಯೇಕ ಫೇಸ್ ಬುಕ್ ಮತ್ತು ವಾಟ್ಸಪ್ ಖಾತೆ ತೆರೆಯಲಾಗಿದ್ದು, ಸಾವಿರಾರು ಕ್ರೀಡಾಭಿಮಾನಿಗಳಿಗೆ ಪಂದ್ಯಾವಳಿಯ ಮಾಹಿತಿ ಲಭಿಸಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಯುವಕ ಸಂಘದ ಅಧ್ಯಕ್ಷ ಆಲಿ ಕುಟ್ಟಿ, ಪೋಷಕ ಪಿ.ವಿ.ಪ್ರಸನ್ನ, ಮಾಜಿ ಅಧ್ಯಕ್ಷ ಆದಿ ಶೇಷನ್, ಗ್ರಾಪಂ ಮಾಜಿ ಅಧ್ಯಕ್ಷ ಎಂ.ಎ. ಉಸ್ಮಾನ್, ಸದಸ್ಯ ಜಾನ್ ಉಪಸ್ಥಿತರಿದ್ದರು.

# ನಮ್ಮಲ್ಲಿರುವ ನೀಚರಿಂದ ಪುಟ್ಟರಂಗಶೆಟ್ಟಿಗೆ ಗೆಲುವು

**ಮಾಜಿ ಸಚಿವ ವಿ. ಸೋಮಣ್ಣ ಕೃತಜ್ಞತಾ ಸಭೆಯಲ್ಲಿ ಆಕ್ರೋಶ**




ಚಾಮರಾಜನಗರ, ಮೇ 17– ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಸಿ. ಪುಟ್ಟರಂಗಶೆಟ್ಟಿ ಅವರು ಗೆಲ್ಲಲು ನಮ್ಮಲ್ಲಿರುವ ಕೆಲವು ನೀಚರು ಕಾರಣ ಎಂದು ಮಾಜಿ ಸಚಿವ ವಿ. ಸೋಮಣ್ಣ ವಾಗ್ದಾಳಿ ನಡೆಸಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ನಡೆದ ಕಾರ್ಯಕರ್ತರ ಕೃತಜ್ಞತಾ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಪುಟ್ಟರಂಗಶೆಟ್ಟಿ ಅವರನ್ನು ಬೈದರೆ ಏನೂ ಪ್ರಯೋಜನವಿಲ್ಲ. ಅವರದ್ದು ಏನೂ ತಪ್ಪಿಲ್ಲ. ಅವರು ಗೆಲ್ಲಲು ನಮ್ಮಲ್ಲಿದ್ದ ಕೆಲವು ನೀಚರು ಕಾರಣರಾಗಿದ್ದಾರೆ ಎಂದು ದೂರಿದರು.

ನನ್ನ ಸೋಲಿಗೆ ಪಕ್ಷದ ಕೆಲವು ಮುಖಂಡರೇ ಕಾರಣ. ಎಲ್ಲರೂ ಒಗ್ಗೂಡಿ ಕೆಲಸ ಮಾಡಿದ್ದರೆ ನನಗೆ ಸೋಲು ಆಗುತ್ತಿರಲಿಲ್ಲ. ಮಾದೇಶ್ವರನ ಆಣೆ. ನನ್ನ ಮಕ್ಕಳಾಣೆ ನಾನಾಗಿ ಇಲ್ಲಿಗೆ ಬರಲಿಲ್ಲ. ವರಿಷ್ಠರ ಮಾತಿಗೆ ಕಟ್ಟುಬಿದ್ದು, ನಿಮ್ಮೆಲ್ಲರನ್ನು ನಂಬಿ ಚಿನ್ನದಂತಹ ಕ್ಷೇತ್ರವನ್ನು ಬಿಟ್ಟು ಬಂದೆ. ಆದರೆ, ನನಗೆ ದ್ರೋಹವಾಯಿತು ಎಂದು ಬೇಸರ ವ್ಯಕ್ತಪಡಿಸಿದರು.

ನನ್ನ ಸೋಲಿಗೆ ಪಕ್ಷದ ಕೆಲವು ಮುಖಂಡರೇ ಕಾರಣ. ನನಗೆ ಮಾಡಿದ ಪಾಪದ ಕೆಲಸ ಬೇರೆ ಯಾರಿಗೂ ಮಾಡುವುದು ಬೇಡ. ಪಕ್ಷಕ್ಕೆ ದ್ರೋಹ ಮಾಡಿದವರಿಗೆ ಸರಿಯಾದುದರಲ್ಲಿ ಹೊಡಿಬೇಕು ಎಂದು ಕಿಡಿಕಾರಿದರು.

7 ರಿಂದ 8 ಮಂದಿಯಿಂದ ನನಗೆ ಸೋಲುಂಟಾಯಿತು. ನನ್ನ ಸಮಾಜದವರೇ ನನಗೆ ಕೈ ಕೊಟ್ಟರು. ಕೆಲವು ಬೋರ್ಡ್ ಅಧ್ಯಕ್ಷರು ಮತಗಳಿಗೆ ದುಡ್ಡು ಕೊಟ್ಟು ಜನರ ದಿಕ್ಕು ತಪ್ಪಿಸಿದರು ಎಂದು ಬಿಜೆಪಿ ಮುಖಂಡರ ವಿರುದ್ಧ ವಾಗ್ದಾಳಿ ನಡೆಸಿದರು.

ಕೆಜೆಪಿ ಸ್ಥಾಪನೆಯಾದಾಗ ಸೋಮಣ್ಣ ಒಬ್ಬನೇ ಆ ಪಕ್ಷಕ್ಕೆ ಹೋಗಲ್ಲ ಎಂದು ಧೈರ್ಯವಾಗಿ ಹೇಳಿದವನು ನಾನು ಎಂದ ಅವರು, ನನ್ನನ್ನು ಸೋಲಿಸಲು ಅಲ್ಲಿಂದಲೇ ನಿರ್ದೇಶನ ಬಂದಿತ್ತು. 45 ವರ್ಷ ರಾಜಕೀಯ ಮಾಡಿದ್ದೇನೆ. ನನಗೆ ಎಲ್ಲವೂ ಗೊತ್ತು. ಯಥಾ ರಾಜಾ ತಥಾ ಪ್ರಜಾ. ಪ್ರಚಾರ ಸಭೆಯಲ್ಲಿ 10 ಸಾವಿರಕ್ಕೂ ಹೆಚ್ಚು ಜನರು ಇದ್ದರು. ಆದರೆ, ಅವರು 10 ನಿಮಿಷ ಇದ್ದರು. 60 ಕಿ.ಮೀ ದೂರವನ್ನು ರಸ್ತೆ ಮಾರ್ಗದಲ್ಲಿ ಹೋಗಬಾರದಿತ್ತೇ ಎಂದು ಯಾರ ಹೆಸರು ಹೇಳದೆಯೇ ಆಕ್ರೋಶ ವ್ಯಕ್ತಪಡಿಸಿದರು.

ಈಗ ಅವರು ಒಳೇಟು ಕೊಟ್ಟರು, ಇವರು ಒಳೇಟು ಕೊಟ್ಟರು, ಕ್ರಮ ಕೈಗೊಳ್ಳಿ ಎನ್ನುತ್ತಿದ್ದೀರಿ. ಈ ಕೆಲಸವನ್ನು ಕಳೆದ 6 ತಿಂಗಳ ಹಿಂದೆಯೇ ಮಾಡಬೇಕಿತ್ತು ಆಗ ಮಾಡಲಿಲ್ಲ. ಈಗ ಮಾಡಿ ಎನ್ನುತ್ತಿದ್ದೀರಿ. ನಾನು ನಿಮ್ಮನ್ನು ನಂಬಿಕೊಂಡಿದ್ದೆ ತಪ್ಪಾಯಿತು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ನಾರಾಯಣಪ್ರಸಾದ್ ಅವರಿಗೆ ನೈತಿಕತೆ ಇದ್ದರೆ ಪಕ್ಷ ವಿರೋಧಿ ಚಟುವಟಿಕೆ ನಡೆಸಿದವರನ್ನು ಪಕ್ಷದಿಂದ ಹೊರಹಾಕಿ ಎಂದ ಅವರು, ನನಗೆ 75 ಸಾವಿರಕ್ಕೂ ಹೆಚ್ಚು ಮಂದಿ ಮತ ಹಾಕಿದ್ದೀರಿ, ನನಗೆ ನಿಷ್ಠಾವಂತ ಕಾರ್ಯಕರ್ತರು ಕೆಲಸ ಮಾಡಿದ್ದರೆ, ನಿಮಗೆಲ್ಲ ನನ್ನ ಧನ್ಯವಾದಗಳು ಎಂದು ತಿಳಿಸಿದರು.

ಈ ವೇಳೆ ಮುಖಂಡರಾದ ಕೋಟೆ ಶಿವಣ್ಣ, ಜಿಲ್ಲಾಧ್ಯಕ್ಷ ನಾರಾಯಣ್‌ಪ್ರಸಾದ್, ಎಂ. ರಾಮಚಂದ್ರ, ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ, ಆರ್. ಸುಂದರ್, ಅಮ್ಮನಪುರ ಮಲ್ಲೇಶ್, ಮಹದೇವಯ್ಯ, ಅಯ್ಯನಪುರ ಶಿವಕುಮಾರ್, ಕೆ. ವೀರಭದ್ರಪ್ಪ, ನೂರೊಂದು ಶೆಟ್ಟಿ, ಹನುಮಂತಶೆಟ್ಟಿ, ಎ.ಆರ್. ಬಾಬು ಇತರರು ಇದ್ದರು.

### ಪಕ್ಷಕ್ಕೆ ದ್ರೋಹ ಮಾಡಿದವರಿಗೆ ಚಪ್ಪಲಿಯಲ್ಲಿ ಹೊಡೀರಿ

ನನಗೆ ಮಾಡಿದ ಪಾಪದ ಕೆಲಸ ಬೇರೆ ಯಾರಿಗೂ ಮಾಡುವುದು ಬೇಡ, ಪಕ್ಷಕ್ಕೆ ದ್ರೋಹ ಮಾಡಿದವರಿಗೆ ಚಪ್ಪಲಿಯಲ್ಲಿ ಹೊಡೀರಿ ಎಂದು ಸೋಮಣ್ಣ ಆಕ್ರೋಶ ವ್ಯಕ್ತಪಡಿಸಿದರು. ಕೆಲವು ಲೋಫರ್ ನನ್ ಮಕ್ಕಳು ಈ ಪಾಪದ ಕೆಲಸ ಮಾಡಿದ್ದಾರೆ. 7–8 ಮಂದಿಯಿಂದ ಈ ಸೋಲುಂಟಾಯಿತು. ನನ್ನ ಸಮಾಜದವರೇ ನನಗೆ ಕೈ ಕೊಟ್ಟರು ಎಂದರು.

**ಕಾರ್ಯಕರ್ತರ ಅಸಮಾಧಾನ:** ಕಾರ್ಯಕ್ರಮದ ಆರಂಭದಲ್ಲಿ ಪಕ್ಷದ ಕಾರ್ಯಕರ್ತರು ಪಕ್ಷದ ಜಿಲ್ಲಾಧ್ಯಕ್ಷ ನಾರಾಯಣ್‌ಪ್ರಸಾದ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ ಘಟನೆಯೂ ನಡೆಯಿತು. ಚುನಾವಣೆ ಸಂದರ್ಭದಲ್ಲಿ ಕೆಲವರು ಪಕ್ಷ ದ್ರೋಹ ಕೆಲಸಗಳನ್ನು ಮಾಡಿದರು. ಅಂತಹವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದರೆ ಈ ರೀತಿಯ ಆಗುತ್ತಿರಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಈ ವೇಳೆ ಸೋಮಣ್ಣ ಮಧ್ಯ ಪ್ರವೇಶಿಸಿ ಎಲ್ಲರನ್ನೂ ಸಮಾಧಾನಪಡಿಸಿದರು. ಆರು ತಿಂಗಳು ಮೊದಲೇ ಈ ಕೆಲಸ ಮಾಡಬೇಕಿತ್ತು. ಒಬ್ಬೊಬ್ಬರು ಹತ್ತು ಮಂದಿಯನ್ನು ಕರೆದುಕೊಂಡು ಬಂದು ಮತ ಹಾಕಿಸಬೇಕಿತ್ತು ಎಂದು ಗದ್ಗದಿತರಾದರು.

## ಸೋಮಣ್ಣಗೆ ಎಂಎಲ್‌ಸಿ ಸ್ಥಾನ ನೀಡಲು ಒತ್ತಾಯ




ಚಾಮರಾಜನಗರ, ಮೇ 17– ಪಕ್ಷ ನಿಷ್ಠೆಯುಳ್ಳ ಸರಳ ಸಜ್ಜನಿಕೆಯ ವ್ಯಕ್ತಿ ವಿ. ಸೋಮಣ್ಣ ಅವರನ್ನು ಬಿಜೆಪಿ ಹೈಕಮಾಂಡ್ ರಾಜ್ಯಸಭಾ ಅಥವಾ ವಿಧಾನಪರಿಷತ್ ಸದಸ್ಯತ್ವವನ್ನು ನೀಡಿ, ಕೇಂದ್ರ ಸಚಿವ ಅಥವಾ ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಸ್ಥಾನ ನೀಡಬೇಕು ಎಂದು ವಿ. ಸೋಮಣ್ಣ ಅಭಿಮಾನಿ ಬಳಗದ ಅಧ್ಯಕ್ಷ ಕೆ. ವೀರಭದ್ರಸ್ವಾಮಿ ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸೋಮಣ್ಣ ಅವರು ಸಂಘಟನಾ ಚತುರತೆ ಹಾಗೂ ಗೋವಿಂದರಾಜ ನಗರ ಕ್ಷೇತ್ರದ ಅಭಿವೃದ್ಧಿಯನ್ನು ಗಮನಿಸಿ, ಅವರಿಗೆ ವರುಣ ಮತ್ತು ಚಾಮರಾಜನಗರ ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಿ ಪಕ್ಷಕ್ಕೆ ಹೆಚ್ಚಿನ ಬಲ ತಂದುಕೊಡುವಂತೆ ಸೂಚನೆ ನೀಡಿದ್ದರು. ಸೋಮಣ್ಣ ಅವರು ಸ್ಪರ್ಧೆ ಮಾಡಿದರೆ, ದಕ್ಷಿಣ ಕರ್ನಾಟಕ ಭಾಗದಲ್ಲಿ ಹೆಚ್ಚಿನ ಸಂಘಟನೆ ಹಾಗೂ ಪಕ್ಷದ ವರ್ಚಸ್ಸು ವೃದ್ಧಿಯಾಗಿ ಹೆಚ್ಚಿನ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧ್ಯತೆಯನ್ನು ನೀಡಿ, ಅವರಿಗೆ ಟಿಕೆಟ್ ನೀಡಿತ್ತು ಎಂದರು.

ಚುನಾವಣೆ ಘೋಷಣೆಯಾದ ಬಳಿಕ ಕಡಿಮೆ ಅವಧಿಯಲ್ಲಿ ಎರಡು ಕ್ಷೇತ್ರಗಳ ಮತದಾರರನ್ನು ಸಂಪರ್ಕ ಮಾಡಲು ಸಾಧ್ಯವಾಗಿಲ್ಲ ಎಲ್ಲಾ ಜವಾಬ್ದಾರಿಯನ್ನು ಕಾರ್ಯಕರ್ತರ ಹೆಗಲಿಗೆ ವಹಿಸಿದ್ದರು. ಆದರೂ ಕೂಡ ಚಾಮರಾಜನಗರ ಕ್ಷೇತ್ರದಲ್ಲಿ 75,353 ಮತಗಳನ್ನು ಪಡೆದು, ಕೇವಲ 7 ಸಾವಿರ ಮತಗಳ ಅಂತರದಲ್ಲಿ ಸೋಲಬೇಕಾಯಿತು. 72ರ ವಯಸ್ಸಿನಲ್ಲಿಯು 22ರ ಯುವಕನಂತೆ ಪಕ್ಷದ ಸಂಘಟನೆ ಹಾಗೂ ಗೆಲುವಿಗೆ ಶ್ರಮಿಸಿದ್ದರು. ಆದರೆ ಅದೃಷ್ಟ ಸೋಮಣ್ಣ ಅವರು ಪಾಲಿಗೆ ಬರಲಿಲ್ಲ ಎಂದು ದುಃಖಿತರಾದರು.

ಹೀಗಾಗಿ ಬಿಜೆಪಿ ವರಿಷ್ಠರು ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟು, ಸೋಮಣ್ಣ ಅವರ ಶಕ್ತಿಯನ್ನು ಮುಂದಿನ ಲೋಕಸಭಾ ಚುನಾವಣೆಯಲ್ಲಿ ದಕ್ಷಿಣ ಕರ್ನಾಟಕದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡು ಪಕ್ಷ ಗೆಲುವಿಗೆ ಹೆಚ್ಚಿನ ಸಹಕಾರವಾಗಲು ಅವರಿಗೆ ಸೂಕ್ತ ಸ್ಥಾನ ನೀಡಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಬಸವನಪುರ ರಾಜಶೇಖರ್, ಜಯರಾಮಶೆಟ್ಟಿ, ಸಿದ್ದರಾಜು, ಪ್ರವೀಣ್ ಕುಮಾರ್, ಮರಿಯಾಲ ಲಿಂಗಪ್ಪ (ಸ್ವಾಮಿ), ಮೂಡ್ಲುಪುರ ಬಸವಣ್ಣ ಇದ್ದರು.

## ಶಾಸಕ ಗಣೇಶ್‌ಪ್ರಸಾದ್‌ಗೆ ಸಚಿವ ಸ್ಥಾನ ನೀಡಲು ಆಗ್ರಹ




ಚಾಮರಾಜನಗರ, ಮೇ 17– ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಗಣೇಶ್‌ಪ್ರಸಾದ್ ಅವರನ್ನು ಸಚಿವರನ್ನಾಗಿ ಮಾಡಬೇಕು ಎಂದು ಕಾಂಗ್ರೆಸ್ ವರಿಷ್ಠರನ್ನು ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ ಹರವೆ ಹೋಬಳಿ ಘಟಕದ ಅಧ್ಯಕ್ಷ ಹಿರೇಬೇಗೂರು ಗುರುಸ್ವಾಮಿ ಆಗ್ರಹಿಸಿದ್ದಾರೆ.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2018ರ ವಿಧಾನಸಭಾ ಚುನಾವಣೆಯಲ್ಲಿ ಗೀತಾ ಮಹದೇವಪ್ರಸಾದ್ ಸೋತಿದ್ದರೂ ಕೂಡ ಗಣೇಶಪ್ರಸಾದ್ ಅವರು ಕ್ಷೇತ್ರದಲ್ಲಿ ದೇವಾಲಯಗಳ ಜೀರ್ಣೋದ್ಧಾರ, ಕೋವಿಡ್ ಸಂದರ್ಭದಲ್ಲಿ ಜನರ ಸಂಕಷ್ಟಕ್ಕೆ ಸ್ಪಂದಿಸಿ ಕೆಲಸ ಮಾಡುವ ಮೂಲಕ ಮನೆಯ ಮಾತಾಗಿದ್ದು, ಜನಾನುರಾಗಿಯಾಗಿದ್ದರು. ಈ ಬಾರಿಯ ಚುನಾವಣೆಯಲ್ಲಿ 35576 ಮತಗಳ ಅಂತರದಲ್ಲಿ ಜಯಭೇರಿ ಬಾರಿಸಿದ್ದಾರೆ ಎಂದರು.

ಹಳೆಯ ಮೈಸೂರು ಪ್ರಾಂತ್ಯದಲ್ಲಿ ವೀರಶೈವ –ಲಿಂಗಾಯತ ಏಕೈಕ ಶಾಸಕರಾದ ಗಣೇಶಪ್ರಸಾದ್ ಅವರಿಗೆ ಸಚಿವ ಸಂಪುಟದಲ್ಲಿ ಸ್ಥಾನ ಕೊಡುವ ಮೂಲಕ ಸಮಾಜಕ್ಕೆ ನ್ಯಾಯ ದೊರಕಿಸಿಕೊಡಬೇಕು ಎಂದು ಎಐಸಿಸಿ, ಕೆಪಿಸಿಸಿ ವರಿಷ್ಠರಲ್ಲಿ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಎಂ..ಎಂ. ನಾಗರಾಜು, ಪಿಎಸಿಸಿ ಬ್ಯಾಂಕ್ ನಿರ್ದೇಶಕ ಸಾಗಡೆ ಪಟೇಲ್ ಸುರೇಶ್, ಗ್ರಾಪಂ ಸದಸ್ಯ ಗುರುಸ್ವಾಮಿ, ಮುಖಂಡರಾದ ಜಗದೀಶ್, ರೇಣುಕಪ್ಪ ಮಂಜುನಾಥ್ ಹಾಜರಿದ್ದರು.

**ರೋಟರಿ ಭವನದಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕರ ದಿನಾಚರಣೆ**

# ದೇಶ ಕಟ್ಟುವಲ್ಲಿ ಕಾರ್ಮಿಕರ ಪಾತ್ರ ಮಹತ್ತರವಾದದ್ದು




ಚಾಮರಾಜನಗರ, ಮೇ 17– ದೇಶ ಕಟ್ಟುವಲ್ಲಿ ಕಾರ್ಮಿಕರ ಪಾತ್ರ ಮಹತ್ತರವಾದದ್ದು ಎಂದು ರೋಟರಿ ಸಂಸ್ಥೆ ಅಧ್ಯಕ್ಷ ಕೆ.ಎಂ.ಮಹದೇವಸ್ವಾಮಿ ಹೇಳಿದರು.

ನಗರದ ರೋಟರಿ ಭವನದಲ್ಲಿ ರೋಟರಿ ಸಂಸ್ಥೆ ವತಿಯಿಂದ ನಡೆದ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ರೋಟರಿ ಸಂಸ್ಥೆಯಲ್ಲಿ ಸುಮಾರು 36 ವರ್ಷಗಳಿಂದ ಸಹಾಯಕರಾಗಿ ಸೇವೆ ಸಲ್ಲಿಸುತ್ತಿರುವ ಎಂ.ಎನ್. ಸತ್ಯನಾರಾಯಣ ಹಾಗೂ 35 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಚಿಂಕ್ರಮ್ಮ ಅವರನ್ನು ಸನ್ಮಾನಿಸಿ ಮಾತನಾಡಿದರು.

ದುಡಿದವನಿಗೆ ಸಂಬಳ ಕೊಡುವುದು ಮಾಲೀಕನಾದರೆ ಈ ಸಂಬಳ ಕೊಡುವ ಮಟ್ಟಕ್ಕೆ ಮಾಲೀಕನನ್ನು ಬೆಳೆಸಿದವನು ನೌಕರ. ಹಗಲು ರಾತ್ರಿ ಎಂದು ನೋಡದೆ ಬಿಸಿಲು, ಮಳೆ, ಗಾಳಿಗೂ ಜಗ್ಗದೆ ಕಠಿಣ ಪರಿಶ್ರಮದಿಂದ ಕಷ್ಟವನ್ನು ನುಂಗಿ ಖುಷಿ ಹಂಚುವವರು ಕಾರ್ಮಿಕರು. ಇವರ ಪರಿಶ್ರಮದಿಂದ ದೇಶದ ಅಭಿವೃದ್ಧಿ ಅಡಗಿದೆ. ಕಾರ್ಮಿಕರು ತಾವು ದುಡಿಯುತ್ತಿರುವ ಸಂಸ್ಥೆಯ ಬೆಳವಣಿಗೆಗೂ ಕಾರಣವಾಗುತ್ತಾರೆ. ಇಂತಹ ಶ್ರಮಜೀವಿಗಳ ಕೆಲಸವನ್ನು ಗೌರವಿಸುವ, ಸ್ಮರಿಸುವ ಸಲುವಾಗಿ ಪ್ರತಿ ವರ್ಷ ಮೇ. 1 ರಂದು ಅಂತಾರಾಷ್ಟ್ರೀಯ ಕಾರ್ಮಿಕರ ದಿನಾಚರಣೆ ಆಚರಿಸಲಾಗುತ್ತಿದೆ ಎಂದರು.

ಜಗತ್ತಿನ ವಿವಿಧ ಕ್ಷೇತ್ರದಲ್ಲಿ ಕಾರ್ಮಿಕರು ದುಡಿಯುತ್ತಿದ್ದಾರೆ. ಸಮಾಜದಲ್ಲಿ ಇವರ ಪಾತ್ರ ಬಹಳ ಹಿರಿಯದು, ಕಾರ್ಮಿಕರು ತಮ್ಮ ದುಡಿಮೆಯಿಂದ ತಮ್ಮಕುಟುಂಬವನ್ನು ಪೋಷಿಸುವ ಜತೆಗೆ ತಮ್ಮ ಸಂಸ್ಥೆಯ ಅಭಿವೃದ್ಧಿಗೂ ಕಾರಣರಾಗುತ್ತಾರೆ. ಅದೇ ರೀತಿಯಲ್ಲಿ ರೋಟರಿ ಸಂಸ್ಥೆಯಲ್ಲಿ ಸಹಾಯಕರಾಗಿ ಸತ್ಯನಾರಾಯಣ ಹಾಗೂ ಶ್ರೀಮತಿ ಚಿಂಕ್ರಮ್ಮ ನಿರಂತರ ಸೇವೆ ಗುರುತಿಸಿ ಸಂಸ್ಥೆ ವತಿಯಿಂದ ಸನ್ಮಾನಿಸಲಾಗಿದೆ. ಅವರಿಗೆ ಭಗವಂತ ಹೆಚ್ಚಿನ ಆರೋಗ್ಯ, ಆಯಸ್ಸು ಕರುಣಿಸಲಿ ಎಂದು ಆಶಿಸಿದರು. ಅಂತಾರಾಷ್ಟ್ರೀಯ ಕಾರ್ಮಿಕರ ದಿನಾಚರಣೆ ಶುಭಾಶಯ ಕೋರಿದರು.

ಕಾರ್ಯಕ್ರಮದಲ್ಲಿ ರೋಟರಿ ಸಂಸ್ಥೆ ಕಾಗಲವಾಡಿ ಚಂದ್ರು, ರೋಟರಿ ಸಂಸ್ಥೆ ಸಂಸ್ಥಾಪಕ ಸದಸ್ಯರಾದ ಸಿ.ವಿ.ಶ್ರೀನಿವಾಸಶೆಟ್ಟಿ, ಜಿ.ಆರ್.ಅಶ್ವಥ್‌ನಾರಾಯಣ್, ಉಪಾಧ್ಯಕ್ಷ ಎಲ್.ನಾಗರಾಜು, ಮುಂದಿನ ಸಾಲಿನ ಅಧ್ಯಕ್ಷ ಸಿ.ಎನ್. ಚಂದ್ರಪ್ರಭಜೈನ್, ಕಾರ್ಯದರ್ಶಿ ದೀನಾ , ಸದಸ್ಯರಾದ ಕೆಂಪನಪುರ ಸಿದ್ದರಾಜು, ರಾಮು, ಅಶೋಕ್, ಕಾಳನಹುಂಡಿ ಗುರುಸ್ವಾಮಿ, ಡಿ ನಾಗರಾಜ, ಜೆ ಎಸ್ ಎಸ್ ಆಸ್ಪತ್ರೆಯ ಸೂಪರ್ ಹಿಂಡೆಂಟ್ ಆದ ಡಾಕ್ಟರ್ ಗೋವಿಂದ ಶೆಟ್ಟಿ, ಸಂಜಯ್ ಜೈನ್, ಯೋಗಣ್ಣ, ಬಿಕೆ ಮೋಹನ್, ಕಮಲ್ ರಾಜು ಶ್ರೀನಿವಾಸ್, ಹರೀಶ್ ಅಂಕಶೆಟ್ಟಿ, ಸಮಾಜ ಸೇವಕ ಡಾ.ಪರಮೇಶ್ವರಪ್ಪ ಇತರ ರೋಟರಿ ಸಂಸ್ಥೆಯ ಸದಸ್ಯರು, ಸಾರ್ವಜನಿಕರು ಹಾಜರಿದ್ದರು,

## ಮಲ್ಲಿಕಾರ್ಜುನ ಖರ್ಗೆ ಮುಖ್ಯಮಂತ್ರಿ ಮಾಡಲು ಅಂಬೇಡ್ಕರ್ ಸೇನೆ ಆಗ್ರಹ

ಚಾಮರಾಜನಗರ, ಮೇ 17– ದಲಿತ ನಾಯಕ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮುಖ್ಯಮಂತ್ರಿ ಮಾಡಬೇಕು ಎಂದು ಅಂಬೇಡ್ಕರ್ ಸೇನೆಯ ಜಿಲ್ಲಾಧ್ಯಕ್ಷ ಗಣೇಶ್‌ಪ್ರಸಾದ್ ಕಾಂಗ್ರೆಸ್ ವರಿಷ್ಠರನ್ನು ಒತ್ತಾಯಿಸಿದ್ದಾರೆ.



ಮಲ್ಲಿಕಾರ್ಜುನ ಖರ್ಗೆ

45 ವರ್ಷಗಳ ರಾಜಕೀಯ ಅನುಭವ ಹೊಂದಿರುವ ದಲಿತ ನಾಯಕ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಿಎಂ ಆಗುತ್ತಾರೆ ಎಂದು ರಾಜ್ಯದ ದಲಿತ ಸಮುದಾಯ ಸಂಪೂರ್ಣವಾಗಿ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹೆಚ್ಚು ಮತ ನೀಡಿದ್ದು, 135 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿ, ಕಾಂಗ್ರೆಸ್ ಸ್ಪಷ್ಟ ಬಹುಮತದೊಂದಿಗೆ ಸರ್ಕಾರ ರಚನೆಗೆ ಅವಕಾಶ ಮಾಡಿಕೊಟ್ಟಿದೆ. ಮಲ್ಲಿಕಾರ್ಜುನ ಖರ್ಗೆ ಅವರನ್ನು ಸಿಎಂ ಮಾಡುವ ಮೂಲಕ ಕಾಂಗ್ರೆಸ್ ದಲಿತ ಸಿಎಂ ಮಾಡಿದೆ ಎಂಬುವುದನ್ನು ರಾಜ್ಯದ ಜನತೆ ಮನವರಿಕೆ ಮಾಡಿಕೊಡಬೇಕು. ಮುಂಬರುವ ಲೋಕಸಭಾ ಚುನಾವಣೆಯಲ್ಲೂ ಕಾಂಗ್ರೆಸ್ ಹೆಚ್ಚು ಸ್ಥಾನಗಳಲ್ಲಿ ಜಯಭೇರಿ ಬಾರಿಸಲು ಅನುಕೂಲ ಮಾಡಿಕೊಳ್ಳಬೇಕು ಎಂದು ಅವರು ತಿಳಿಸಿದರು.

## ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕಟೀಲ್ ಬದಲಾವಣೆ: ಸುಳಿವು ನೀಡಿದ ಪ್ರಹ್ಲಾದ್ ಜೋಶಿ



**ಬೆಂಗಳೂರು:** ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರ ಬದಲಾವಣೆ ಸಾಧ್ಯತೆ ಕುರಿತು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ಸುಳಿವು ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಂಗಳವಾರ ಮಾತನಾಡಿದ ಜೋಶಿ, ನಳಿನ್‌ಕುಮಾರ್ ಕಟೀಲ್ ಅವರು ರಾಜ್ಯಾಧ್ಯಕ್ಷ ಹುದ್ದೆಯ ಅವಧಿ ಪೂರೈಸಿದ್ದರೂ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಪಕ್ಷದ ರಾಷ್ಟ್ರೀಯ ನಾಯಕರು ಮತ್ತೆ ಅವರಿಗೆ ಜವಾಬ್ದಾರಿ ನೀಡಿದ್ದರು. ಈಗ ಚುನಾವಣೆ ಮುಗಿದಿದೆ. ಮುಂದಿನ ತೀರ್ಮಾನವನ್ನು ರಾಷ್ಟ್ರೀಯ ನಾಯಕರು ತೆಗೆದುಕೊಳ್ಳುತ್ತಾರೆಂದು ಹೇಳಿದರು. ರಾಜ್ಯ ವಿಧಾನಸಭಾ ಚುನಾವಣೆ ಫಲಿತಾಂಶ ನಿರಾಶಾದಾಯಕವಾಗಿದೆ. ಈ ಸೋಲನ್ನು ಪಕ್ಷ ಹಾಗೂ ನಾನು ಸಹಜವಾಗಿ ಸ್ವೀಕರಿಸದೆ ಸವಾಲಾಗಿ ಸ್ವೀಕರಿಸಿದ್ದೇವೆ. ಮುಂಬರುವ ಲೋಕಸಭಾ ಚುನಾವಣೆಗೆ ಈಗಿನಿಂದಲೇ ತಯಾರಿ ಶುರು ಮಾಡುತ್ತೇವೆ ಎಂದು ತಿಳಿಸಿದರು.

ವಿಧಾನಸಭೆಯ ಪ್ರತಿಪಕ್ಷದ ನಾಯಕ ಯಾರಾಗುತ್ತಾರೆ ಎಂಬ ಪ್ರಶ್ನೆಗೆ ಉತ್ತರಿಸಿದ ಜೋಶಿ, 'ಶೀಘ್ರದಲ್ಲೇ ಶಾಸಕಾಂಗ ಪಕ್ಷದ ಸಭೆ ನಡೆಯಲಿದೆ. ರಾಷ್ಟ್ರೀಯ ನಾಯಕರೊಬ್ಬರು ಬರಲಿದ್ದು, ಚರ್ಚಿಸಿ ವಿರೋಧ ಪಕ್ಷದ ನಾಯಕ ಯಾರಾಗಬೇಕು ಎಂಬುದನ್ನು ತೀರ್ಮಾನಿಸಲಿದ್ದಾರೆ ಎಂದರು. ಇಡೀ ದೇಶವೇ ಪ್ರಧಾನಿ ಮೋದಿ ಅವರ ನಾಯಕತ್ವವನ್ನು ಒಪ್ಪಿದೆ. ಲೋಕಸಭಾ ಚುನಾವಣೆ ಬೇರೆ ವಿಚಾರಗಳ ಮೇಲೆ ನಡೆಯುತ್ತದೆ ಎಂದರು.

ಒಂದನೇ ಪುಟದಿಂದ

## ಕಾಂಗ್ರೆಸ್ ವರಿಷ್ಠರಿಗೆ ಕಗ್ಗಂಟು

ಈ ಬಾರಿ ಆ ವರ್ಗದ ಶೇಕಡ 4ರಷ್ಟು ಮತ ಕಳೆದುಕೊಂಡಿದ್ದೇವೆ. ಈ ಬಾರಿ ವೀರಶೈವ, ಒಕ್ಕಲಿಗ, ಪರಿಶಿಷ್ಟ ಜಾತಿ, ವರ್ಗ ಹಾಗೂ ಅಲ್ಪಸಂಖ್ಯಾತರು ನಮ್ಮ ಕೈಹಿಡಿದಿದ್ದರಿಂದ ವಿಧಾನಸಭೆಯಲ್ಲಿ 135 ಸ್ಥಾನ ಗಳಿಸಿದ್ದೇವೆ ಹಾಗೂ ಒಟ್ಟಾರೆ ಸರಾಸರಿಯಲ್ಲಿ ಗಣನೀಯ ಪ್ರಮಾಣದ ಮತ ಏರಿಕೆಯಾಗಿದೆ. ನೀವು ಸುಳ್ಳು ಅಂಕಿ ಅಂಶಗಳನ್ನು ನಂಬಬೇಡಿ ಎಂದು ಚುನಾವಣಾ ಆಯೋಗದ ವರದಿಯನ್ನು ಸಲ್ಲಿಸಿದ್ದಲ್ಲದೆ, ಶಾಸಕರ ಅಭಿಪ್ರಾಯ ಪಡೆದಿರುವ ಶಿಂಧೆ ಸಮಿತಿಯ ವರದಿಯನ್ನು ಕೂಲಂಕುಶವಾಗಿ ಪರಿಗಣಿಸಿ ಎಂದಿದ್ದಾರೆ. ಒಬ್ಬ ನಾಯಕನಿಂದಲೇ ಎಲ್ಲವೂ ಆಗುವುದಿಲ್ಲ. ಮುಂದಿನ ಲೋಕಸಭಾ ಚುನಾವಣೆಯನ್ನು ಕರ್ನಾಟಕದಲ್ಲಿ ಸಾಮೂಹಿಕವಾಗಿ ಎದುರಿಸಿ, ಇದೇ ಹುಮ್ಮಸಿನಿಂದ ಹೆಚ್ಚಿನ ಸ್ಥಾನಗಳನ್ನು ನಿಮಗೆ ಕೊಡುತ್ತೇವೆ ಎಂಬ ಭರವಸೆಯನ್ನು ನೀಡಿದ್ದಾರೆ. ರಾಜಸ್ಥಾನ ಮತ್ತು ಛತ್ತೀಸ್‌ಗಢದಲ್ಲಿ ಈ ಹಿಂದೆ ನೀಡಿದ ಭರವಸೆಯಂತೆ ಸಚಿನ್ ಪೈಲಟ್ ಹಾಗೂ ಟಿ.ಎಸ್. ಸಿಂಗ್‌ದೇವ್‌ಗೆ ನ್ಯಾಯ ಸಿಕ್ಕಿಲ್ಲ. ಇನ್ನು ನನಗೆ ನಿಮ್ಮ ಭರವಸೆ ಮೇಲೆ ನಂಬಿಕೆ ಇಲ್ಲ. ಅಷ್ಟೇ ಅಲ್ಲ ಮೂಲ ಕಾಂಗ್ರೆಸ್ ಅಲ್ಲದವರಿಗೆ ಅಧಿಕಾರ ನೀಡಿದರೆ, ಸರಿ ಇರುವುದಿಲ್ಲ ಎಂದು ಪದೇ ಪದೆ ಖಾರವಾಗಿ ರಾಹುಲ್ ಮತ್ತು ಖರ್ಗೆಯವರ ಬಳಿ ತಮ್ಮ ನಿವೇದನೆಯನ್ನು ಮಾಡಿಕೊಂಡಿದ್ದಾರೆ. ಶಿವಕುಮಾರ್ ಮತ್ತು ಹರಿಪ್ರಸಾದ್ ವರಿಷ್ಠರ ಭೇಟಿಯ ನಂತರ ರಾಹುಲ್ ತಮ್ಮ ಮೊದಲಿನ ನಿರ್ಧಾರವನ್ನು ಬದಲಿಸಿ, ಕರ್ನಾಟಕ ನಾಯಕತ್ವದ ಆಯ್ಕೆ ಚೆಂಡನ್ನು ಖರ್ಗೆ ಅಂಗಳಕ್ಕೆ ಹಾಕಿದ್ದಾರೆ.

## ಒಂದೆರಡು ದಿನದಲ್ಲಿ ಮುಖ್ಯಮಂತ್ರಿ ಆಯ್ಕೆ

ರಣದೀಪ್ ಸುರ್ಜೇವಾಲ ಅವರು ಕರ್ನಾಟಕದ ಮುಖ್ಯಮಂತ್ರಿ ಯಾರು ಎಂಬುದು ಇನ್ನು ಅಂತಿಮವಾಗಿಲ್ಲ ಎಂದು ಪತ್ರಿಕಾಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು.

ಮುಖ್ಯಮಂತ್ರಿ ಆಯ್ಕೆ ವಿಚಾರವಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ಸಮಾಲೋಚನೆ ನಡೆಯುತ್ತಿದೆ. ಒಂದೆರಡು ದಿನಗಳಲ್ಲಿ ಹೊಸ ಮುಖ್ಯಮಂತ್ರಿ ಆಯ್ಕೆ ಮಾಡುವುದರ ಜೊತೆಗೆ ಹೊಸ ಸಚಿವ ಸಂಪುಟ ರಚನೆಯಾಗುವುದು ಎಂದು ಎಲ್ಲಾ ಊಹಾಪೋಹಗಳಿಗೂ ತೆರೆ ಎಳೆದರು.

ಮುಖ್ಯಮಂತ್ರಿ ಆಯ್ಕೆ ವಿಚಾರವಾಗಿ ಕೆಲವರು ತಪ್ಪು ಮಾಹಿತಿ ಹರಡುತ್ತಿದ್ದಾರೆ. ಇಂತಹ ವಿಚಾರಗಳ ಬಗ್ಗೆ ಕಾರ್ಯಕರ್ತರು ಎಚ್ಚರ ವಹಿಸಬೇಕು. ಚರ್ಚೆ ಬಳಿಕ, ಒಮ್ಮತದ ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದರು. ಕರ್ನಾಟಕದ ಮುಖ್ಯಮಂತ್ರಿ ಆಯ್ಕೆ ಕುರಿತಂತೆ ರಾಹುಲ್‌ಗಾಂಧಿ ಅವರು ಖರ್ಗೆಯವರನ್ನು ಭೇಟಿ ಮಾಡಿ, ಮಾತುಕತೆ ನಡೆಸಿದ್ದಾರೆ. ಅಷ್ಟೇ ಅಲ್ಲ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳಾದ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರ ಜೊತೆಯು ಚರ್ಚೆ ಮಾಡಿದ್ದಾರೆ. ಆದರೆ ಅಂತಿಮ ತೀರ್ಮಾನ ಏನೂ ಆಗಿಲ್ಲ ಎಂದು ಸ್ಪಷ್ಟಪಡಿಸಿದರು.

ಕರ್ನಾಟಕದ ನಾಯಕತ್ವಕ್ಕೆ ಸಂಬಂಧಿಸಿದಂತೆ ಸೋನಿಯಾಗಾಂಧಿ ಹಾಗೂ ರಾಹುಲ್‌ಗಾಂಧಿಯವರು ನಿನ್ನೆ ರಾತ್ರಿ ಮತ್ತು ಇಂದು ಬೆಳಿಗ್ಗೆ ಚರ್ಚೆ ನಡೆಸಿದರು. ಈ ಚರ್ಚೆಯ ನಂತರ ರಾಹುಲ್, ಸಿದ್ದರಾಮಯ್ಯ ಅವರನ್ನು ಕರೆಸಿಕೊಂಡು ಮಾತನಾಡಿದರು. ಇವರ ಭೇಟಿಯ ನಂತರ ಶಿವಕುಮಾರ್ ಭೇಟಿಗೆ ಅವಕಾಶ ನೀಡಿದ್ದರು.

ಆದರೆ ಸಿದ್ದರಾಮಯ್ಯ ರಾಹುಲ್ ಭೇಟಿ ಮಾಡಿ ಹೊರ ಬಂದ ತಕ್ಷಣವೇ ಕರ್ನಾಟಕ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಆಯ್ಕೆಗೊಂಡಿದ್ದಾರೆ. ಅವರು ನಾಳೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುತ್ತಾರೆ ಎಂಬ ವರದಿಗಳು ಬಹಿರಂಗಗೊಂಡವು. ಮಾಧ್ಯಮ ವರದಿಯೇ ಕೆಲವು ನಾಯಕರಿಗೆ ಸಿಟ್ಟು ತರಿಸಿ, ಆನಂತರ ಇಷ್ಟೆಲ್ಲಾ ಬೆಳವಣಿಗೆಗೆ ಕಾರಣವಾಯಿತು ಎನ್ನಲಾಗಿದೆ.

## ಚಾಮುಂಡೇಶ್ವರಿ ತಾಯಿ ನೋಡಿಕೊಳ್ಳುತ್ತಾಳೆ

ಮಾಡಿದ್ದಾರೆ ಎಂದು ಅವರಿಗೇ ಗೊತ್ತು. ಇದಕ್ಕೆ ಬೇರೆ ಯಾರು ಕಾರಣ ಅಲ್ಲ. ವರುಣದಲ್ಲಿ ಗೆದ್ದರೆ ಕ್ಷೇತ್ರವನ್ನು ನನ್ನ ಮಕ್ಕಳಿಗೆ ಕೊಡುತ್ತೇನೆ ಎಂದು ಅಪಪ್ರಚಾರ ಮಾಡಿದ್ದಾರೆ. ಅದನ್ನು ಚಾಮುಂಡೇಶ್ವರಿ ತಾಯಿಯೇ ನೋಡಿಕೊಳ್ಳುತ್ತಾಳೆ ಎಂದರು.

ನನಗೆ ಪಕ್ಷವೇ ದೇವರು, ಪಕ್ಷವೇ ತಾಯಿ. ನನಗೆ ತಿಕ್ಕಲು ಹತ್ತಿದರೆ, ಪಕ್ಷವೂ ಬೇಡ ಎಂದು ಹೋಗ್ತಾ ಇರುತ್ತೇನೆ. ನಾನು ಎಂದೂ ಮಕ್ಕಳನ್ನು ರಾಜಕೀಯಕ್ಕೆ ತರಬೇಕು ಅಂದುಕೊಂಡವನಲ್ಲ. ನಾನು ತಪ್ಪು ಮಾಡಿದ್ದರೆ ಒಪ್ಪಿಕೊಳ್ಳುತ್ತೇನೆ. ನನಗಿಂತ ದೊಡ್ಡವನು ತಪ್ಪು ಮಾಡಿದರೂ ಹೇಳುತ್ತೇನೆ. ಒಳ್ಳೆಯವರಿಗೆ ಯಾರೂ ಅನ್ಯಾಯ ಮಾಡಬೇಡಿ. ಒಳ್ಳೆಯವರನ್ನು ದುರುಪಯೋಗಪಡಿಸಿಕೊಳ್ಳಬೇಡಿ. ಹಾಗೇ ಮಾಡಿದವರನ್ನೇ ಅದು ತಿಂದುಬಿಡುತ್ತೇ ಎಂದು ಎಚ್ಚರಿಸಿದರು.

**ಬಾಯಿ ಮುಚ್ಚಿಸುತ್ತಾರೆ:** ಮೈಸೂರಿನಲ್ಲಿ ನನ್ನ ಹಾಗೆ ಮಾತಾಡೋರು ಕಡಿಮೆ. ಜೋರಾಗಿ ಮಾತಾಡೋರನ್ನು ಬಾಯಿ ಮುಚ್ಚಿಸುತ್ತಾರೆ. ಇನ್ನೊಮ್ಮೆ ಈ ರೀತಿಯ ಅವಕಾಶ ಕೈ ಚೆಲ್ಲಬೇಡಿ. ಎಲ್ಲರೂ ಪಕ್ಷ ಕಟ್ಟಿ, ಪಕ್ಷ ಹೇಳಿದ ಮಾತು ಕೇಳಿ. ಅವಶ್ಯಕತೆ ಇದ್ದವರಿಗೆ ಜಾತಿ ನೋಡದೇ, ಯಾರ ಬೆಂಬಲಿಗರು ಎಂದು ನೋಡದೇ ಗುರುತಿಸಿ ನೆರವಾಗಿ. ಈ ಎಲೆಕ್ಟ್ರಾನಿಕ್ ಯುಗದಲ್ಲಿ ಹುಷಾರಾಗಿರಬೇಕು. ರಾಜಕೀಯ ನಿಂತ ನೀರಲ್ಲ, ಸದಾ ಹರಿಯುವ ನೀರು. ನಾನು ದೇವೇಗೌಡರು, ಜೆ.ಹೆಚ್.ಪಟೇಲ್ ಅವರ ಜೊತೆಯಲ್ಲಿ ಬೆಳೆದವನು. ಬಿಜೆಪಿಗೆ ಬಂದಾಗ ಯಡಿಯೂರಪ್ಪ ಅವರು ಏನೆಲ್ಲಾ ಕೆಲಸ ಮಾಡಬೇಕೆಂದು ಹೇಳಿಕೊಟ್ಟರು. ಎಲ್ಲ ಅಂಶಗಳನ್ನು ಇಟ್ಟುಕೊಂಡು ಮುಂದೆ ಸಾಗುತ್ತೇನೆ ಎಂದರು. ಸಭೆಯಲ್ಲಿ ಗ್ರಾಮಾಂತರ ಬಿಜೆಪಿ ಜಿಲ್ಲಾಧ್ಯಕ್ಷ ಮಂಗಳ ಸೋಮಶೇಖರ್, ಮೈ.ವಿ.ರವಿಶಂಕರ್, ಎಸ್.ಮಹದೇವಯ್ಯ, ಕೋಟೆ ಎಂ.ಶಿವಣ್ಣ, ಕಲ್ಲಳ್ಳಿ ವಿಜಯಕುಮಾರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಕಾಂಗ್ರೆಸ್‌ನದ್ದು ಡಬಲ್ ಸ್ಟೇರಿಂಗ್ ಸರ್ಕಾರ

ಮಾಡಬೇಕು ಎಂದುಕೊಂಡಿದ್ದಾರೆ. ಏನು ಮಾಡ್ತಾರೋ ನೋಡೋಣ ಎಂದರು. ನಮ್ಮ ಕಾರ್ಯಕರ್ತರು ವರುಣದಲ್ಲಿ ಮಾಡಿದ ಅಬ್ಬರದ ಪ್ರಚಾರಕ್ಕೆ ಹೆದರಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಟ ಶಿವರಾಜ್‌ಕುಮಾರ್, ಲೂಸ್ ಮಾದ, ದುನಿಯಾ ವಿಜಿಯನ್ನು ಕರೆತಂದರು. ಸಿದ್ದರಾಮಯ್ಯ ಅವರ ಇಡೀ ಜೀವನದಲ್ಲಿ ಖರ್ಚು ಮಾಡಿದ್ದನ್ನು ಈ ಬಾರಿಯ ಒಂದೇ ಚುನಾವಣೆಯಲ್ಲಿ ಖರ್ಚು ಮಾಡಿದ್ದಾರೆ. ಸಿದ್ದರಾಮಯ್ಯ ಅವರಿಗೆ ಯಾರು ಫಂಡಿಂಗ್ ಮಾಡಿದ್ದಾರೆ ಎಂದು ಗೊತ್ತು. ನಾನು ದಡ್ಡನಲ್ಲ, ದಡ್ಡನ ತರಹ ನಡೆದುಕೊಳ್ಳುವ ಬುದ್ಧಿವಂತ ಎಂದು ತಿಳಿಸಿದರು.

## ಆನೆ ಗಣತಿ ಆರಂಭ

ಬಿಳಿಗಿರಿರಂಗನಾಥ ಸ್ವಾಮಿ ಹುಲಿ ಸಂರಕ್ಷಿತ ಪ್ರದೇಶ, ಮಲೆಮಹದೇಶ್ವರ ಬೆಟ್ಟ ವನ್ಯಧಾಮ, ಕಾವೇರಿ ವನ್ಯಧಾಮ, ಹುಣಸೂರು ಉಪ ವಿಭಾಗ ಸೇರಿದಂತೆ ಮೈಸೂರು, ಚಾಮರಾಜನಗರ, ಹಾಸನ, ಕೊಡಗು ಜಿಲ್ಲೆಗಳಲ್ಲಿ ಆರಂಭವಾದ ಗಜ ಗಣತಿಯಲ್ಲಿ ಮೊದಲ ದಿನವೇ ನೂರಾರು ಆನೆಗಳು ಗಣತಿದಾರರ ಕಣ್ಣಿಗೆ ಬಿದ್ದಿವೆ.

ಗಣತಿಯೂ 3 ಹಂತದಲ್ಲಿ ನಡೆಯಲಿದ್ದು, ಅರಣ್ಯ ಇಲಾಖೆಯ ಸಿಬ್ಬಂದಿಗಳನ್ನು ಮಾತ್ರ ಬಳಸಿಕೊಳ್ಳಲಾಗುತ್ತಿದೆ. ಪ್ರತಿಯೊಂದು ಬೀಟ್‌ನಲ್ಲೂ ಗಣತಿ ನಡೆಸಲು ಮೂವರು ಸಿಬ್ಬಂದಿಯುಳ್ಳ ತಂಡವನ್ನು ರಚಿಸಲಾಗಿದೆ. ಇಂದು ಎಲ್ಲಾ ಗಸ್ತು ವ್ಯಾಪ್ತಿಯಲ್ಲಿ 5 ಚ.ಕಿ.ಮೀ ಪ್ರದೇಶದಲ್ಲಿ ಕನಿಷ್ಟ 15 ಕಿ.ಮೀ. ವ್ಯಾಪ್ತಿಯಲ್ಲಿ ಕಾಲ್ನಡಿಗೆಯಲ್ಲಿ ತೆರಳಿ ಸ್ಯಾಂಪಲ್ ಬ್ಲಾಕ್ ಕೌಂಟ್ ವಿಧಾನದಲ್ಲಿ ಕಣ್ಣಿಗೆ ಬಿದ್ದ ಆನೆಗಳ ಸಂಖ್ಯೆಯನ್ನು ದಾಖಲು ಮಾಡಲಾಗಿದೆ. ನಾಗರಹೊಳೆಯಲ್ಲಿ 91 ಗಸ್ತುಗಳಲ್ಲಿ ಗಜಗಣತಿ ನಡೆಸಲು 300 ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಬಂಡೀಪುರದಲ್ಲಿ 115 ಬೀಟ್‌ಗಳಲ್ಲಿ ಗಣತಿ ಮಾಡಲು 345 ಸಿಬ್ಬಂದಿ ನಿಯೋಜಿಸಲಾಗಿದೆ. ಬಿಳಿಗಿರಿರಂಗನಾಥ ಸ್ವಾಮಿ ಬೆಟ್ಟ ಹುಲಿ ಸಂರಕ್ಷಿತ ಪ್ರದೇಶ, ಮಲೆಮಹದೇಶ್ವರ ವನ್ಯಧಾಮ, ಕಾವೇರಿ ವನ್ಯಧಾಮದ ಹಾಗೂ ಹುಣಸೂರು ವಿಭಾಗದಲ್ಲೂ ಬೀಟ್‌ಗೆ ಅನುಗುಣವಾಗಿ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಗಣತಿಯ 2ನೇ ದಿನ ನಾಳೆ(ಮೇ 18) ಪ್ರತಿ ಗಸ್ತಿನಲ್ಲೂ 2 ಕಿ.ಮೀ. ಲೈನ್ ಟ್ರಾನ್ಸಾಕ್ಟ್‌ನಲ್ಲಿ ಸಿಗುವ ಲದ್ದಿ ಎಣಿಕೆ ಮೂಲಕ ನಮೂದಿಸಲಾಗುತ್ತದೆ. ಗಣತಿಯ ಕೊನೆ ದಿನವಾದ ಶುಕ್ರವಾರ(ಮೇ 19) ನೀರಿನ ಮೂಲಗಳ (ಕೆರೆ, ಕಟ್ಟೆ, ಹೊಂಡಗಳ ಬಳಿ ಬೆಳಗ್ಗೆ 6ರಿಂದ ಸಂಜೆ 6 ಗಂಟೆವರೆಗೆ ಸುರಕ್ಷಿತ ಸ್ಥಳದಲ್ಲಿ ಕುಳಿತು ಎಣಿಕೆ ಕಾರ್ಯ ನಡೆಸಲಾಗುತ್ತದೆ. ಈ ಗಣತಿ ಕಾರ್ಯದಲ್ಲಿ ಗಂಡಾನೆ, ಹೆಣ್ಣಾನೆ, ಮಧ್ಯ ವಯಸ್ಕ(ಸಬ್ ಅಡಲ್ಟ್), ಮರಿ ಯಾನೆಯನ್ನು ಪ್ರತ್ಯೇಕವಾಗಿ ನಮೂದಿಸಲಾಗುತ್ತದೆ.





# ಮೈಸೂರಿನ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ದತ್ತು ಯೋಜನೆ

- ಸಾಂಸ್ಕೃತಿಕ ನಗರಿಯ 129ರ ಪೈಕಿ 115 ಪಾರಂಪರಿಕ ಕಟ್ಟಡಗಳ ಸಮೀಕ್ಷೆ ಪೂರ್ಣ, ಶೇ.50ರಷ್ಟು ಶಿಥಿಲಾವಸ್ಥೆ
- ಜೂನ್ 2ನೇ ವಾರ ಜಿಲ್ಲಾ ಹೆರಿಟೇಜ್ ಕಮಿಟಿಗೆ ವರದಿ, ಪಾರಂಪರಿಕ ತಜ್ಞರು, ಕೈಗಾರಿಕೋದ್ಯಮಿಗಳು, ಭಾಗಿದಾರರೊಂದಿಗೆ ಚರ್ಚಿಸಿ ದತ್ತು ನೀಡಲು ಚಿಂತನೆ
- ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳ ಪುನರುಜ್ಜೀವನಕ್ಕೆ ಅಂದಾಜು ತಯಾರಿಸಿ ಜಿಲ್ಲಾಧಿಕಾರಿಗಳಿಂದ ಸರ್ಕಾರಕ್ಕೆ ವರದಿ ಸಲ್ಲಿಕೆಗೆ ಸಿದ್ಧತೆ

ಎಸ್.ಟಿ.ರವಿಕುಮಾರ್

ಮೈಸೂರು, ಮೇ 17–ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿರುವ ಪಾರಂಪರಿಕ ಕಟ್ಟಡ, ಸ್ಮಾರಕಗಳನ್ನು ಸುಸ್ಥಿತಿಯಲ್ಲಿ ಸಂರಕ್ಷಿಸಲು ಜಿಲ್ಲಾಡಳಿತವು 'ದತ್ತು ಯೋಜನೆ'ಗೆ ಚಿಂತನೆ ನಡೆಸಿದೆ.

ಮೈಸೂರಿಗೆ ಆಗಮಿಸುವ ಪ್ರವಾಸಿಗರಿಗೆ ಅರಮನೆ, ಮೃಗಾಲಯ, ಕಾರಂಜಿ ಕೆರೆ ಉದ್ಯಾನವನ, ಚಾಮುಂಡಿಬೆಟ್ಟದಂತಹ ಪ್ರವಾಸಿ ಕೇಂದ್ರಗಳಂತೆ ಇಲ್ಲಿನ ಹಳೆಯ ಹಾಗೂ ಪಾರಂಪರಿಕ ಕಟ್ಟಡ, ಸ್ಮಾರಕ, ನಿರ್ಮಾಣಗಳೂ ಆಕರ್ಷಣೀಯವಾಗಿವೆ ಎಂಬುದರಲ್ಲಿ ಸಂಶಯವಿಲ್ಲ.

ರಾಜ ಮಹಾರಾಜರು ನಿರ್ಮಿಸಿದ ಪಾರಂಪರಿಕ ಶೈಲಿಯ ಹಳೇ ಐತಿಹಾಸಿಕ ಕಟ್ಟಡಗಳು ಸರ್ಕಾರಿ ಕಚೇರಿಗಳಿಗೆ ಆಶ್ರಯವಾಗಿರುವುದಲ್ಲದೇ ಅಪರೂಪದ ಸ್ಮಾರಕಗಳಾಗಿ ಉಳಿದಿರುವುದರಿಂದ ಅವುಗಳನ್ನು ವೀಕ್ಷಿಸಲೆಂದು ರಾಜ್ಯದ ವಿವಿಧ ಜಿಲ್ಲೆಗಳಿಂದ, ದೇಶದ ಹಲವು ರಾಜ್ಯಗಳಿಂದ ಹಾಗೂ ಪ್ರಪಂಚದ ಬಹುತೇಕ ದೇಶಗಳಿಂದ ಪ್ರವಾಸಿಗರು ಸಾಂಸ್ಕೃತಿಕ ನಗರಿ ಮೈಸೂರಿಗೆ ಭೇಟಿ ನೀಡುತ್ತಿದ್ದಾರೆ.

ಅಂಬಾವಿಲಾಸ ಅರಮನೆ, ಜಗನ್ಮೋಹನ ಅರಮನೆ, ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಕೃಷ್ಣರಾಜ, ಚೆಲುವಾಂಬ, ಪಿಕೆಟಿಬಿ ಆಸ್ಪತ್ರೆ, ಮೈಸೂರು ಮೆಡಿಕಲ್ ಕಾಲೇಜು, ಸರ್ಕಾರಿ ಆಯುರ್ವೇದ ಕಾಲೇಜು, ಜಿಲ್ಲಾಧಿಕಾರಿ ಕಚೇರಿ, ಕ್ರಾಫರ್ಡ್ ಭವನ, ಮಹಾರಾಜ ಪಿಯು ಕಾಲೇಜು, ಕೆ.ಆರ್.ಸರ್ಕಲ್, ನೆಹರು ಸರ್ಕಲ್ ಸುತ್ತಲಿನ ಕಟ್ಟಡಗಳು, ಸಿಎಫ್‌ಟಿಆರ್‌ಐ, ಲಲಿತ ಮಹಲ್ ಹೋಟೆಲ್, ರಂಗಾಚಾರ್ಲು ಪುರಭವನ, ಕೆ.ಆರ್. ಮಾರ್ಕೆಟ್, ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ಸೇರಿದಂತೆ ಮೈಸೂರಿನ 129 ನಿರ್ಮಾಣಗಳು ಪಾರಂಪರಿಕ ಕಟ್ಟಡಗಳ ಪಟ್ಟಿಯಲ್ಲಿವೆ. ಅವುಗಳು ಅತೀ ಹಳೆಯ ಕಟ್ಟಡಗಳಾಗಿರುವುದರಿಂದ ನಿರ್ವಹಣೆ ಕೊರತೆಯಿಂದಾಗಿ ದೇವರಾಜ ಮಾರುಕಟ್ಟೆ ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಅಗ್ನಿಶಾಮಕ ಠಾಣೆ, ಮಹಾರಾಣಿ ಕಾಲೇಜಿನಂತಹ ಕೆಲ ಪಾರಂಪರಿಕ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿದ್ದು, ಹಲವು ಈಗಾಗಲೇ ಕುಸಿದಿವೆ. ಇನ್ನೂ ಕೆಲವು ಕುಸಿಯುವ ಹಂತದಲ್ಲಿವೆ.

**ಸಮೀಕ್ಷೆ ಪ್ರಗತಿಯಲ್ಲಿ:** ಮಳೆ–ಬಿಸಿಲಿನಿಂದಾಗಿ ಶಿಥಿಲಗೊಂಡು ಅಪಾಯ ತಂದೊಡ್ಡುವ ಪಾರಂಪರಿಕ ಕಟ್ಟಡಗಳ ಸಮೀಕ್ಷೆ ಕಾರ್ಯ ನಡೆಸುತ್ತಿರುವ ಪಾರಂಪರಿಕ ಇಲಾಖೆ ಕಮಿಷ್ನರ್ ದೇವರಾಜ್ ನೇತೃತ್ವದ ತಜ್ಞರ ತಂಡವು ಮೈಸೂರಿನ 129ರ ಪೈಕಿ 115 ಪಾರಂಪರಿಕ ಕಟ್ಟಡಗಳನ್ನು ಪರಿಶೀಲಿಸಿದೆ. ಪಾರಂಪರಿಕ ಇಲಾಖೆ ಉಪ ನಿರ್ದೇಶಕಿ ಸಿ.ಎನ್.ಮಂಜುಳಾ, ಪಾರಂಪರಿಕ ತಜ್ಞರಾದ ಪ್ರೊ. ರಂಗರಾಜು, ಡಾ. ಶಕೀಬ್ ಉರ್ ರೆಹಮಾನ್, ಸ್ಟ್ರಕ್ಚರಲ್ ಇಂಜಿನಿಯರ್ ಶರತ್ ಚಂದ್ರ, ಮೈಸೂರು ಮಹಾನಗರ ಪಾಲಿಕೆ ನಗರ ಯೋಜನೆ ವಿಭಾಗದ ಸಹಾಯಕ ನಿರ್ದೇಶಕಿ ರಮ್ಯ, ಇಂಜಿನಿಯರ್ ಪವಿತ್ರ ಅವರನ್ನೊಳಗೊಂಡ ತಜ್ಞರು ಸಮೀಕ್ಷೆ ನಡೆಸುತ್ತಿದ್ದು, ಜೂನ್ 15ರೊಳಗಾಗಿ ಉಳಿದ ಕಟ್ಟಡಗಳ ಸಮೀಕ್ಷೆ ಪೂರ್ಣಗೊಳಿಸಿ ಜಿಲ್ಲಾಧಿಕಾರಿಗಳ ನೇತೃತ್ವದ ಜಿಲ್ಲಾ ಪಾರಂಪರಿಕ ಸಮಿತಿಗೆ ವರದಿ ಸಲ್ಲಿಸಲಿದ್ದಾರೆ.



**ಶೇ.50ರಷ್ಟು ಶಿಥಿಲಾವಸ್ಥೆ:** ಸಮೀಕ್ಷೆ ಪೂರ್ಣಗೊಂಡಿರುವ 115ರ ಪೈಕಿ ಶೇ.50ರಷ್ಟು ಪಾರಂಪರಿಕ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿವೆ ಎಂಬುದು ತಿಳಿದು ಬಂದಿದೆ. ಅವುಗಳನ್ನು ಪುನರುಜ್ಜೀವನಗೊಳಿಸಿ ಸಂರಕ್ಷಿಸದಿದ್ದಲ್ಲಿ ಅಪಾಯ ನಿಶ್ಚಿತ ಎಂದು ಪ್ರೊ. ರಂಗರಾಜು ಅಭಿಪ್ರಾಯ ಪಟ್ಟಿದ್ದಾರೆ.

**ಎಸ್ಟಿಮೇಟ್ ತಯಾರಿಸಿ ವರದಿ:** ತಜ್ಞರು ಸಮೀಕ್ಷಾ ವರದಿ ಸಲ್ಲಿಸಿದ ಬಳಿಕ ಶಿಥಿಲಗೊಂಡಿರುವ ಕಟ್ಟಡಗಳ ರಿಪೇರಿ, ಪುನರುಜ್ಜೀವನಗೊಳಿಸಲು ತಜ್ಞ ಸ್ಟ್ರಕ್ಚರಲ್ ಇಂಜಿನಿಯರ್‌ಗಳಿಂದ ಅಂದಾಜು ವೆಚ್ಚ (Estimate) ತಯಾರಿಸಿ ಡಿಪಿಆರ್‌ನೊಂದಿಗೆ ಜಿಲ್ಲಾ ಹೆರಿಟೇಜ್ ಕಮಿಟಿಯು ಸರ್ಕಾರಕ್ಕೆ ವರದಿ ಸಲ್ಲಿಸಲಿದೆ.

**ಹೆರಿಟೇಜ್ ಕಟ್ಟಡಗಳ ದತ್ತು:** ಮತ್ತೊಂದೆಡೆ ಪಾರಂಪರಿಕ ಕಟ್ಟಡಗಳನ್ನು ರಿಪೇರಿ ಮಾಡಿ ಸಂರಕ್ಷಿಸಿ ನಿರ್ವಹಣೆಯನ್ನು ಮಾಡಲು ಹೆರಿಟೇಜ್ ಕಟ್ಟಡಗಳ ದತ್ತು ಯೋಜನೆ ಜಾರಿಗೆ ತರಲು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಚಿಂತನೆ ನಡೆಸಿದ್ದಾರೆ. ಕೈಗಾರಿಕೋದ್ಯಮಿಗಳು, ಭಾಗಿದಾರ (Stake holder)ರೊಂದಿಗೆ ಚರ್ಚಿಸಿ ಪಾರಂಪರಿಕ ಕಟ್ಟಡಗಳನ್ನು ದತ್ತು ಪಡೆದು ನಿರ್ವಹಿಸುವಂತೆ ಆಹ್ವಾನ ನೀಡಲು ತಯಾರಿ ನಡೆಯುತ್ತಿದೆ. ಕೈಗಾರಿಕೋದ್ಯಮಿಗಳು ದತ್ತು ಪಡೆದುಕೊಂಡ ನಂತರ ಉಳಿದ ಪಾರಂಪರಿಕ ಕಟ್ಟಡಗಳ ರಿಪೇರಿಗೆ ಸರ್ಕಾರದಿಂದ ಅನುಮೋದನೆ ಪಡೆದು ಪಾರಂಪರಿಕ ಇಲಾಖೆ ಮೂಲಕ ಪುನರುಜ್ಜೀವನಗೊಳಿಸಿ ಸಂರಕ್ಷಿಸಲು ಡಿಪಿಆರ್ ಸಿದ್ಧಪಡಿಸುವಂತೆ ಜಿಲ್ಲಾಧಿಕಾರಿಗಳು ಮೌಖಿಕ ನಿರ್ದೇಶನ ನೀಡಿದ್ದಾರೆ ಎನ್ನಲಾಗಿದೆ. ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಶತಮಾನೋತ್ಸವದ ಹಿನ್ನೆಲೆಯಲ್ಲಿ ಅಧೀನದಲ್ಲಿರುವ ಕೆಆರ್, ಚೆಲುವಾಂಬ ಹಾಗೂ ಪಿಕೆಟಿಬಿ ಆಸ್ಪತ್ರೆಗಳ ರಿಪೇರಿ ಕಾಮಗಾರಿ ಆರಂಭವಾಗಿದೆ. ಸರ್ಕಾರ ನೀಡಿರುವ ವಿಶೇಷ ಅನುದಾನದಲ್ಲಿ ಪಾರಂಪರಿಕ ಇಲಾಖೆ ಅನುಮತಿ ಪಡೆದು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ.



ಮೈಸೂರಿನ ರಾಮಕೃಷ್ಣ ಆಶ್ರಮದಲ್ಲಿ ಜೆಡಿಎಸ್ ಹಿರಿಯ ನಾಯಕ, ಚಾಮುಂಡೇಶ್ವರಿ ಕ್ಷೇತ್ರದ ನೂತನ ಶಾಸಕ ಜಿ.ಟಿ.ದೇವೇಗೌಡ ಹಾಗೂ ಚಾಮರಾಜ ಕ್ಷೇತ್ರದ ನೂತನ ಶಾಸಕ ಕೆ.ಹರೀಶ್‌ಗೌಡ ಅವರನ್ನು ಆಶ್ರಮದ ಮುಕ್ತಿದಾನಂದ ಸ್ವಾಮೀಜಿ ಸಮ್ಮುಖದಲ್ಲಿ ರಾಜ್ಯ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಕೆ.ವಿ.ಶ್ರೀಧರ್ ಅಭಿನಂದಿಸಿದರು. ಈ ವೇಳೆ ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ನಗರಪಾಲಿಕೆ ಮಾಜಿ ಸದಸ್ಯ ಡಿ.ನಾಗಭೂಷಣ್, ಜೆಡಿಎಸ್ ಮುಖಂಡರಾದ ಎಚ್.ಕೆ.ರಮೇಶ್, ಕೆ.ವಿ.ಮಲ್ಲೇಶ್ ಇನ್ನಿತರರಿದ್ದರು.



ಕೃಷ್ಣರಾಜ ಕ್ಷೇತ್ರದ ನೂತನ ಶಾಸಕ ಹಾಗೂ ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಅವರನ್ನು ಆರ್ಯನ್ ಕನ್‌ಸ್ಟ್ರಕ್ಷನ್‌ನ ರಘುನಂದನ್, ಅಶ್ವಿನ್ ಪಾಳೇಗಾರ್ ಆತ್ಮೀಯವಾಗಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಹಲವು ಬಿಜೆಪಿ ಮುಖಂಡರು ಉಪಸ್ಥಿತರಿದ್ದರು.

## ಮೇ 19, 20ರಂದು ವಿಚಾರ ಸಂಕಿರಣ

ಮೈಸೂರು, ಮೇ 17–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ತೆಲುಗು ಅಧ್ಯಯನ ಮತ್ತು ಸಂಶೋಧನಾ ವಿಭಾಗ ಮತ್ತು ಐಸಿಎಸ್‌ಎಸ್‌ಆರ್ ಪ್ರಾಯೋಜಕತ್ವದಲ್ಲಿ ಕಾವೇರಿ ಸಭಾಂಗಣದಲ್ಲಿ ಮೇ 19 ಮತ್ತು 20ರಂದು ಬೆಳಗ್ಗೆ 11 ಗಂಟೆಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ತೆಲುಗು, ಕನ್ನಡ ಕವಿಗಳ ಪಾತ್ರ ಕುರಿತು ವಿಚಾರ ಸಂಕಿರಣವನ್ನು ಆಯೋಜಿಸಲಾಗಿದೆ. ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕರಾಮುವಿ ಕುಲಸಚಿವ ಪ್ರೊ.ಕೆ.ಎಲ್.ಎನ್. ಮೂರ್ತಿ, ಹಿರಿಯ ವಿದ್ವಾಂಸ ಪ್ರೊ. ಎನ್.ಎಂ.ತಳವಾರ್ ಭಾಗವಹಿಸಲಿದ್ದಾರೆ.

ಆದಾಯ ಮೀರಿ ಆಸ್ತಿ ಗಳಿಕೆ ಪ್ರಕರಣ

## ಡಿ.ಕೆ.ಶಿವಕುಮಾರ್‌ಗೆ ಬಿಗ್ ರಿಲೀಫ್



**ನವದೆಹಲಿ:** ಆದಾಯ ಮೀರಿ ಆಸ್ತಿ ಗಳಿಕೆ ಪ್ರಕರಣದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಬಿಗ್ ರಿಲೀಫ್ ಸಿಕ್ಕಿದೆ. ಸಿಬಿಐ ತನಿಖೆಗೆ ಹೈಕೋರ್ಟ್ ತಡೆಯಾಜ್ಞೆ ತೆರವು ಕೋರಿ ಸಿಬಿಐ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯನ್ನು ಸುಪ್ರೀಂಕೋರ್ಟ್ ಇಂದು ವಿಚಾರಣೆ ನಡೆಸಿದ್ದು, ಮಧ್ಯಂತರ ಆದೇಶ ನೀಡಲು ನಿರಾಕರಿಸಿದೆ. ಅಲ್ಲದೆ, ತಡೆಯಾಜ್ಞೆ ತೆರವಿಗೆ ಹೈಕೋರ್ಟ್‌ನಲ್ಲೇ ಅರ್ಜಿ ಸಲ್ಲಿಸಬಹುದು ಎಂದು ಹೇಳಿದ್ದು, ಮುಂದಿನ ವಿಚಾರಣೆಯನ್ನು ಜುಲೈ ತಿಂಗಳಿಗೆ ಮುಂದೂಡಿದೆ. ಈ ಮೂಲಕ ಡಿ.ಕೆ.ಶಿವಕುಮಾರ್ ಅವರಿಗೆ ಬಿಗ್ ರಿಲೀಫ್ ಸಿಕ್ಕಂತಾಗಿದೆ.

ಡಿಕೆ ಶಿವಕುಮಾರ್ ವಿರುದ್ಧ ಪ್ರಕರಣದ ಸಿಬಿಐ ತನಿಖೆಗೆ ಕರ್ನಾಟಕ ಹೈಕೋರ್ಟ್ ಮಧ್ಯಂತರ ತಡೆಯಾಜ್ಞೆ ನೀಡಿತ್ತು. ಈ ತಡೆಯಾಜ್ಞೆ ತೆರವು ಮಾಡುವಂತೆ ಸಿಬಿಐ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಅರ್ಜಿ ಸಲ್ಲಿಸಿತ್ತು. ಈ ಅರ್ಜಿಯನ್ನು ಇಂದು ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್, ಹೈಕೋರ್ಟ್ ರಜೆ ಅವಧಿ ಮುಗಿಯಲಿರುವುದರಿಂದ ಅಲ್ಲೇ ವಿಚಾರಣೆ ಸೂಕ್ತ ಎಂದು ಅಭಿಪ್ರಾಯಪಟ್ಟಿದೆ.

## 2025ರ ಮೇಯಲ್ಲಿ ಕರ್ನಾಟಕಕ್ಕೆ ಮರಳುತ್ತೇನೆ



ಬೆಂಗಳೂರು: ಸದ್ಯದಲ್ಲಿಯೇ ಡಿಜಿ ಮತ್ತು ಐಜಿಪಿ ಹುದ್ದೆಯಿಂದ ನಿರ್ಗಮಿಸಿ ನನ್ನ ಉತ್ತರಾಧಿಕಾರಿಗೆ ಅಧಿಕಾರ ಬಿಟ್ಟುಕೊಟ್ಟು ಮುಂದಿನ ಹುದ್ದೆಗೆ ಹೋಗುತ್ತಿದ್ದೇನೆ ಎಂದು ಸಿಬಿಐ ಮುಂದಿನ ನಿರ್ದೇಶಕರಾಗಿ ನೇಮಕಗೊಂಡಿರುವ ಪ್ರವೀಣ್ ಸೂದ್ ತಿಳಿಸಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ಅವರು, 2020ರಲ್ಲಿ ರಾಜ್ಯದ ಪೊಲೀಸ್ ಮಹಾ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡ ನಂತರ ಈ ರಾಜ್ಯದ ಜನತೆ ಜೊತೆ ಸಂಪರ್ಕ ಹೊಂದಿದ್ದೆ. 2025ರ ಮೇ ತಿಂಗಳವರೆಗೆ ನನಗೆ ಸರ್ಕಾರ ಹೊಸ ಜವಾಬ್ದಾರಿ ವಹಿಸಿದ್ದು ಅದರ ನಂತರ ಮತ್ತೆ ಕರ್ನಾಟಕಕ್ಕೆ ಮರಳುತ್ತೇನೆ. ಕಳೆದ ಮೂರೂವರೆ ವರ್ಷಗಳಲ್ಲಿ ನೀವು ಕೊಟ್ಟ ಬೆಂಬಲ, ಸಹಕಾರಗಳಿಗೆ ಧನ್ಯವಾದಗಳು ಎಂದು ಟ್ವೀಟ್ ಮಾಡಿದ್ದಾರೆ.

## ಸಿಬಿಎಸ್‌ಇ: ಜಿಲ್ಲೆಗೆ ಚಿನ್ಮಯ್‌ಗೌಡಗೆ ದ್ವಿತೀಯ ಸ್ಥಾನ



ಮೈಸೂರು, ಮೇ 17–ಈ ಬಾರಿಯ ಸಿಬಿಎಸ್‌ಇ ಪರೀಕ್ಷೆಯಲ್ಲಿ ಮೈಸೂರಿನ ಶ್ರೀ ಆದಿಚುಂಚನಗಿರಿ ಸೆಂಟ್ರಲ್ ಸ್ಕೂಲ್ ವಿದ್ಯಾರ್ಥಿ ಆರ್.ಚಿನ್ಮಯ್‌ಗೌಡ 487 ಅಂಕ ಗಳಿಸುವ ಮೂಲಕ ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ. ಈತ ಶ್ರೀಮತಿ ಎನ್.ಎಸ್. ವಿಜಯಲಕ್ಷ್ಮಿ ಮತ್ತು ಹೆಚ್. ರಾಜು ದಂಪತಿ ಪುತ್ರ.

# ಡಿಕೆಶಿ–ರಾಹುಲ್ ಭೇಟಿ ನಂತರ ಸಿದ್ದರಾಮಯ್ಯ ನೂತನ ಸಿಎಂ ವದಂತಿ!

- ಹಲವೆಡೆ ಸಂಭ್ರಮಾಚರಣೆ; ಸಿದ್ದರಾಮಯ್ಯ ಫ್ಲೆಕ್ಸ್‌ಗೆ ಕ್ಷೀರಾಭಿಷೇಕ, ಪುಷ್ಪಾರ್ಚನೆ, ಕಂಠೀರವ ಸ್ಟೇಡಿಯಂನಲ್ಲಿ ಪ್ರಮಾಣ ವಚನಕ್ಕೆ ಸಿದ್ಧತೆ
- ಸುರ್ಜೇವಾಲ ಸ್ಪಷ್ಟನೆ ನಂತರ ಎಲ್ಲವೂ ಸ್ತಬ್ಧ; ನಿಶ್ಯಬ್ಧ

ನವದೆಹಲಿ, ಮೇ 17–ದೆಹಲಿಯಲ್ಲಿ ಇಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿಯವರನ್ನು ಭೇಟಿಯಾದ ನಂತರ ಇದ್ದಕ್ಕಿದ್ದಂತೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ನೂತನ ಮುಖ್ಯಮಂತ್ರಿ ಆಗಿ ಕಾಂಗ್ರೆಸ್ ಆಯ್ಕೆ ಮಾಡಿದೆ ಎಂದು ವದಂತಿ ಹರಡಿತು.

ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್, ಶಾಸಕ ಅಶೋಕ್ ಪಟ್ಟಣ್ ಅವರು ಸಿದ್ದರಾಮಯ್ಯ ನೂತನ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದಾರೆ ಎಂದು ನೇರವಾಗಿಯೇ ಮಾಧ್ಯಮಗಳಿಗೆ ತಿಳಿಸಿದ್ದರು. ಅದೇ ರೀತಿ ಬೆಂಗಳೂರಲ್ಲಿ ಮಾಜಿ ಸಚಿವರಾದ ಡಾ. ಹೆಚ್.ಸಿ.ಮಹದೇವಪ್ಪ ಮತ್ತು ಸತೀಶ್ ಜಾರಕಿಹೊಳಿ ಕೂಡ ಸಿದ್ದರಾಮಯ್ಯ ನೂತನ ಸಿಎಂ ಆಗಿ ನೇಮಕಗೊಂಡ ಧಾಟಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ್ದರು.

ಈ ವಿಷಯ ಸುದ್ದಿವಾಹಿನಿಗಳಲ್ಲಿ ಬಿತ್ತರವಾಗುತ್ತಿದ್ದಂತೆಯೇ ಸಿದ್ದರಾಮಯ್ಯ ಅಭಿಮಾನಿಗಳು ಅವರ ಹುಟ್ಟೂರು ಸಿದ್ದರಾಮನಹುಂಡಿ ಸೇರಿದಂತೆ ರಾಜ್ಯಾದ್ಯಂತ ಸಂಭ್ರಮ ಆಚರಿಸಲಾರಂಭಿಸಿದರು. ಹಲವೆಡೆ ಸಿದ್ದರಾಮಯ್ಯ ಅವರ ಫ್ಲೆಕ್ಸ್‌ಗೆ ಕ್ಷೀರಾಭಿಷೇಕ ಹಾಗೂ ಪುಷ್ಪಾರ್ಚನೆ ಮಾಡಿದ್ದಲ್ಲದೇ, ಪಟಾಕಿ ಸಿಡಿಸಿ ಸಂಭ್ರಮಿಸಿದರು. ಮತ್ತೊಂದೆಡೆ ನಾಳೆ ಮಧ್ಯಾಹ್ನ 3.30ಕ್ಕೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಸಿದ್ದರಾಮಯ್ಯ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂಬ ನಕಲಿ ಆಹ್ವಾನ ಪತ್ರಿಕೆಯೂ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತು. ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನೂತನ ಮುಖ್ಯಮಂತ್ರಿಗಳ ಪ್ರಮಾಣ ವಚನ ಕಾರ್ಯಕ್ರಮಕ್ಕಾಗಿ ಅಧಿಕಾರಿಗಳು ಸಿದ್ಧತೆ ಗಳನ್ನು ಭರದಿಂದ ನಡೆಸುತ್ತಿದ್ದರು. (ನಾಳೆ ಸಿದ್ದರಾಮಯ್ಯ ಪ್ರಮಾಣ ವಚನ ಸ್ವೀಕರಿಸುತ್ತಾರೆ ಎಂದು ಅಧಿಕಾರಿಗಳಿಗೆ ಯಾರು ಹೇಳಿದರು ಎಂಬುದಂತೂ ನಿಗೂಢ).

ಈ ವದಂತಿಗಳಿಂದ ಇರುಸು–ಮುರುಸುಗೊಂಡ ರಾಹುಲ್ ಗಾಂಧಿಯವರ ಸೂಚನೆ ಮೇರೆಗೆ ಮಧ್ಯಾಹ್ನದ ವೇಳೆಗೆ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಸಿಎಂ ಆಯ್ಕೆ ವಿಚಾರವಾಗಿ ವದಂತಿಗಳು ಹರಡಿವೆ ಎಂಬುದನ್ನು ಖಚಿತಪಡಿಸಿದ್ದಲ್ಲದೇ, ಯಾರೂ ವದಂತಿಗಳನ್ನು ನಂಬಬಾರದು ಎಂದು ಮನವಿ ಮಾಡಿದರು. ಅವರ ಸ್ಪಷ್ಟನೆ ನಂತರ ಪ್ರಮಾಣವಚನಕ್ಕಾಗಿ ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿದ್ದ ಸಿದ್ಧತೆಗಳನ್ನು ಸ್ಥಗಿತಗೊಳಿಸಲಾಯಿತು.

## ಸಿದ್ದರಾಮಯ್ಯ ಸಿಎಂ ಎಂದು ಘೋಷಿಸಿದ ಪುಷ್ಪಾ ಅಮರನಾಥ್, ಅಶೋಕ್ ಪಟ್ಟಣ್‌ಗೆ ನೋಟಿಸ್




**ನವದೆಹಲಿ:** ಕರ್ನಾಟಕದ ಮುಂದಿನ ಮುಖ್ಯಮಂತ್ರಿ ಯಾರು ಎಂಬ ವಿಚಾರದಲ್ಲಿ ಕಾಂಗ್ರೆಸ್ ಹೈಕಮಾಂಡ್ ಮಟ್ಟದಲ್ಲಿ ಇನ್ನೂ ತೀವ್ರ ಚರ್ಚೆ ನಡೆಯುತ್ತಿರುವ ಮಧ್ಯೆಯೇ ಸಿದ್ದರಾಮಯ್ಯ ಅವರನ್ನು ಸಿಎಂ ಎಂದು ಹೈಕಮಾಂಡ್ ಘೋಷಣೆ ಮಾಡಿದೆ ಎಂಬ ಸುಳ್ಳು ಸುದ್ದಿ ಹರಿಬಿಟ್ಟ ಇಬ್ಬರು ಕಾಂಗ್ರೆಸ್ ನಾಯಕರಿಗೆ ನೋಟಿಸ್ ನೀಡಲಾಗಿದೆ.

ರಾಮದುರ್ಗ ಕ್ಷೇತ್ರದ ಕಾಂಗ್ರೆಸ್ ಶಾಸಕ ಅಶೋಕ್ ಎಂ.ಪಟ್ಟಣ್, ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಾ ಅಮರನಾಥ್ ಅವರಿಗೆ ನೋಟಿಸ್ ನೀಡುವಂತೆ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸೂಚನೆ ನೀಡಿದ್ದಾರೆ. ಕರ್ನಾಟಕ ಮುಖ್ಯಮಂತ್ರಿ ಆಯ್ಕೆ ಬಗ್ಗೆ ಯಾವುದೇ ಅಂತಿಮ ನಿರ್ಧಾರವಾಗಿಲ್ಲ.. 48ರಿಂದ 72 ಗಂಟೆಯೊಳಗೆ ಅಧಿಕೃತ ಘೋಷಣೆ ಹೊರಡಿಸುತ್ತೇವೆ ಎಂದು ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹೇಳಿದ್ದಾರೆ.

ದೆಹಲಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಮತ್ತು ಡಿಕೆ ಶಿವಕುಮಾರ್ ಇಬ್ಬರೂ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿದ್ದಾರೆ. ಸಿಎಂ ಆಯ್ಕೆ ಬಗ್ಗೆ ಯಾವುದೇ ಅಂತಿಮವಾಗಿಲ್ಲ ಎಂದು ರಣದೀಪ್ ಸಿಂಗ್ ಸುರ್ಜೇ ವಾಲ ಹೇಳಿದರು. ನಾಳೆ ಅಥವಾ ನಾಡಿದ್ದು ನೂತನ ಸಿಎಂ ಘೋಷಣೆ ಸಾಧ್ಯತೆ ಇದೆ ಎಂದರು.

ಸದ್ಯ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ಸಮಾಲೋಚನೆ ನಡೆಯುತ್ತಿದೆ. ಕಾಂಗ್ರೆಸ್ ನಿರ್ಧಾರ ಕೈಗೊಂಡಾಗ ನಾವು ನಿಮಗೆ ತಿಳಿಸುತ್ತೇವೆ. ಮುಂದಿನ 48–72 ಗಂಟೆಗಳಲ್ಲಿ ಕರ್ನಾಟಕದಲ್ಲಿ ಹೊಸ ಸಚಿವ ಸಂಪುಟ ರಚನೆಯಾಗಲಿದೆ ಎಂದು ಸುರ್ಜೇವಾಲಾ ಹೇಳಿದರು.



## ವೀಕ್ಷಕರ ವರದಿ: 60–59–16!

ಕಳೆದ ಭಾನುವಾರದಂದು ಬೆಂಗಳೂರಿಗೆ ವೀಕ್ಷಕರಾಗಿ ಆಗಮಿಸಿದ್ದ ಮಹಾರಾಷ್ಟ್ರ ಮಾಜಿ ಮುಖ್ಯಮಂತ್ರಿ ಸುಶೀಲ್ ಕುಮಾರ್ ಸಿಂಧೆ ನೇತೃತ್ವದ ತಂಡವು ಶಾಸಕರಿಂದ ಅಭಿಪ್ರಾಯಗಳನ್ನು ಸಂಗ್ರಹಿಸಿತ್ತು. ಈ ತಂಡ ಹೈಕಮಾಂಡ್‌ಗೆ ನೀಡಿದ ವರದಿಯಲ್ಲಿ 60–59–16 ಎಂಬ ಅಂಕಿಗಳನ್ನು ನೀಡಿದೆ ಎಂದು ಮೂಲಗಳು ತಿಳಿಸಿವೆ. ಇದರಲ್ಲಿ 16 ಎಂಬ ಅಂಕಿಯು ಈ ಶಾಸಕರು ಹೈಕಮಾಂಡ್ ತೀರ್ಮಾನಕ್ಕೆ ಬದ್ಧರಾಗಿರುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿರುವುದಾಗಿದೆ. ಉಳಿದಂತೆ 60 ಮತ್ತು 59 ಸಂಖ್ಯೆಗಳಲ್ಲಿ ಸಿದ್ದರಾಮಯ್ಯನವರಿಗೆ ಬಂದಿರುವ ಸಂಖ್ಯೆ ಯಾವುದು? ಹಾಗೆಯೇ ಡಿ.ಕೆ.ಶಿವಕುಮಾರ್ ಅವರಿಗೆ ಬಂದಿರುವ ಸಂಖ್ಯೆ ಯಾವುದು? ಎಂಬುದು ಬಹಿರಂಗಗೊಂಡಿಲ್ಲ.

# ಡೆಂಗ್ಯೂ ನಿಯಂತ್ರಣಕ್ಕೆ ಸ್ವಚ್ಛತೆಯೇ ಮದ್ದು

## ಡೆಂಗ್ಯೂ ಜಾಥಾ ಕಾರ್ಯಕ್ರಮದಲ್ಲಿ ನಿಯಂತ್ರಣಾಧಿಕಾರಿ ಡಾ. ಚಿದಂಬರ್ ಸಲಹೆ




ಹೆಚ್.ಡಿ.ಕೋಟೆ, ಮೇ 17– ಮೇ ತಿಂಗಳಲ್ಲಿ ಹೆಚ್ಚಾಗಿ ಮಳೆ ಬರುವುದರಿಂದ ಸೊಳ್ಳೆಗಳು ಹೆಚ್ಚು ಉತ್ಪತ್ತಿಯಾಗುತ್ತವೆ. ಆದ್ದರಿಂದ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು. ಈ ನಿಟ್ಟಿನಲ್ಲಿ ರಾಷ್ಟ್ರೀಯ ಡೆಂಗ್ಯೂ ದಿನವನ್ನು ಮೇ ತಿಂಗಳಲ್ಲಿ ಆಚರಿಸಿ, ವಿಶೇಷ ಜಾಗೃತಿ, ಅಭಿಯಾನವನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ. ಚಿದಂಬರ್ ತಿಳಿಸಿದರು.

ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ವತಿಯಿಂದ ಆಯೋಜಿಸಲಾಗಿದ್ದ ರಾಷ್ಟ್ರೀಯ ಡೆಂಗ್ಯೂ ದಿನ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ತಾಲೂಕು ಆರೋಗ್ಯಾಧಿಕಾರಿಗಳಾದ ಡಾ: ರವಿಕುಮಾರ್ ಜತೆ ಡಾ. ಚಿದಂಬರ್ ಚಾಲನೆ ನೀಡಿ, ಮಾತನಾಡಿದರು.

ರಾಷ್ಟ್ರೀಯ ಡೆಂಗ್ಯೂ ದಿನವನ್ನು ಮೇ ತಿಂಗಳಲ್ಲಿ ಯಾಕೇ ಆಚರಣೆ ಮಾಡುತ್ತೀವಿ ಎಂದರೆ, ಮೇ ತಿಂಗಳಲ್ಲಿ ಮಳೆ ಹೆಚ್ಚಾಗಿ ಬರುವುದರಿಂದ ಸೊಳ್ಳೆಗಳು ಹೆಚ್ಚು ಉತ್ಪತ್ತಿಯಾಗುತ್ತವೆ. ಆದ್ದರಿಂದ, ಡೆಂಗ್ಯೂ ಈಡಿಸ್ ಈಜಿಪ್ಟ್ ಎಂಬ ಸೊಳ್ಳೆ ಕಚ್ಚುವುದರಿಂದ ಬರುತ್ತದೆ. ಈ ಸೊಳ್ಳೆಯು ಸಾಮಾನ್ಯವಾಗಿ ಹಗಲು ಹೊತ್ತಿನಲ್ಲಿ ಕಚ್ಚುತ್ತದೆ ಎಂದರು.

ಈ ರೋಗದ ಮುಖ್ಯ ಲಕ್ಷಣಗಳು. ತೀವ್ರ ಜ್ವರ, ತಲೆನೋವು, ಕಣ್ಣುಗುಡ್ಡೆ ಹಿಂಭಾಗದಲ್ಲಿ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ವಿಪರೀತ ನೋವು ಕಾಣಿಸಿಕೊಳ್ಳುತ್ತದೆ ಎಂದು ತಿಳಿಸಿದರು.

ಈ ರೋಗ ಲಕ್ಷಣಕ್ಕೆ ಅನುಗುಣವಾಗಿ ಚಿಕಿತ್ಸೆ ನೀಡಲಾಗುವುದು, ಸೊಳ್ಳೆಗಳ ನಿಯಂತ್ರಣದಿಂದ ಡೆಂಗ್ಯೂ ರೋಗದ ಹತೋಟಿ ಸಾಧ್ಯ, ಈ ಸೊಳ್ಳೆಗಳು ಮನೆಯ ಒಳಗೆ ಹಾಗೂ ಹೊರಗೆ ಶೇಖರವಾಗುವ ನೀರಿನಿಂದ ಉತ್ಪತ್ತಿಯಾಗುತ್ತವೆ. ಮಣ್ಣಿನ ಮಡಿಕೆ, ಉಪಯೋಗಿಸಿದ ಒರಳು ಕಲ್ಲುಗಳು, ತಟ್ಟೆಗಳು, ಪೇಪರ್ ಲೋಟಗಳು, ಬಳಸಿದ ಟೈರುಗಳು, ಎಳನೀರು ಚಿಪ್ಪುಗಳು, ಘನ ತ್ಯಾಜ್ಯ ವಸ್ತುಗಳಲ್ಲಿ ಈ ಸೊಳ್ಳೆಗಳು ವಾಸಿಸುತ್ತವೆ, ಆದುದರಿಂದ ನೀರು ನಿಲ್ಲದಂತೆ ಎಚ್ಚರವಿರಬೇಕು ಎಂದರು.

**ಮುಂಜಾಗ್ರತ ಕ್ರಮಗಳು:** ಎಲ್ಲಾ ನೀರಿನ ತೊಟ್ಟಿಗಳು, ಡ್ರಮ್‌ಗಳು, ಬ್ಯಾರೆಲ್‌ಗಳು, ಏರ್ ಕೂಲರ್‌ಗಳು, ಇತ್ಯಾದಿಗಳನ್ನು ವಾರಕ್ಕೆ ಒಮ್ಮೆ ಖಾಲಿ ಮಾಡಿ ಸ್ವಚ್ಛಗೊಳಿಸಬೇಕು. ಬಯಲಿನಲ್ಲಿರುವ ತ್ಯಾಜ್ಯ ವಸ್ತುಗಳಲ್ಲಿ ಮಳೆ ನೀರು ಸಂಗ್ರಹವಾಗದಂತೆ ಎಚ್ಚರವಹಿಸಿ ಎಂದು ಸಲಹೆ ನೀಡಿದರು.

ಸ್ವಯಂರಕ್ಷಣಾ ವಿಧಾನಗಳಾದ ಸೊಳ್ಳೆ ಪರದೆ ಬಳಸುವುದು, ಮೈತುಂಬ ಬಟ್ಟೆ ಧರಿಸುವುದು, ಆರೋಗ್ಯ ಇಲಾಖೆ ಹಮ್ಮಿಕೊಂಡ ಸೊಳ್ಳೆ ನಿಯಂತ್ರಣ ಕ್ರಮಗಳನ್ನು ಎಲ್ಲರೂ ಪಾಲಿಸಿ ಮುನ್ನೆಚ್ಚರಿಕೆ ವಹಿಸುವುದು ಸೂಕ್ತ ಎಂದು ತಿಳಿಸಿದರು.

ಜಾಥಾದಲ್ಲಿ ತಾಲ್ಲೂಕಿನ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳು, ಆರೋಗ್ಯ ನಿರೀಕ್ಷಣಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಸಂರಕ್ಷಣಾಧಿಕಾರಿಗಳು, ಸಮುದಾಯ ಆರೋಗ್ಯ ಅಧಿಕಾರಿಗಳು, ಇನ್ನಿತರರು ಹಾಜರಿದ್ದರು.



### ಎಸ್‌ಎಸ್‌ಎಲ್‌ಸಿ
## ಪಲ್ಲವಿಗೆ ಅತ್ಯುತ್ತಮ ಅಂಕ



ನಂಜನಗೂಡು, ಮೇ 17– ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ನಿಟ್ರೆ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಪಲ್ಲವಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ಅಂಕಗಳಿಗೆ 557 ಅಂಕಗಳನ್ನು ಗಳಿಸುವ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾಳೆ. ವಿದ್ಯಾರ್ಥಿನಿಯ ಈ ಸಾಧನೆಗೆ ಶಾಲೆಯ ಶಿಕ್ಷಕರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

## ನೇಮಕ

ಹುಣಸೂರು, ಮೇ 17– ಮೈಸೂರು ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಹಿರಿಯ ಉಪಾಧ್ಯಕ್ಷರಾಗಿ ಹುಣಸೂರಿನ ಎಸ್. ಜಯರಾಮು ಅವರನ್ನು ನೇಮಕ ಮಾಡಲಾಗಿದೆ.

# ಶ್ರೀಕಂಠೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿದ ಶಾಸಕ ಎಆರ್‌ಕೆ



ನಂಜನಗೂಡು, ಮೇ 17– ರಾಜ್ಯದ ಜನರು ಕಾಂಗ್ರೆಸ್ ಪಕ್ಷದ ಭರವಸೆಗಳ ಮೇಲೆ ನಂಬಿಕೆಯಿಟ್ಟು ಪಕ್ಷಕ್ಕೆ ಬಹುಮತ ನೀಡಿ ಅಧಿಕಾರಕ್ಕೆ ತಂದಿದ್ದಾರೆ. ಮುಂದಿನ ಲೋಕಸಭೆ ಚುನಾವಣೆಗೆ ನಾಂದಿಯಾಗಲು ಜನರ ನಂಬಿಕೆಯಂತೆ ಕಾಂಗ್ರೆಸ್ ಸರ್ಕಾರ ಕೊಟ್ಟ ಭರವಸೆಯನ್ನು ಈಡೇರಿಸಲು ಮುಂದಾಗಬೇಕಿದೆ ಎಂದು ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು.

ಬುಧವಾರ ನಂಜನಗೂಡಿನ ನಂಜುಂಡೇಶ್ವರ ದೇವಾಲಯಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕೊಟ್ಟಿದ್ದ 165 ಭರವಸೆಗಳನ್ನು ಈಡೇರಿಸಿ ಬಡವರ ಪರವಾಗಿ ಅನೇಕ ಭಾಗ್ಯಗಳನ್ನು ಜಾರಿಗೊಳಿಸಿ ಜನರ ವಿಶ್ವಾಸಕ್ಕೆ ಪಾತ್ರ ವಾಗಿತ್ತು. ಈ ಬಾರಿಯೂ ಕೂಡ ಕಾಂಗ್ರೆಸ್ ಪಕ್ಷ ನೀಡಿರುವ ಗ್ಯಾರಂಟಿಗಳ ಮೇಲೆ ವಿಶ್ವಾಸವಿಟ್ಟು ಮತ ನೀಡಿ ಪಕ್ಷಕ್ಕೆ ಅಧಿಕಾರ ನೀಡಿದ್ದಾರೆ. ಮುಂದಿನ ಲೋಕಸಭೆ ಚುನಾವಣೆಯಲ್ಲೂ ಕೂಡ ಕಾಂಗ್ರೆಸ್ ಪಕ್ಷ ಅಧಿಕಾರ ಹಿಡಿಯುವಂತಾಗಲು ಕೊಟ್ಟ ಭರವಸೆಗಳನ್ನು ಈಡೇರಿಸಬೇಕು ಎಂದರು.

**ನಾನು ಕೂಡ ಸಚಿವ ಸ್ಥಾನದ ಆಕಾಂಕ್ಷಿ:** ನಾನು 1979ರಿಂದಲೂ ಸಕ್ರಿಯ ರಾಜಕಾರಣದಲ್ಲಿದ್ದೇನೆ. ಕಳೆದ 19 ವರ್ಷಗಳ ನಂತರ ಜನತೆಯ ಆಶೀರ್ವಾದದಿಂದ ಅಧಿಕ ಮತಗಳ ಅಂತರದಿಂದ ಗೆದ್ದು ಶಾಸಕನಾಗಿದ್ದೇನೆ. ಪಕ್ಷದ ವರಿಷ್ಠರು ನನ್ನನ್ನೂ ಕೂಡ ಸಚಿವ ಸ್ಥಾನಕ್ಕೆ ಪರಿಗಣಿಸುವ ವಿಶ್ವಾಸವಿದೆ. ಕೊನೆಗೆ ವರಿಷ್ಠರ ತೀರ್ಮಾನಕ್ಕೆ ಬದ್ಧನಾಗಿರುತ್ತೇನೆ ಎಂದರು.

ಇದೇ ವೇಳೆ ಶಾಸಕ ಎ.ಆರ್.ಕೃಷ್ಣಮೂರ್ತಿ ಶ್ರೀಕಂಠೇಶ್ವರನಿಗೆ ಕ್ಷೀರಾಭಿಷೇಕ ನೆರವೇರಿಸಿದ ಬಳಿಕ ವಿಶೇಷ ಪೂಜೆ ಸಲ್ಲಿಸಿದರು. ದೇವಾಲಯದ ವತಿಯಿಂದ ಅವರಿಗೆ ಶೇಷ ವಸ್ತ್ರ, ಫಲತಾಂಬೂಲಗಳನ್ನು ನೀಡಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ಸಿ.ಎಂ. ಶಂಕರ್, ಮುಖಂಡರಾದ ದೊರೆಸ್ವಾಮಿ ನಾಯಕ, ಎಚ್.ಎಸ್.ಮೂಗಶೆಟ್ಟಿ, ಗಿರಿಧರ್, ಜಯಮಾಲ ಬೀರೇಗೌಡ, ಗೋವಿಂದರಾಜು, ಉಪ್ಪಿನಹಳ್ಳಿ ಶಿವಣ್ಣ, ನಾಗರಾಜಯ್ಯ, ಶ್ರೀನಿವಾಸ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

# ರಾಜ್ಯದಲ್ಲಿ ಕಾಂಗ್ರೆಸ್ ಪರ ಅಲೆ ಇದ್ದರೂ ಹುಣಸೂರಲ್ಲಿ ಜೆಡಿಎಸ್ ಗೆಲುವು: ಫಜಲುಲ್ಲಾ




ಹುಣಸೂರು, ಮೇ 17– ಇಡೀ ರಾಜ್ಯದಲ್ಲಿ ಕಾಂಗ್ರೆಸ್ ಪರವಾದ ಅಲೆ ಇದ್ದರೂ ನಮ್ಮ ತಾಲೂಕಿನಲ್ಲಿ ಜೆಡಿಎಸ್ ಅಭ್ಯರ್ಥಿ ಜಿ.ಟಿ.ಹರೀಶ್‌ಗೌಡರನ್ನು ಮತದಾರ ಆಯ್ಕೆ ಮಾಡಿರುವುದು ಹೆಮ್ಮೆಯ ವಿಚಾರ ಎಂದು ಜೆಡಿಎಸ್ ನಗರ ಅಧ್ಯಕ್ಷ ಎಚ್.ಎಂ. ಫಜಲುಲ್ಲಾ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ತಾಲೂಕಿನಲ್ಲಿ ಮೂರು ಬಾರಿ ಬೇರೆ ಪಕ್ಷದವರು ಶಾಸಕರಾಗಿದ್ದರು. ಆದರೂ ನಮ್ಮ ಅಭ್ಯರ್ಥಿ ಪರವಾಗಿ ಜನತೆ ಮತ ಚಲಾಯಿಸಿದ್ದಾರೆ. ಮಾಜಿ ಸಚಿವ ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರವರ ಅಭಿವೃದ್ಧಿಯನ್ನು ಮೆಚ್ಚಿ ತಾಲೂಕಿನ ಜನತೆ ಅವರ ಪುತ್ರನಿಗೆ ಬೆಂಬಲ ನೀಡಿ ಗೆಲ್ಲಿಸಿದ್ದಾರೆ ಎಂದರು. ಶಾಸಕರು ನಗರದ ಅಭಿವೃದ್ಧಿ ಕುಂಠಿತವಾಗಿರುವ ಹಾಗೂ ಬಡವರ ಸೂರಿನ ಬಗ್ಗೆ ಹಂತವಾಗಿ ಕ್ರಮ ಕೈಗೊಳ್ಳುತ್ತಾರೆ ಎಂಬ ವಿಶ್ವಾಸವಿದೆ ಎಂದರು.

ಜೆಡಿಎಸ್ ಪಕ್ಷದ ವಕ್ತಾರರು ಹಾಗೂ ವಕೀಲ ಶಿವಕುಮಾರ್ ಮಾತನಾಡಿ, ನಮ್ಮ ಅಭ್ಯರ್ಥಿಯನ್ನು ಎಲ್ಲಾ ಧರ್ಮ ದವರು ಬೆಂಬಲಿಸಿದ್ದಾರೆ. ಪಕ್ಷದ ಮುಖಂ ಡರು, ಕಾರ್ಯಕರ್ತರು ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪುರಸಭೆ ಮಾಜಿ ಸದಸ್ಯರಾದ ದೇವರಾಜು, ಶಿವಶೇಖರ್ ಉಪಸ್ಥಿತರಿದ್ದರು.

# ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನಿಂದ ಜನ ಜಾಗೃತಿ

ಸರಗೂರು, ಮೇ 17– ದೇಶದ ಏಳಿಗೆಗಾಗಿ ಜನಜಾಗೃತಿ ಮೂಡಿಸುವ ಕೆಲಸವನ್ನು ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಕೈಗೊಂಡಿದೆ ಎಂದು ವಲಯ ಪ್ರಮುಖರೂ, ರಾಜ್ಯದ ಸಂಪರ್ಕ ಪ್ರಮುಖರಾದ ಡಾ. ವಿ.ರಂಗನಾಥ್ ತಿಳಿಸಿದರು.

ಸರಗೂರು ಪಟ್ಟಣದಲ್ಲಿ ನಡೆದ ಸಭೆಯಲ್ಲಿ ಅವರು ಮಾತನಾಡಿ, ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಕಳೆದ ಐವತ್ತು ವರ್ಷಗಳಿಂದ ದೇಶದಲ್ಲಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯದ ಮೂವತ್ತು ಜಿಲ್ಲೆ ಹಾಗೂ ನೂರೈವತ್ತು ತಾಲೂಕುಗಳಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಕಾರ್ಯ ಚಟುವಟಿಕೆ ನಡೆಯುತ್ತಿದೆ. ರಾಷ್ಟ್ರೀಯ ದೃಷ್ಟಿಕೋನವನ್ನು ಗಮನದಲ್ಲಿರಿಸಿಕೊಂಡು ಸಾಹಿತ್ಯ ಚಟುವಟಿಕೆ ನಡೆಸಲಾಗುತ್ತಿದೆ.

ಎಲ್ಲ ಭಾರತೀಯ ಭಾಷೆಗಳ ನಡುವೆ ಸಾಮರಸ್ಯ ತಂದು ದೇಶದ ಏಳಿಗೆಗಾಗಿ ಜನಜಾಗೃತಿ ಮೂಡಿಸುವ ಕೆಲಸವನ್ನು ಮಾಡುತ್ತಿದೆ. ಕರ್ನಾಟಕದಲ್ಲಿ ಕಳೆದ ಎಂಟು ವರ್ಷಗಳಿಂದ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಸರಗೂರಿನಲ್ಲೂ ಸಮಿತಿ ರಚಿಸಿ ರಾಷ್ಟ್ರೀಯ ಸಾಹಿತ್ಯದ ಮಹತ್ವ ತಿಳಿಸುವ ಕೆಲಸ ಆಗಬೇಕೆಂದು ಅವರು ತಿಳಿಸಿದರು.



ಸರಗೂರು ಪಟ್ಟಣದಲ್ಲಿ ನಡೆಸಲಾದ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಸಭೆಯಲ್ಲಿ ವಲಯ ಪ್ರಮುಖರೂ, ರಾಜ್ಯದ ಸಂಪರ್ಕ ಪ್ರಮುಖರಾದ ಡಾ. ವಿ.ರಂಗನಾಥ್ ಮಾತನಾಡಿದರು.

ಸಭೆಯಲ್ಲಿ ಸರಗೂರಿನಲ್ಲಿ ಕೆಲವು ಸಾಹಿತ್ಯ ಅಭಿಮಾನಿಗಳ ಸಭೆಯಲ್ಲಿ ತಮ್ಮ ಅನಿಸಿಕೆ, ಅಭಿಪ್ರಾಯ ತಿಳಿಸಿದರು.

ಇಂದಿರಾ ಮಾತನಾಡಿ, ಶೀಘ್ರದಲ್ಲೇ ಮತ್ತೊಂದು ಸಭೆ ಕರೆದು ಸಮಿತಿ ರಚನೆಯ ದಿನಾಂಕವನ್ನು ನಿಗದಿಪಡಿವುದಾಗಿ ತಿಳಿಸಿದರು. ಸಭೆಯಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಮೈಸೂರು ಜಿಲ್ಲಾ ಅಧ್ಯಕ್ಷ ಪ್ರೊ.ರಾಮರತನ್, ಜಿಲ್ಲಾ ಕಾರ್ಯದರ್ಶಿ ಸುಬ್ರಹ್ಮಣ್ಯ, ಪಟ್ಟಣದ ಪ್ರಮುಖರಾದ ಜನದನಿ ನಿಂಗರಾಜು, ಮೈಸೂರು ಜ್ಞಾನ ದ್ವನಿ ರಾಜು, ಪ್ರಚಾರಕ ಸತೀಶ್ ಕದಂಬ, ಎಂ.ನಾಗರಾಜು, ಜನನಿ ಸೌಂಡ್ ಮಾಲಿಕ ವಿಜಯ್, ಇತರರು ಭಾಗವಹಿಸಿದ್ದರು.

# ಸಿಬಿಎಸ್‌ಇ ಪರೀಕ್ಷೆ: ಸೇಂಟ್ ಮೇರಿಸ್ ಶಾಲೆಗೆ ಶೇ.100ರಷ್ಟು ಫಲಿತಾಂಶ


ಇಂದುಶ್ರೀ


ಶೆಟ್ಟಿ ತೃಪ್ತಿ


ನಿತ್ಯಶ್ರೀ


ಕುಸುಮಾ


ಸ್ವಾತಿ

ತಿ.ನರಸೀಪುರ ಮೇ 17– 2022–23ನೇ ಸಾಲಿನ 10ನೇ ತರಗತಿ ಸಿಬಿಎಸ್‌ಇ ಪರೀಕ್ಷೆಯ ಫಲಿತಾಂಶದಲ್ಲಿ ಸೇಂಟ್ ಮೇರಿಸ್ ಶಾಲೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದು, ಶಾಲೆಗೆ ಶೇ.100 ಫಲಿತಾಂಶ ದೊರಕಿದೆ.

ಒಟ್ಟು 108 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ 16 ವಿದ್ಯಾರ್ಥಿಗಳು ಶೇ.90ಕ್ಕಿಂತ ಹೆಚ್ಚು ಅಂಕ ಪಡೆದು, 53 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ, 27 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ, 12 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ.

ಇಂದುಶ್ರೀ ಯು. ಶೆಟ್ಟಿ (ಶೇ.94.4), ತೃಪ್ತಿ ಎಸ್. (ಶೇ.91.6), ನಿತ್ಯಶ್ರೀ ಎಂ. (90.8), ಕುಸುಮಾ (ಶೇ.90.4), ಸ್ವಾತಿ(ಶೇ.90.4), ಆರ್. ಕವಿತಾ (ಶೇ.87.4), ಬಿ. ಅಕ್ಷಯಾ (ಶೇ.86.8), ರೇಣುಕಾ ಪ್ರಸನ್ನ (ಶೇ.86.8), ಎಂ.ಆರ್. ಅಕ್ಷತಾ (ಶೇ.85.6)ರಷ್ಟು ಅಂಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.

ಈ ಸಂದರ್ಭದಲ್ಲಿ ಸಾಧನೆ ಮಾಡಿದ ಎಲ್ಲಾ ವಿದ್ಯಾರ್ಥಿಗಳಿಗೂ ಶಾಲೆಯ ಆಡಳಿತ ಮಂಡಳಿಯ ಪಾಲ್ ಬೆನೆಡಿಕ್ಟ್ ಪ್ರಾಂಶುಪಾಲ ಕ್ಸೆವಿಯರ್ ಅಂತೋನಿ, ಉಪಪ್ರಾಂಶುಪಾಲ ಆರ್. ಗೋವಿಂದ್ ಹಾಗೂ ಇತರೆ ಶಿಕ್ಷಕವರ್ಗದವರು ಅಭಿನಂದಿಸಿದ್ದಾರೆ.

# ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕೋವಿಡ್ ಸಂತ್ರಸ್ತ ವಿದ್ಯಾರ್ಥಿಗಳ ಸಾಧನೆ


ಎಸ್. ಯೋಗೇಶ್
ಶೇ. 84.48


ಜೆ.ಎಸ್.ಗಂಧ ಗಂಭೀರ್
ಶೇ. 67.68

ಸುತ್ತೂರು, ಮೇ 17–ಕೋವಿಡ್–19 ಸಂತ್ರಸ್ತರ ಕುಟುಂಬದ ಹತ್ತಾರು ಮಕ್ಕಳಿಗೆ ಶ್ರೀ ಸುತ್ತೂರು ಕ್ಷೇತ್ರದ ಜೆಎಸ್‌ಎಸ್ ವಸತಿ ಶಾಲೆಯಲ್ಲಿ 2021–22ನೇ ಸಾಲಿನಲ್ಲಿ ಉಚಿತ ಶಿಕ್ಷಣದ ವ್ಯವಸ್ಥೆಯನ್ನು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಕೃಪಾಶೀರ್ವಾದದೊಂದಿಗೆ ಕಲ್ಪಿಸಲಾಗಿತ್ತು. ಅವರುಗಳಲ್ಲಿ ಚಾಮರಾಜನಗರ ಜಿಲ್ಲೆಯ ಎಸ್. ಯೋಗೇಶ್ ಹಾಗೂ ದಾವಣಗೆರೆ ಜಿಲ್ಲೆಯ ಜೆ.ಎಸ್.ಗಂಧ ಗಂಭೀರ್ ವಿದ್ಯಾರ್ಥಿಗಳು 2022–23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ಅಂಕಗಳಿಗೆ ಕ್ರಮವಾಗಿ 528 ಹಾಗೂ 423 ಅಂಕಗಳನ್ನು ಪಡೆದುಕೊಂಡು ಸಾಧನೆ ಮಾಡಿದ್ದಾರೆ.

ಸುತ್ತೂರು ವಸತಿ ಶಾಲೆಯಲ್ಲಿ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಂದ ಬಂದ 4000ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು, ಕರ್ನಾಟಕ ರಾಜ್ಯದ ಮಕ್ಕಳೊಂದಿಗೆ ನೆರೆ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ ರಾಜ್ಯಗಳಲ್ಲದೆ, ದೂರದ ಮೇಘಾಲಯ, ಮಣಿಪುರ, ಜಾರ್ಖಂಡ್, ಬಿಹಾರ್ ರಾಜ್ಯಗಳ ಮಕ್ಕಳು ಸಹ ವ್ಯಾಸಂಗ ಮಾಡುತ್ತಿದ್ದಾರೆ.

## ಬಸವಣ್ಣ, ಸಿದ್ದಗಂಗಾ ಸ್ವಾಮಿಗಳ ಜಯಂತಿ

ಬೆಟ್ಟದಪುರ, ಮೇ 17–– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದಲ್ಲಿ ವೀರಶೈವ ಲಿಂಗಾಯತ ಸಮಾಜದಿಂದ ಬಸವ ಜಯಂತಿ ಹಾಗೂ ಸಿದ್ದಗಂಗಾ ಜಯಂತಿಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಈ ವೇಳೆ ಬೆಟ್ಟದಪುರ ವೀರಶೈವ ಲಿಂಗಾಯತ ಸಮಾಜದ ಮುಖಂಡರಾದ ಪಟೇಲ್ ನಟೇಶ್, ಟಿಟಿ ಗಿರೀಶ್, ಬಿಎನ್ ಗಿರೀಶ್, ನಾಗರಾಜ ಶೆಟ್ಟಿ ಬಿ.ಸಿ.ರಾಜೇಂದ್ರ, ಗ್ರಾಮೀಣ ಶಿಕ್ಷಕರ ಸಂಘದ ಅಧ್ಯಕ್ಷ ಬಿ.ಸ.ಮಾದೇವಪ್ಪ, ಮಲ್ಲೇಶ್, ಗಗನ್, ಭರತ್, ರಾಜೇಶ್, ದರ್ಶನ್, ಬಿ.ಎಸ್.ಮಂಜುನಾಥ್, ಪಾಪಣ್ಣ, ಚರಣ್‌ರಾಜ್ ಸೇರಿದಂತೆ ವೀರಶೈವ ಸಮಾಜದ ಎಲ್ಲಾ ಬಾಂಧವರು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

## ಶ್ರೀ ದೇಶೇಶ್ವರಸ್ವಾಮಿ, ಪಾರ್ವತಿ ಅಮ್ಮನವರ ಮದ್ದಿವ್ಯ ಬ್ರಹ್ಮ ರಥೋತ್ಸವ

ಮೂಗೂರು, ಮೇ 17– ಗ್ರಾಮದ ಶ್ರೀ ದೇಶೇಶ್ವರ ಸ್ವಾಮಿ ಹಾಗೂ ಪಾರ್ವತಿ ಅಮ್ಮನವರ ಗಿರಿಜಾ ಕಲ್ಯಾಣ ಮಹೋತ್ಸವದ ಅಂಗವಾಗಿ ನಡೆದ ಶ್ರೀ ದೇಶೇಶ್ವರ ಸ್ವಾಮಿ ಹಾಗೂ ಪಾರ್ವತಿ ಅಮ್ಮನವರ ಮದ್ದಿವ್ಯ ಬ್ರಹ್ಮ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು.

ದೇವೇಶ ಗಿರಿ ಎಂದೇ ಇತಿಹಾಸ ಹಿನ್ನೆಲೆಯುಳ್ಳ ಪಂಚಲಿಂಗಗಳನ್ನು ಒಳಗೊಂಡ ಈ ದೇವಾಲಯದಲ್ಲಿ ಶ್ರೀ ಶನೇಶ್ವರಸ್ವಾಮಿ, ಸಿದ್ದೇಶ್ವರ, ಚಂಡೀಕೇಶ್ವರ, ವೀರಾಂಜನೇಯ ನಾಗರಕಟ್ಟೆ, ಬಸವೇಶ್ವರ ದೇಗುಲದ ಸಂಗಮ. ರಥೋತ್ಸವದ ನಿಮಿತ್ತ ದೇಗುಲದಲ್ಲಿ ರುದ್ರಾಭಿಷೇಕ ವಿಶೇಷ ಪೂಜೆ ನಡೆದವು. ವಿವಿಧ ಬಗೆಯ ಹೂವಿನಿಂದ ತಳಿರು ತೋರಣಗಳಿಂದ ಸಿಂಗಾರಗೊಂಡ ರಥಕ್ಕೆ ಪಾರ್ವತಿ ಅಮ್ಮನವರ ಉತ್ಸವ ಮೂರ್ತಿಯನ್ನು ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿದ ಬಳಿಕ ರಥದಲ್ಲಿ ಪ್ರತಿಷ್ಠಾಪಿಸಲಾಯಿತು. ಗ್ರಾಮಸ್ಥರಿಂದ ರಥೋತ್ಸವಕ್ಕೆ ಚಾಲನೆ ದೊರೆಯಿತು. ನೆರೆದಿದ್ದ ಭಕ್ತರು ಘೋಷಣೆ ಕೂಗುತ್ತಿದಂತೆಯೇ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿತು. ದಾರಿಯುದ್ದಕ್ಕೂ ಭಕ್ತ ಸಮೂಹ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ರಥಕ್ಕೆ ಹಣ್ಣು ಜವನ ಅರ್ಪಿಸಿ ನಮಿಸಿದರು. ಶ್ರೀ ತ್ರಿಪುರ ಸುಂದರಿ ಅಮ್ಮನವರ ಸೇವಾ ಸಮಿತಿಯ ವತಿಯಿಂದ ಪ್ರಸಾದ ವಿನಿಯೋಗ ನಡೆಯಿತು. ಗ್ರಾಮದ ಮುಖಂಡರು, ಮುಜರಾಯಿ ಇಲಾಖೆ ಅಧಿಕಾರಿಗಳು, ಅರ್ಚಕ ಸಮೂಹ, ಗ್ರಾಮಸ್ಥರು ಉಪಸ್ಥಿತರಿದ್ದರು.

# ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳು ಸೇರಿ 10 ಮಂದಿ ಅಭ್ಯರ್ಥಿಗಳ ಠೇವಣಿ ನಷ್ಟ

ಹುಣಸೂರು, ಮೇ 17– ವಿಧಾನಸಭೆ ಚುನಾವಣೆಯಲ್ಲಿ ಸೋಲು ಅನುಭವಿಸಿದ ಮೂರು ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳು, ಪ್ರಾದೇಶಿಕ ಪಕ್ಷದ ಒಬ್ಬರು ಹಾಗೂ ಆರು ಸ್ವತಂತ್ರ ಅಭ್ಯರ್ಥಿಗಳು ತಮ್ಮ ಠೇವಣಿಯನ್ನು ಕಳೆದುಕೊಂಡಿದ್ದಾರೆ.

ಮೇ 10ರಂದು ನಡೆದ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಜಿ.ಡಿ. ಹರೀಶ್‌ಗೌಡ 94,666 ಮತಗಳನ್ನು ಪಡೆದು ಜಯಶಾಲಿಯಾದರೆ, ಕಾಂಗ್ರೆಸ್ ಅಭ್ಯರ್ಥಿ ಹೆಚ್.ಪಿ.ಮಂಜುನಾಥ್ 92,254 ಮತಗಳನ್ನು ಪಡೆದು ಸೋಲು ಅನುಭವಿಸಿ ತಮ್ಮ ಠೇವಣಿಯನ್ನು ಉಳಿಸಿಕೊಂಡಿದ್ದಾರೆ. ಅದರೆ ಇನ್ನುಳಿದ ಹತ್ತು ಮಂದಿ ಅಭ್ಯರ್ಥಿಗಳು ತಮ್ಮ ಠೇವಣಿ ಕಳೆದು ಕೊಂಡಿದ್ದಾರೆ.

ರಾಷ್ಟ್ರೀಯ ಪಕ್ಷಗಳಾದ ಭಾರತೀಯ ಜನತಾ ಪಕ್ಷದ ದೇವರಹಳ್ಳಿ ಸೋಮಶೇಖರ್ (6258), ಬಹುಜನ ಸಮಾಜವಾದಿ ಪಕ್ಷದ ಪ್ರಸನ್ನ ಸೋಮನಹಳ್ಳಿ (975), ಅಮ್‌ಆದ್ಮಿ ಪಕ್ಷದ ಜಿ.ರವಿಕುಮಾರ್ (2912), ಕೆ.ಆರ್.ಎಸ್ ಪಕ್ಷದ ಎಮ್ಮೆಕೊಪ್ಪಲು ತಿಮ್ಮಭೋವಿ (761) ಹಾಗೂ ಸ್ವತಂತ್ರ ಅಭ್ಯರ್ಥಿಗಳಾದ ಸುನಿಲ್.ಡಿ.ಎನ್ (654), ಉಮೇಶ್ (212), ಚನ್ನೇಗೌಡ (449), ಹೆಚ್.ಬಿ. ರಾಜೇಂದ್ರ (178), ಲೋಕೇಶ್.ಬಿ.ಎಲ್ (332), ಹಾಗೂ ಸಯ್ಯಾದನೀಫ್ (401) ಮತಗಳನ್ನು ಪಡೆಯುವ ಮೂಲಕ ಈ ಎಲ್ಲರೂ ಠೇವಣಿ ಕಳೆದುಕೊಂಡಿದ್ದಾರೆ ಎಂದು ಚುನಾವಣಾ ಆಯೋಗದ ಅಂಕಿ–ಅಂಶಗಳಿಂದ ತಿಳಿದು ಬಂದಿದೆ.

# ಅಭಿವೃದ್ಧಿ ವಿಚಾರದಲ್ಲಿ ಡಾ.ಮಹದೇವಪ್ಪ ಹಿಂದೆ ಬಿದ್ದಿಲ್ಲ

## ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ. ಬಸವರಾಜು



ತಿ.ನರಸೀಪುರ ಮೇ 17– ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಡಾ. ಮಹದೇವಪ್ಪ ಅವರಿಗೆ ಯಾರು ಹೇಳಬೇಕಿಲ್ಲ. ಅಭಿವೃದ್ಧಿ ವಿಚಾರದಲ್ಲಿ ಅವರು ಹಿಂದೆ ಬಿದ್ದಿಲ್ಲ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ. ಬಸವರಾಜು ತಿಳಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜನಾದೇಶಕ್ಕೆ ಎಲ್ಲರೂ ತಲೆಬಾಗಬೇಕು. ಕಳೆದ ಬಾರಿ ಸೋತಿದ್ದ ಮಹದೇವಪ್ಪನವರಿಗೆ ಈ ಬಾರಿ ಜನಾದೇಶವಾಗಿದೆ. ಶಾಸಕರಾಗಿದ್ದ ಅಶ್ವಿನ್ ಕುಮಾರ್ ಅವರು ನಿನ್ನೆ ಮಾಧ್ಯಮಗಳ ಮುಂದೆ ಮಹದೇವಪ್ಪನವರು ಕ್ಷೇತ್ರದ ಅಭಿವೃದ್ಧಿ ಮಾಡದಿದ್ದರೆ ನಾವು ಹೋರಾಟ ಮಾಡುತ್ತೇವೆ ಎಂದು ಹೇಳಿರುವುದು ಸರಿಯಲ್ಲ ಎಂದರು

ಈ ಹಿಂದೆ ಸಚಿವರಾಗಿ ಕ್ಷೇತ್ರದಲ್ಲಿ ಸಹಸ್ರಾರು ಕೋಟಿ ರೂಪಾಯಿಗಳನ್ನು ತಂದು ಅಭಿವೃದ್ಧಿ ಮಾಡಿದ್ದಾರೆ. ಈ ವಿಚಾರದಲ್ಲಿ ಡಾ.ಎಚ್.ಸಿ.ಮಹದೇವಪ್ಪನವರು ಎಂದೂ ಹಿಂದೆ ಬಿದ್ದಿಲ್ಲ. ಆದರೆ ಮಹದೇವಪ್ಪನವರು ಅನುದಾನ ನೀಡಿದ ಅನೇಕ ಯೋಜನೆಗಳನ್ನು ಶಾಸಕರಾಗಿದ್ದ ಅಶ್ವಿನ್ ಅವರು ತಮ್ಮ ಅವಧಿಯಲ್ಲಿ ಪೂರ್ಣಗೊಳಿಸಲು ಆಗಿಲ್ಲ. ಮಹದೇವಪ್ಪನವರ ಕಾಲದಲ್ಲಿ ಮೂಗೂರು ಹೋಬಳಿ ಕೇಂದ್ರದಲ್ಲಿ ಸುಸಜ್ಜಿತ ಆಸ್ಪತ್ರೆ, ಸೆಸ್ಕ್ ವಿದ್ಯುತ್ ವಿತರಣಾ ಕೇಂದ್ರ ಸೇರಿದಂತೆ ಅನೇಕ ಅಭಿವೃದ್ಧಿ ಕೆಲಸಗಳಾಗಿವೆ ಎಂದು ಅವರು ವಿವರಿಸಿದರು.

ಬಂಡಿ ಬೀದಿ ರಸ್ತೆಗೆ 1.30 ಕೋಟಿ ಅನುದಾನ ನೀಡಲಾಗಿತ್ತು ಆದರೆ ಶಾಸಕರು ತಮ್ಮ ಕಾಲದಲ್ಲಿ ಅದರ ಅಭಿವೃದ್ಧಿ ಮಾಡಿಸಿಲ್ಲ. ಜತೆಗೆ ಸೆಸ್ಕ್ ವಸತಿ ಗೃಹ ನಿರ್ಮಾಣಕ್ಕೆ ಅನುದಾನ ನೀಡಲಾಗಿತ್ತು. ಭೂಮಿ ಪೂಜೆಯಾದರೂ ಕಾಮಗಾರಿ ಯಾಕೆ ಮುಂದುವರೆಸಿಲ್ಲ. 85 ಲಕ್ಷ ವೆಚ್ಚದಲ್ಲಿ ವಿದ್ಯಾರ್ಥಿ ನಿಲಯ ನಿರ್ಮಿಸಿ ಸಿದ್ಧವಾಗಿದ್ದರೂ ಅದನ್ನು ಉದ್ಘಾಟಿಸಿ ವಿದ್ಯಾರ್ಥಿಗಳ ಬಳಕೆಗೆ ನೀಡಲಿಲ್ಲ ಏಕೆ ಎಂದು ಪ್ರಶ್ನಿಸಿದ ಅವರು ಅಶ್ವಿನ್ ಕುಮಾರ್ ಅವಧಿಯಲ್ಲಿ ಯಾವುದಾದರೂ ಒಂದು ದೊಡ್ಡ ಮಟ್ಟದ ಅಭಿವೃದ್ಧಿಯಾಗಿದೆಯೇ ತೋರಿಸಿ ಎಂದು ಸವಾಲೆಸದರು.

ಡಾ. ಮಹದೇವಪ್ಪನವರು ಗೆದ್ದಾಗ ಹೇಗಿರುತ್ತಾರೋ ಸೋತರೂ ಹಾಗೆಯೇ ಇದ್ದರು. ಈಗ ಗೆದ್ದಿದ್ದೇವೆ ಎಂದು ಯಾವುದೇ ಭಿನ್ನತೆ ತೋರಿಸಿಲ್ಲ, ತಾಲೂಕಿನ ಜನತೆಗೆ ಮಹದೇವಪ್ಪನವರ ಅಭಿವೃದ್ಧಿ ಸಾಮರ್ಥ್ಯ ಏನು ಎಂಬುದು ಗೊತ್ತಿದೆ. ಈ ಬಾರಿ ಜನರು ಅಭಿವೃದ್ಧಿಗಾಗಿ ಅವರನ್ನು ಗೆಲ್ಲಿಸಿದ್ದಾರೆ. ಈ ಬಾರಿ ನಿರೀಕ್ಷೆಗೂ ಮೀರಿ ಡಾ. ಮಹದೇವಪ್ಪನವರು ಕ್ಷೇತ್ರದಲ್ಲಿ ಅಭಿವೃದ್ಧಿ ಮಾಡಲಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಜಿಪಂ ಮಾಜಿ ಸದಸ್ಯ ಹೊನ್ನಾ ನಾಯಕ, ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ್, ಹಿಂದುಳಿದ ವರ್ಗಗಳ ಅಧ್ಯಕ್ಷ ಕೇತಹಳ್ಳಿ ಸಿದ್ದಶೆಟ್ಟಿ, ಗ್ರಾಪಂ ಸದಸ್ಯರಾದ ಕಲಿಯೂರು ಶಿವಣ್ಣ, ರವಿಶಂಕರ್ ಇದ್ದರು.

**44ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು**



ಸಿ.ಸ್ವಾಮಿ (ರೈಲ್ವೆ) & ವಿಜಯಲಕ್ಷ್ಮಿ

ಶುಭಕೋರುವವರು: ಕುಟುಂಬವರ್ಗದವರು

**34ನೇ ವರ್ಷದ ವಿವಾಹ ವಾರ್ಷಿಕೋತ್ಸವ**



ಶ್ರೀಮತಿ ರೋಹಿಣಿ & ಶ್ರೀ ಮಲ್ಲಿಕಾರ್ಜುನ್.ಆರ್

ಶುಭಕೋರುವವರು : ಮಕ್ಕಳು ಮತ್ತು ಮೊಮ್ಮಕ್ಕಳಾದ ಶ್ರೀ ರಕ್ಷ ಮತ್ತು ಮೌರ್ಯ ಚಕ್ರಿ ಹಾಗೂ ಕುಟುಂಬವರ್ಗದವರು, ಸ್ನೇಹಿತರು

**JNANASAROVARA**
INTERNATIONAL RESIDENTIAL SCHOOL MYSORE

**REQUIRES**

**COMPETENT FEMALE MONTESSORI TEACHERS**
The candidates are expected to have appropriate qualification.

**TRAINED POST–GRADUATE TEACHERS WITH B.ED TO TEACH**
- English, Science, Commerce, History, Civics, Art & Craft for all Grades.
- Highly proficient candidates having exposure to ICSE, ISC & PUC syllabus in Residential Schools will be preferred.

**FEMALE WARDEN & SWIMMING COACH**

**MALE MESS MANAGER** (Dining In-Charge)
- All enthusiasts are expected to have minimum experience of 3 to 5 years in relevant subjects and assignments with fluent Communicative English.
- Food and Accommodation will be provided for Residential staff.

Mail your resume immediately to **career@jirsm.com**
**Mobile Nos. : 9343299998 / 9379399998**
Website: **www.jirsm.com**
**ADMISSIONS OPEN FOR GRADES KG to XII & PUC**

**WANTED**

Required Female Candidates for Backend Job
Qualification: PU or Any Degree
Interested Candidates Can Contact and visit the address given below along with Resume

**WALK IN INTERVIEW:**
**18th,19th and 22nd May 2023**
**TIMING: 10.30AM to 1.00PM**

**CHECKMATE ASSET SERVICES PVT.LTD**
#2713/1, New No-3, 2nd Floor, Adipampa Road, VV Mohalla, Mysore - 570002

**CONTACT:- 97420 46165**

**JNANASAROVARA**
INTERNATIONAL RESIDENTIAL SCHOOL MYSORE

**WE ARE HIRING**

**PRINCIPAL**
Post Graduation in English having B.Ed with minimum 8 years of teaching experience

**HEADMISTRESS FOR PRIMARY DIVISION**
- The candidates are expected to have minimum administrative and teaching experience of 3 to 5 years with fluent Communicative English
- Food and Accommodation will be provided for Residential staff.

Mail your resume immediately to **career@jirsm.com**
**Mobile Nos. : 9343299998 / 9379399998**
Website: **www.jirsm.com**
**ADMISSIONS OPEN FOR GRADES KG to XII & PUC**

ಹಸಿರು ನಮ್ಮ ಉಸಿರು

ಮೈಸೂರು ಮಿತ್ರ 44

ಜಾಹೀರಾತಿಗಾಗಿ ಸಂಪರ್ಕಿಸಿ:
**Ph: 0821-2496522 / 23**
**Email: ad@mysurumithra.com**

**ಹಸು ಮಾರಾಟಕ್ಕಿದೆ**

5 ವರ್ಷ ವಯಸ್ಸಿನ ಹೆಚ್‌ಎಫ್ ಹಸು ಮತ್ತು ಕರು, ಸಂಪರ್ಕಿಸಿ, ವಿರಾಜಪೇಟೆ.

**9535456772**

**ಅಭಿನಂದನೆಗಳು**



ಮೈಸೂರು ಸದ್ವಿದ್ಯಾ ಕಾಲೇಜಿನ II PU, PCMCಯಲ್ಲಿ 600ಕ್ಕೆ 574 ಅಂಕವನ್ನು ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು ಇವರಿಗೆ ಅಭಿನಂದಿಸುವವರು ಕೇಬಲ್ ಬಾಬು, ಸುಮಾ, ರಾಧಿಕಾ ಶಂಕರ್, ಭಾರ್ಗವಿ ಅರ್ಜುನ್,

**ಸಿ.ಪಿ.ಕಾರ್ತಿಕ ಉಪಾದ್ರಿ**

**AURA PLY CLUB** 25 YEARS
**PLY / DOORS @ FACTORY RATES** BWP 710
**9901291267 / 9845426862**

**2ನೇ ವರ್ಷದ ಪುಣ್ಯಸ್ಮರಣೆ**




**ಚೆಲುವರಾಜು.ಪಿ**

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಕುಟುಂಬವರ್ಗದವರು ಹಾಗೂ ಬಂಧುಮಿತ್ರರು, ದಾಸನಕೊಪ್ಪಲು, ಮೈಸೂರು

**2ನೇ ವರ್ಷದ ಸವಿನೆನಪು**



**ಟಿ.ಕ್ಯಾತೂರು ಪೈಲ್ವಾನ್ ಹುಚ್ಚನಾಯಕ**

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷ ಕಳೆದರೂ ಸದಾ ನಿಮ್ಮ ನೆನಪು ಮನದಲ್ಲಿ ಸದಾ ಹಸಿರಾಗಿದೆ.

**JOB OPPORTUNITY**

**A leading Manufacturing Unit is looking for a qualified CA to join it's strong Finance Team at its corporate office:**

**Sr Executive Finance (CA)**
- A CA qualified professional with in-depth exposure and expertise in accounting standards.
- Ability to handle multiple priorities in a time-sensitive and dynamic environment.
- Work closely with counterparts in areas such as accounting, financial planning and analysis, tax, and other key analysts and managers throughout the group.
- Analysis of complex financial reports and records, making recommendations relative to reserves, assets, and expenditures.
- Minimum experience of 1-3 years post articleship.

**Apply to: hr4@sunpure.in**

ಮೈಸೂರು ಮಿತ್ರ 44
**ಓದುಗರ ಗಮನಕ್ಕೆ**


ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ವಧು–ವರರ ಅನ್ವೇಷಣೆ** ಕನ್ನಡ ಸ್ಮಾರ್ಥ ಬ್ರಾಹ್ಮಣ ಸಮುದಾಯದ ವಧು–ವರರ ಅಂತರ್ಜಾಲ ತಾಣ.


**http://www.hoysalakarnatakabrahmins.com**

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
ಸುಮ ಗೋಪಾಲಕೃಷ್ಣ, ದೂರವಾಣಿ : **9886908152**

**ಶ್ರೇಯಾ ಹಿಯರಿಂಗ್ ಕ್ಲಿನಿಕ್** Dr. Sathya Ranna's
**SHRÉYA HEARING CLINIC**



**Our Smart Clients Use Smart Hearing Aids**
Come Be part of our family
Free Test and Demo of SMART Hearing Aids
17 to 23 rd May FREE TEST and Attractive OFFERS
25ನೇ ವರ್ಷಾಚರಣೆಯ ಕೊಡುಗೆಗಳು



25 ANNIVERSARY 1997-2022
FOR YOU WITH YOU. GROWING TOGETHER FOR 25 YEARS

HOME VISITS 9945633115 *We believe in sound relationship...*

**# 72, Above Bhojayya Silks, D Urs Road, Mysuru - 570001**
**Ph.: 2422543/44**

ReSound GN Made for iPhone
Centers at Hyderabad, Mangalore and Mysuru
sathya@shreyahearingclinic.com
www.shreyahearingclinic.com
signia Life sounds brilliant.

**40ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು**

**ಶ್ರೀಮತಿ ಚಿಂತಾಮಣಿ, ಶ್ರೀ ಎಸ್.ಎನ್ ಮೂರ್ತಿ**
(PWD-ಪ್ರಥಮ ದರ್ಜೆ ಗುತ್ತಿಗೆದಾರರು)

ಶುಭಕೋರುವವರು: ಅಂಬಿಕಾ ಲೋಕೇಶ್, ಸಿ.ಜಿ.ಸೌಮ್ಯ, ಎಸ್.ಎಂ. ಜಗದೀಶ್, ಎಸ್.ಎಂ.ಸೌಮ್ಯ, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು, ಸಿಂಧುವಳ್ಳಿ



**rProcess is Hiring.....**
**Lead - Accounts & Finance**

MBA Finance / M. Com / Inter CA / Pursuing CA with min 4+ Years Experience in Finance & Accounts Handling, Working Knowledge on Payments & Receivables, GST & TDS, Generating Invoices & PO, ERP or Tally & Advance Excel.

Apply online or Walk-in: 11AM to 2PM on Thursday & Friday 18th & 19th May' 2023
Walk-in Venue: rProcess, Alanahalli, T N Pura Road, Mysuru - 570028. Contact: 99011 08886 / 76192 29411
Email Id: ravikumar.m@rprocess.in
For more details visit : www.rprocess.in

